ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 14

ಏಪ್ರಿಲ್ 03, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com



ಬಿಜೆಪಿ ಹಗರಣಗಳು ಮುಗಿಯದ ಕರ್ಮಕಾಂಡ



ಶ್ರಮಜೀವಿಗಳಿಗೆ ಸರ್ಕಾರದ ಮೋಸ ಪಿಂಚಣಿ ಯೋಜನೆ ವಿರುದ್ಧ ಅಂಗನವಾಡಿ ಕಾರ್ಯಕರ್ತೆಯರು

ಲಿಬಿಯಾ ಮೇಲೆ ಸಾರಿದೆ ಸಾಮ್ರಾಜ್ಯಶಾಹಿ ಅಕ್ರಮ ಯುದ್ಧ





ದಾರಿ ತೋರುತ್ತಿದೆ ಕೇರಳ

ಉರ್ದು ಸಾಹಿತ್ಯ ಅಕಾಡೆಮಿ ಬರ್ಖಾಸ್ತು: ಸರ್ಕಾರದ ಹುನ್ನಾರ

ವಿಕಿಲೀಕ್ಸ್: ಸಮಗ್ರ ತನಿಖೆ ಅಗತ್ಯ

ಫೈಜ್ ಅಹಮದ್ ಫೈಜ್ : ಕವಿ ಮತ್ತು ಕ್ರಾಂತಿಕಾರಿ

ಫೈಜ್ ಅಹಮದ್ ಫೈಜ್ ಒಬ್ಬ ಶ್ರೇಷ್ಠ ಕ್ರಾಂತಿಕಾರಿ ಕವಿ. ಬರೆದಂತೆ ಬದುಕಿದ ತತ್ವಬದ್ಧ ಹೋರಾಟಗಾರ. ಅವರ ಜನ್ಮ ಶತಮಾನೋತ್ಸವ ಆಚರಿಸುತ್ತಿರುವ ಹೊತ್ತಿನಲ್ಲಿ ಈ ಕ್ರಾಂತಿಕಾರಿಯ ಕುರಿತು ಒಂದು ಲೇಖನ.

■ ಅಮಾನುಲ್ಲಾಖಾನ್
ಕನ್ನಡಕ್ಕೆ : ಎಸ್.ಕೆ. ಗೀತಾ

ಜಗತ್ತಿನ ವಿವಿಧ ಭಾಗಗಳಲ್ಲಿ ಫೈಜ್ ಅಹಮದ್ ಫೈಜ್‌ರ ಜನ್ಮ ಶತಮಾನೋತ್ಸವ ಆಚರಿಸಲಾಗುತ್ತಿದೆ. ಫೈಜ್ ಈ ಉಪಖಂಡದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ದುಡಿಯುವ ಜನತೆಯ ಆಪ್ತಮಿತ್ರನಾಗಿದ್ದ ಫೈಜ್‌ರ ಕವನಗಳು ಬಡವರು ಮತ್ತು ದುಡಿಮೆಗಾರರಿಗೆ ಸದಾ ಸ್ಫೂರ್ತಿದಾಯಕ. ಫೈಜ್‌ರ ಕವನಗಳು ಜಗತ್ತಿನಾದ್ಯಂತ ಹಲವಾರು ಭಾಷೆಗಳಿಗೆ ತರ್ಜುಮೆ ಯಾಗಿವೆ.

ಫೈಜ್ 1911ರ ಫೆಬ್ರವರಿ 13 ರಂದು ಸಿಯಾಲ್‌ಕೋಟ್‌ನ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು. ಅವರು ಇಂಗ್ಲಿಷ್ ಮತ್ತು ಅರೆಬಿಕ್ ಎರಡೂ ಭಾಷೆಗಳಲ್ಲಿ ಎಂ.ಎ. ಓದಿದ್ದರು. ಗದ್ಯ ಮತ್ತು ಪದ್ಯಗಳೆರಡರಲ್ಲೂ ಅವರಿಗೆ ಸಮಾನ ಸಾಮರ್ಥ್ಯವಿತ್ತು. ಎಳೆಯ ವಯಸ್ಸಿನಿಂದಲೇ ಅವರು ಕವನಗಳನ್ನು ಬರೆಯುತ್ತಿದ್ದರು. ಅಲ್ಲಾಮ ಇಕ್ಬಾಲ್ ಅವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಪ್ರೋತ್ಸಾಹಿಸಿದರು. ದೇಶದ ಸ್ವಾತಂತ್ರ್ಯ ಹೋರಾಟದ ವೇಳೆಗೆ ಉರ್ದು ಅತ್ಯುನ್ನತ ಪಾತ್ರ ವಹಿಸಿತ್ತು. ಆದರೆ ಪ್ರಗತಿಶೀಲ ಬರಹಗಾರರ ಸಂಘ ರಚನೆಯಾಗುವ ಮೊದಲು ಬಹುತೇಕ ಬರವಣಿಗೆ ಪ್ರೇಮ ಮತ್ತು ಪ್ರೇಮಿಗಳ ಕುರಿತಾಗಿಯೇ ಬಳಕೆಯಾಗುತ್ತಿದ್ದು, ಸಮಾಜದ ಸಮಸ್ಯೆಯ ಕುರಿತಾಗಿ ಇದ್ದದ್ದು ಕಡಿಮೆ. ಫೈಜ್‌ರ ಆರಂಭದ ಬರಹಗಳೂ ಆ ವಯಸ್ಸಿಗೆ ಸಹಜವಾಗಿದ್ದ ಪ್ರೀತಿ, ಪ್ರೇಮಗಳ ಕುರಿತಾದದ್ದೇ ಆಗಿತ್ತು.


ಭಾರತೀಯ ಪ್ರಗತಿಶೀಲ ಬರಹಗಾರರ ಸಂಘದ ರಚನೆಯಾಗಿದ್ದು ಬಹುತೇಕ ಬರಹಗಾರರ ಸಂಪೂರ್ಣ ಸಾಮರ್ಥ್ಯವನ್ನು ಹೊರತರಲು ಸಹಕಾರಿಯಾಯ್ತು. ಈ ಸಂಘದ ಮುಖ್ಯ ಉದ್ದೇಶವೇ ಕಲೆ ಮತ್ತು ಸಾಹಿತ್ಯವನ್ನು ಕೇವಲ ಶ್ರೀಮಂತರ ಸ್ವತ್ತಾಗಿಸದೇ ಜನಸಾಮಾನ್ಯರತ್ತ ಕೊಂಡೊಯ್ಯುವುದಾಗಿತ್ತು. ಸುಖಕರವಾದ ಹೊಸ ಸಮಾಜವೊಂದರ ನಿರ್ಮಾಣಕ್ಕೆ ಕಲಾವಿದರು ಕೊಡುಗೆ ನೀಡಬೇಕೆಂಬುದೇ ಅದರ ಮೂಲ ಉದ್ದೇಶವಾಗಿತ್ತು. ಪಂಜಾಬ್‌ಲ್ಲಿ ಈ ಸಂಘವನ್ನಾರಂಭಿಸಿದವರಲ್ಲಿ ಫೈಜ್ ಕೂಡ ಒಬ್ಬರು. ಈ ಸಂದರ್ಭದಲ್ಲೇ ಫೈಜ್‌ರ ಬರವಣಿಗೆಯ ಹರವು ವಿಸ್ತರಿಸತೊಡಗಿದ್ದು ಈ ಅವಧಿಯನ್ನು ವಿವರಿಸುತ್ತ ಫೈಜ್‌ರ ಸಮಕಾಲೀನ ಎಂ.ಎಸ್.ರಶೀದ್ ಹೇಳುತ್ತಾರೆ. ಫೈಜ್‌ರ ಬರವಣಿಗೆ ಏಕಾಂಗಿ ಪ್ರೇಮಿಯೊಬ್ಬನ ನೋವಿಗೆ ಬದಲು ಇಡೀ ಮನುಕುಲದ ನೋವಿಗೆ ಧ್ವನಿಯಾಗಲು ಫೈಜ್‌ರ ಬರವಣಿಗೆ ಹೊಸತೊಂದು ಸಂವೇದನೆಗೆ ತೆರೆದುಕೊಳ್ಳಬೇಕಾಯ್ತು. ಈ ನಿಲುವನ್ನು ಫೈಜ್ ಈ ಕೆಳಕಂಡ ಸಾಲುಗಳಲ್ಲಿ ಸಮರ್ಥವಾಗಿ ಹೊರತಂದಿದ್ದಾರೆ.

" ...ಈ ಜಗದಲ್ಲಿ ಪ್ರೇಮಿಗಳ ನೋವಿಗಿಂತ ದೊಡ್ಡ ನೋವಿದೆ ; ಪ್ರೇಮಿಗಳ ಮಿಲನಕ್ಕಿಂತ ಹಿರಿದಾದ ಹಿತವಿದೆ.
ಓ ಪ್ರಿಯೆ ಕೇಳದಿರು ಇನ್ನೆಂದೂ ಆ ಹಿಂದಿನ ಪ್ರೀತಿಯನ್ನು ...

ವ್ಯಕ್ತಿಯೊಬ್ಬ ಈ ಜಗತ್ತಿನಿಂದ ಹೊರತಾಗಿರಲಾರ. ವ್ಯಕ್ತಿಯೊಬ್ಬನ ನಿಜವಾದ ಆಳ ಇತರರ ನೋವಿನೊಡನೆ ಆತ ಬೆಳೆಸಿಕೊಂಡಿರುವ ಭಾವನಾತ್ಮಕ ಮತ್ತು ಮಾನಸಿಕ ಸಂಬಂಧದಿಂದ ಹೊರಹೊಮ್ಮುತ್ತದೆ. ಪ್ರೀತಿಯಿಂದ ಹೊರಬಂದ ನೋವು ಮತ್ತು ಬದುಕಿನಿಂದುಂಟಾಗುವ ನೋವುಗಳೆರಡೂ ಒಂದೇ ಭಾವದ ಅಭಿವ್ಯಕ್ತಿ ಎಂಬುದು ಫೈಜ್‌ರ ಸ್ಪಷ್ಟ ನಿಲುವಾಗಿತ್ತು. ಬಂಡವಾಳಶಾಹಿ ವ್ಯವಸ್ಥೆಯ ಬುನಾದಿಯಿರುವುದೇ ಶೋಷಣೆಯಲ್ಲಿ ಮತ್ತು ಕೇವಲ ದುಡಿಯುವ ವರ್ಗ ಈ ವ್ಯವಸ್ಥೆಯನ್ನು ಬದಲಿಸಬಲ್ಲ ಶಕ್ತಿ ಎಂಬುದು ಫೈಜ್‌ರ ನಂಬುಗೆಯಾಗಿತ್ತು. ಸಹಜವಾಗಿಯೇ ಅವರ ರಚನೆಗಳು ದುಡಿಯುವ ವರ್ಗಕ್ಕೆ ಪ್ರೇರೇಪಣೆ ನೀಡುತ್ತಿತ್ತು. ಅವರ ಕವನ ತರಾನ ದುಡಿಯುವ ವರ್ಗದ ರಾಷ್ಟ್ರಗೀತೆಯಾಗಿದೆ. ಈ ಕವನದಲ್ಲಿ ಅವರು ಶೋಷಣೆಯಿರದ ಸಮಾಜವನ್ನು ಸೃಷ್ಟಿಸುವವರೆಗೆ ದುಡಿಯುವ ವರ್ಗ ತನ್ನ ಹೋರಾಟವನ್ನು ಮುಂದುವರೆಸುವಂತೆ ಕರೆ ನೀಡಿದ್ದಾರೆ.

" . .. ಎದ್ದೇಳಿ ಶ್ರಮಿಕರೆ,
ಸಿಂಹಾಸನವುರುಳಿ, ಕಿರೀಟ ಚೂರಾಗುವ ಸಮಯ ಹತ್ತಿರವಾಗಿದೆ. ತ್ಯಾಗದಿಂದ ಮುನ್ನುಗ್ಗಿ, ನಿಲ್ಲದೇ ಮುನ್ನುಗ್ಗಿ, ಗುರಿ ತಲುಪಿದಾಗ ಮಾತ್ರ ನಿಲ್ಲುವವರು ನಾವು. ..."

ಮಾನವನ ನೋವುಗಳಿಗೆಲ್ಲ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ. ಶ್ರಮಿಕರ ಹೋರಾಟವೊಂದೇ



ಈ ಜಗತ್ತನ್ನು ಸಹ್ಯವಾಗಿಸಬಲ್ಲದು ಎಂದು ಬಹಳವಾಗಿ ನಂಬಿದ್ದವರು ಫೈಜ್ ತಮ್ಮ ಪ್ರಸಿದ್ಧ ಹಂದೇಖೇಂಗೆ ಪದ್ಯದಲ್ಲಿ ಈ ಅನಿವಾರ್ಯ ಬದಲಾವನೆಯನ್ನವರು ವಿವರಿಸಿದ್ದಾರೆ.

... ನೋಡೆ ನೋಡುತ್ತೇವೆ ನಾವು ಆ ದಿನವನ್ನು ನಮ್ಮ ಭರವಸೆಯ ಆ ದಿನವನ್ನು ನಾವೂ ನೊಡುತ್ತೇವೆ.
ಬದುಕಿನ ಭಿತ್ತಿಯ ಮೇಲೆ ಕೆತ್ತಿರುವ ಆ ದಿನವನ್ನು ನಾವೂ ನೋಡುತ್ತೇವೆ...."

ಜಗತ್ತಿನ ಮಾರುಕಟ್ಟೆಯನ್ನು ತಮ್ಮ ಮುಷ್ಟಿಯಲ್ಲೇ ಇಟ್ಟುಕೊಳ್ಳಬೇಕೆಂಬ ಸಾಮ್ರಾಜ್ಯಶಾಹಿಗಳ ಹಣಾಹಣಿ ಎರಡನೆಯ ಮಹಾಯುದ್ಧಕ್ಕೆ ಕಾರಣವಾಯ್ತು. ಜರ್ಮನಿ, ಸೋವಿಯತ್ ರಷ್ಯಾದ ಮೇಲೆ ಯುದ್ಧ ಸಾರಿದ್ದರಿಂದ ಅದು ಫ್ಯಾಸಿಸ್ಟ್ ಶಕ್ತಿಯ ವಿರುದ್ಧದ ಯುದ್ಧವಾಗಿ ಮಾರ್ಪಟ್ಟಿತು. ಫ್ಯಾಸಿಸ್ಟ್ ಶಕ್ತಿಯ ವಿರುದ್ಧದ ಯುದ್ಧವಾಗಿ ಮಾರ್ಪಟ್ಟಿತು. ಫ್ಯಾಸಿಸಂ ಇಡೀ ಮನುಕುಲದ ಎದುರಿಗಿದ್ದ ಬಹುದೊಡ್ಡ ಸವಾಲು. ಅದನ್ನು ಸೋಲಿಸುವುದು ಬಹುಮುಖ್ಯವಾಗಿತ್ತು. ವಿಶ್ವದ ಎಲ್ಲ ಪ್ರಗತಿಶೀಲ ಶಕ್ತಿಗಳು ಇದರ ವಿರುದ್ಧ ಒಂದಾಗಿದ್ದವು. ಫೈಜ್ ಈ ಅವಧಿಯಲ್ಲಿ ಬ್ರಿಟಿಷ್ ಸೇನೆ ಸೇರಿ ಲೆಫ್ಟಿನೆಂಟ್ ಕರ್ನಲ್ ಪದವಿಗೇರಿದರು. ಯುದ್ಧ ಮುಗಿದ ಸ್ವಲ್ಪ ಸಮಯಕ್ಕೆ ಅವರು ಸೇನೆಗೆ ರಾಜೀನಾಮೆ ನೀಡಿದರು.

1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಯ್ತು. ಪ್ರಗತಿಪರ ಬರಹಗಾರರ ಸಂಘದ ಇತರ ಗೆಳೆಯರಂತೆಯೇ ಭಾರತಕ್ಕೆ ಬ್ರಿಟಿಷರಿಂದ ಮುಕ್ತಿಯೆಂದರೆ ದೇಶದ ದುಡಿಯುವ ಜನತೆಗೆ ಹಸಿವು ಮತ್ತು ನೋವಿನಿಂದ ಮುಕ್ತಿಯೆಂದು ಫೈಜ್ ಭಾವಿಸಿದ್ದರು. ದುರಾದೃಷ್ಟವಶಾತ್ ಸ್ವಾತಂತ್ರ್ಯಕ್ಕೆ ಬಹುದೊಡ್ಡ ಬೆಲೆ ತೆರಬೇಕಾಯ್ತು. ದೇಶ ಇಬ್ಭಾಗವಾಗಿ ಕೋಮುವಾದದ ಕಾಳ್ಗಿಚ್ಚು ಎಲ್ಲೆಡೆ ಹರಡಿತ್ತು. ಮಿಗಿಲಾಗಿ ಸ್ವಾತಂತ್ರ್ಯವೆಂದರೆ ಬ್ರಿಟಿಷರಿಂದ ದೊಡ್ಡ ದೊಡ್ಡ ಬಂಡವಾಳಗಾರರು ಮತ್ತು ಭೂಮಾಲೀಕರಿಗೆ ಅಧಿಕಾರದ ಹಸ್ತಾಂತರವಾಗಿತ್ತು. ಇದು ಫೈಜ್ ಮತ್ತವರ ಸಹಚರರನ್ನು ಭ್ರಮನಿರಸನಗೊಳಿಸಿತ್ತು. ಆ ಆಶಾಭಂಗವನ್ನವರು ತಮ್ಮ 'ಸುಬಹ ಈ ಆಜಾದಿ'ಯಲ್ಲಿ ಹೀಗೆ ಬರೆದಿದ್ದಾರೆ. "ಪ್ರಭೆಯಿಲ್ಲದ ಈ ಬೆಳಕು, ಈ ನಿಸ್ತೇಜ ಮುಂಜಾವು ಯಾವ ಬೆಳಗಿಗಾಗಿ ನಾವು ಕಾದಿದ್ದೆವೊ ಆ ಬೆಳಗು ಇದಾಗಿರಲಿಲ್ಲ." ಸ್ವಾತಂತ್ರ್ಯವೆಂದರೆ ಘನತೆಯ ಬದುಕಿಗಾಗಿ ಶ್ರಮಿಕರು ನಡೆಸುವ ಹೋರಾಟದ ಕೊನೆಯಾಗಿರಲಿಲ್ಲ ಎಂಬುದು ಫೈಜ್‌ಗೆ ಮನವರಿಕೆಯಾಗಿತ್ತು. ಅಂತಹ ಬದುಕು ಸಿಗುವವರೆಗೆ ತಮ್ಮ ಹೋರಾಟ ಮುಂದುವರೆಸಬೇಕೆಂದು ಅದೇ ಪದ್ಯದಲ್ಲಿ ಅವರು ಕರೆ ನೀಡಿದ್ದರು.

ರಾತ್ರಿಕ ತೂಕ ಇನ್ನೂ ನಮ್ಮ ಹೆಗಲಮೇಲಿದೆ.
ನಮ್ಮ ದೃಷ್ಟಿ, ನಮ್ಮ ಹೃದಯ ಇನ್ನೂ ಮುಕ್ತವಾಗಿಲ್ಲ.
ಮುನ್ನುಗ್ಗಿ ಇನ್ನೂ ನಮ್ಮ ಗುರಿ ತಲುಪಲಾಗಿಲ್ಲ.

ಫೈಜ್ ಪಾಕಿಸ್ತಾನದಲ್ಲಿ ಅಸಾಧ್ಯ ನೋವನ್ನನುಭವಿಸಬೇಕಾಯ್ತು. ಪಾಕಿಸ್ತಾನದ ದುಡಿಯುವ ವರ್ಗವನ್ನು ಸಂಘಟಿಸಲು ಅವರು ಪ್ರಯತ್ನಿಸಿದರು. ಪಾಕಿಸ್ತಾನ್ ವರ್ಕರ್ಸ್ ಫೌಂಡೇಶನ್‌ಗೆ ಅವರು ಉಪಾಧ್ಯಕ್ಷರಾಗಿದ್ದರು. ಪಾಕಿಸ್ತಾನ್ ಟೈಮ್ಸ್ ಸೇರಿದಂತೆ ಹಲವಾರು ಪತ್ರಿಕೆಗಳಿಗೆ ಅವರು ಸಂಪಾದಕರಾಗಿ ದುಡಿದಿದ್ದಾರೆ. ಬಡ ಮತ್ತು ಶೋಷಿತರ ಕುರಿತಾಗಿ ಅವರು ಹಲವಾರು ಲೇಖನ ಮತ್ತು ಸಂಪಾದಕೀಯಗಳನ್ನು ಬರೆದಿದ್ದಾರೆ. ಫೈಜ್‌ರ ಈ ಚಟುವಟಿಕೆಗಳ ಬಗ್ಗೆ ಪಾಕಿಸ್ತಾನದ ಆಳುವ ವರ್ಗ ಅಸಂತೃಪ್ತವಾಗಿತ್ತು. ರಾವಲ್ಪಿಂಡಿ ಸಂಚಿನ ಆರೋಪದಲ್ಲಿ ಅವರನ್ನು 1951 ರಲ್ಲಿ ಬಂಧಿಸಲಾಗಿತ್ತು. ಪಾಕಿಸ್ತಾನ್ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಯವರಾಗಿದ್ದ ಸಜ್ಜದ ಜಾಹೀರ್ ಇನ್ನಿತರರೊಡನೆ ಸರ್ಕಾರವನ್ನು ಪದಚ್ಯುತಗೊಳಿಸಲು ಪ್ರಯತ್ನಿಸಿದರೆಂಬ ಆರೋಪದ ಮೇಲೆ ಅವರನ್ನು

ಪುಟ 10 ಕ್ಕೆ

ಸಂಪಾದಕೀಯ

ಉರ್ದು ಅಕಾಡೆಮಿ ಉಳಿಸಬೇಕು

1978 ರಿಂದ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದ ಕರ್ನಾಟಕ ಉರ್ದು ಸಾಹಿತ್ಯ ಅಕಾಡೆಮಿಯನ್ನು ಬರ್ಖಾಸ್ತುಗೊಳಿಸಲು ನಿರ್ಧರಿಸಿರುವ ಕರ್ನಾಟಕ ಸರ್ಕಾರದ ಕ್ರಮ ಖಂಡನೀಯವಾಗಿದೆ. ಅದರ ಅಧ್ಯಕ್ಷರು ಶಿಷ್ಟಾಚಾರ ಪಾಲಿಸಿಲ್ಲ ಮತ್ತು ಸಿಬ್ಬಂದಿಗಳಿಗೆ ಕಿರುಕುಳ ನೀಡಿದ್ದಾರೆ ಎಂಬ ಕಾರಣ ಮುಂದೊಡ್ಡಿರುವುದು ಅಕಾಡೆಮಿಯನ್ನು ರದ್ದುಗೊಳಿಸುವ ಸರ್ಕಾರದ ದುರುದ್ದೇಶಕ್ಕೆ ನೀಡಿರುವ ನೆಪ ಅಷ್ಟೆ. 2008ರ ಸೆಪ್ಟೆಂಬರ್‌ನಲ್ಲಿ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಪ್ರಸಿದ್ಧ ಸಾಹಿತಿ ಖಲೀಲ್ ಉರ್ ರೆಹಮಾನ್‌ರವರು ಹಾಗೊಂದು ವೇಳೆ ಆರೋಪಗಳನ್ನು ಎದುರಿಸಿದ್ದಲ್ಲಿ ಅವುಗಳ ಸತ್ಯಾಸತ್ಯತೆ ತಿಳಿಯಲು ವಿಚಾರಣೆ ನಡೆಸುವುದು ಹಾಗೂ ಅಧ್ಯಕ್ಷರಿಂದ ವಿವರಣೆಯನ್ನು ಅಭಿಪ್ರಾಯ ಕೇಳಬೇಕಾಗಿತ್ತು. ಅದ್ಯಾವುದನ್ನೂ ಸರ್ಕಾರ ಮಾಡಿಲ್ಲ ಎಂಬುದೇ ಅದರ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟ ಸದಸ್ಯರು ನಡೆಸಿರುವ ಭಾರೀ ಹಗರಣ ಭ್ರಷ್ಟಾಚಾರಗಳ ಬಗ್ಗೆ ಕಂತೆಗಟ್ಟಲೆ ದಾಖಲೆಗಳಿದ್ದರೂ, ರಾಜ್ಯಪಾಲರು, ನ್ಯಾಯಾಲಯಗಳು ಮೇಲ್ನೋಟದಲ್ಲೇ ಆರೋಪಗಳಿವೆಯೆಂದು ಕಾನೂನಿನ ಪ್ರಕ್ರಿಯೆ ಮುಂದುವರಿಸುತ್ತಿರುವಾಗ ರಾಜೀನಾಮೆ ಕೊಡದೇ ಭಂಡತನದಿಂದ ಉಳಿದಿರುವಾಗ, ಕೇವಲ ಏಕಮುಖ ಆರೋಪಗಳನ್ನು ಹೊರಿಸಿ ಉರ್ದು ಅಕಾಡೆಮಿಯನ್ನು ಬರ್ಖಾಸ್ತು ಮಾಡಲು ಸರ್ಕಾರಕ್ಕೆ ಯಾವುದೇ ನೈತಿಕತೆ ಇಲ್ಲ. ಎಲ್ಲಾ ಅಕಾಡೆಮಿಗಳೂ ಕೆಲಸ ಮಾಡುತ್ತಿರುವಾಗ ಉರ್ದು ಅಕಾಡೆಮಿಯೊಂದನ್ನೇ ಗುರಿಯಾಗಿರಿಸಿಕೊಂಡಿರುವಲ್ಲಿ ಆರ್.ಎಸ್.ಎಸ್.ನ ಉರ್ದು ವಿರೋಧಿಯಾದ ನಿಲುವನ್ನೇ ಬಿಜೆಪಿ ಸರ್ಕಾರದ ಮೂಲಕವಾಗಿ ಜಾರಿಗೊಳಿಸ ಲಾಗುತ್ತಿರುವುದರಲ್ಲಿ ಅನುಮಾನವೇ ಇಲ್ಲ.

ಉರ್ದು ಭಾರತೀಯ ಭಾಷೆಯಾಗಿದೆ. ಅದರಲ್ಲೂ ಕರ್ನಾಟಕದಲ್ಲಿ ಅದು ಅತ್ಯಂತ ಕಾವ್ಯಮಯ ಫಲವಂತಿಕೆಯಿಂದ ಸಶಕ್ತವಾಗಿ ಬೆಳೆದಿದೆ. ಹಿಂದು, ಮುಸ್ಲಿಮರು ಅಲ್ಲದೇ ವಿವಿಧ ಜಾತಿಗಳ ಜನತೆ ಒಂದು ಕೋಟಿಗೂ ಮೀರಿ ಉರ್ದು ಭಾಷೆಯನ್ನು ಮಾತನಾಡುತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿ ವೀರೇಂದ್ರಪಾಟೀಲ, ಧರ್ಮಸಿಂಗ್ ಇತರರನ್ನು ಒಳಗೊಂಡು ಇಂದಿಗೂ ಇರುವ ಹಲವು ಸಚಿವರು, ಮಹನೀಯರು ಉರ್ದು ಭಾಷೆಯಲ್ಲಿ ಶಿಕ್ಷಣ ಪಡೆದದ್ದಲ್ಲದೆ ಸುಲಲಿತ ಭಾಷಿಕರೂ ಕೂಡ. ಉರ್ದುವಿನಲ್ಲಿ ಮಹತ್ವದ ಕೃತಿಗಳು ಬಂದಿವೆ, ಅನುವಾದಗೊಂಡಿವೆ, ಪುರಸ್ಕರಿಸಲ್ಪಟ್ಟಿವೆ. ಆದರೆ ಸಂಘ ಪರಿವಾರವು ಉರ್ದು ಭಾಷೆಯನ್ನು ಕೇವಲ ಮುಸ್ಲಿಂ ಜನಾಂಗದವರ ಭಾಷೆಯೆಂದು ಸದಾ ಆರೋಪಿಸುತ್ತಾ ಕತ್ತಿ ಝಳಪಿಸುತ್ತಿದೆ. ಅಂತಹ ಸಮೀಕರಣವೇ 'ಹಿಂದುತ್ವ'ದ ವಿಭಜನಾಕಾರಿ ಅಜೆಂಡಾದ ಭಾಗವೇ ಆಗಿದೆ. ಇಂತಹ ಅನ್ಯಭಾಷಾ ದ್ವೇಷ ಎಲ್ಲಾ ಪ್ರಾದೇಶಿಕ ಭಾಷೆಗಳ ಮೇಲೂ ಇದ್ದು ಪ್ರಜಾಪ್ರಭುತ್ವ ವಿರೋಧಿ ಫ್ಯಾಸಿಸ್ಟ್ ಧೋರಣೆಯಾಗಿದೆ. ಈಗಲೂ ಕನ್ನಡ, ಬ್ಯಾರಿ, ತುಳು ಇತ್ಯಾದಿ ಭಾಷೆಗಳೊಂದಿಗೆ ಅನನ್ಯ ಕೊಡು, ಕೊಳ್ಳುವಿಕೆಯಿಂದ ಬೆಳೆಯುತ್ತಿರುವ ಭಾಷೆಗಳ ನಂಟನ್ನು ಮುರಿದು ಅದು ಸೊರಗಿಹೋಗುವಂತೆ ಮೂಲೆಗುಂಪಾಗಿಸುವ ಗುಪ್ತ ಅಜೆಂಡಾದ ಭಾಗವೇ ಸರ್ಕಾರದ ಪ್ರಯತ್ನವಾಗಿದೆ.

ಸಂಘ ಪರಿವಾರದ ಈ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳನ್ನು ಎಲ್ಲರೂ ತೀವ್ರವಾಗಿ ಪ್ರತಿಭಟಿಸಬೇಕು, ಭಾಷಾ ಸಾಮರಸ್ಯ, ಅಸ್ತಿತ್ವವನ್ನು ಉಳಿಸಬೇಕು. ಸಂಸ್ಕೃತ, ಹಿಂದಿ (ಹಿಂದಿ, ಹಿಂದು, ಹಿಂದುತ್ವ) ಆರಾಧಕರಾಗಿರುವ ಈ ಪರಿವಾರ ಕನ್ನಡ ಭಾಷೆಯ ಮೇಲೆ ಎರಗುವ ದಿನಗಳೂ ದೂರವಿಲ್ಲ ಎಂಬುದನ್ನು ಅರಿಯಬೇಕು.

ಆದ್ದರಿಂದ ಉರ್ದು ಸಾಹಿತ್ಯ ಅಕಾಡೆಮಿ ಹಾಗೂ ಬ್ಯಾರಿ ಸಾಹಿತ್ಯ ಅಕಾಡೆಮಿಗಳನ್ನು ಬರ್ಖಾಸ್ತಗೊಳಿಸುವ ಮತ್ತು ಅದನ್ನು ಅಲ್ಪಸಂಖ್ಯಾತ ಇಲಾಖೆಗೆ ಸೇರಿಸುವ ಪ್ರಸ್ತಾಪವನ್ನು ಸರ್ಕಾರ ತಕ್ಷಣವೇ ಕೈಬಿಡಬೇಕು.

ಭಂಡತನಕ್ಕೂ ಮಿತಿಯಿಲ್ಲವೇ ?


ಮುಖ್ಯಮಂತ್ರಿ ಯಡ್ಡಿಯೂರಪ್ಪ ಹಾಗೂ ಕುಟುಂಬದ ಸದಸ್ಯರು ಭಾಗವಹಿಸಿರುವ ಭ್ರಷ್ಟಾಚಾರ ಹಗರಣಗಳ ಕುರಿತು ಮೊಕದ್ದಮೆ ದಾಲಿಸುವ ವಿಷಯದಲ್ಲಿ (ಗುರುವಾರ 24) ಹೆಚ್ಚಿನ ಮಾಹಿತಿ ಸಂಗ್ರಹಿಸಲು ಲೋಕಾಯುಕ್ತ ಪೋಲಿಸರಿಗೆ ಸೂಚಿಸುವ ಮೂಲಕ ನ್ಯಾಯಾಲಯವು ಚಾರ್ಜ್ ಸೀಟ್ ಹಾಕುವುದು ಒಳಗೊಂಡು ಇಡೀ ಪ್ರಕರಣದ ಪ್ರಕ್ರಿಯೆಗೆ ಚಾಲನೆ ನೀಡಿದೆ. ಈ ತಿರ್ಮಾನ ಈ ಕೂಡಲೇ ಮುಖ್ಯಮಂತ್ರಿಯವರ ಸ್ಥಾನದ ಮೇಲೆ ಅಷ್ಟು ಗಂಭೀರ ಪರಿಣಾಮ ಬೀರದಿದ್ದರೂ ಮುಂದೆ ದೂರುಗಳ ಖಚಿತತೆ ಅನುಸರಿಸಿ ಚಾರ್ಜ್ ಶೀಟ್ ಹಾಕುವ ಪ್ರಕ್ರಿಯೇಗೆ ಚಾಲನೆ ನೀಡಿದಂತಾಗಿದೆ. ಮೇಲ್ ನೋಟದಲ್ಲಿ ಮೊಕದ್ದಮೆಯಲ್ಲಿ ಸತ್ಯಾಂಶವಿರುವುದನ್ನೂ ನ್ಯಾಯಲಯವು ಒಂದು ರೀತಿ ದೃಡೀಕರಿಸಿದೆ. ಆದರೆ ಸರ್ವ ರೀತಿಯಿಂದಲೂ ಭಂಡತನ ತೋರುತ್ತಿರುವ ಯಡ್ಡಿಯೂರಪ್ಪನವರಿಗೆ ಮೇ 4 ರವರೆಗೂ ಕಾಲ ಹಾಕುವ ಅವಕಾಶವೆಂದೇ ಭಾವಿಸಿರುವುದೇ ನಾಚಿಕೆಗೇಡು. ಸಾರ್ವಜನಿಕ ಸಂವೇದನೆ, ನೈತಿಕತೆ ಎಂಬುದೇನಾದರೂ ಇದ್ದಿದ್ದರೆ ಇಷ್ಟೊತ್ತಿಗೆ ಯಾವಾಗಲೋ ರಾಜೀನಾಮೆ ಕೊಟ್ಟು ಇಡೀ ಸರ್ಕಾರ ಹೊಸದಾಗಿ ಜನಾದೇಶ ಪಡೆಯಲು ಮುಂದಾಗಬೇಕಿತ್ತು. ಆದರೆ ಪ್ರಜಾಪ್ರಭುತ್ವದ ವಿಧಿ ವಿಧಾನಗಳ ಅವಕಾಶಗಳನ್ನು ದುರುಪಯೋಗ ಮಾಡಿಕೊಳ್ಳುತ್ತ ಅಧಿಕಾರದಲ್ಲಿ ಮುಂದುವರಿದಿದ್ದಾರೆ. ಯಡಿಯೂರಪ್ಪ ತೊಲಗಬೇಕು ಎಂಬ ಆಗ್ರಹ ಕೇವಲ ವಿರೋಧ ಪಕ್ಷಗಳಿಂದ ಮಾತ್ರವಲ್ಲ ಸ್ವಂತ ಅವರ ಪಕ್ಷದಲ್ಲಿ ಹಾಗೂ ಸಂಪುಟಗಳೊಳಗಿನಿಂದಲೂ ಪ್ರಬಲವಾಗಿ ಕೇಳುತ್ತಿದೆ. ಹೀಗಿರುವಾಗ ಹಗರಣಗಳ ಸತ್ಯಾಸತ್ಯತೆಗೆ ಇನ್ನೆಂತಹ ಪುರಾವೆಗಳು ಬೇಕು?. ಈಗ ಪಕ್ಷದೊಳಗೆ ಎದ್ದಿರುವ ಭಿನ್ನಮತದ ಒಂದು ನೆಪಕ್ಕೆ ಕಾರಣವಾಗಿರುವ 'ಪ್ರೇರಣಾ ಟ್ರಸ್ಟ್'ನ ಹಗರಣ ಖಾತ್ರಿಯಿರುವುದರಿಂದಲೇ ಪಕ್ಷಾಧ್ಯಕ್ಷರನ್ನೊಳಗೊಂಡು ಅನಂತಕುಮಾರ ರಂತಹ

ಪುಟ 4 ಕ್ಕೆ

ಗೆಲುವಿಗಾಗಿ ಕಸರತ್ತು

ಮೂರು ಕ್ಷೇತ್ರಗಳ ಉಪಚುನಾವಣಾ ಕಣ ಸ್ಪರ್ಧಾಳುಗಳು ಈಗ ನಿಚ್ಚಳ. ಬಿಜೆಪಿಯ ಆಪರೇಷನ್ ಕಮಲದಿಂದ ತೆರವಾದ ಜಗಳೂರು, ಚನ್ನಪಟ್ಟಣ ಮತ್ತು ಬಂಗಾರಪೇಟೆ ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷಗಳು ಸ್ಪರ್ಧಿಸಿವೆ. ಹೀಗಾಗಿ ಚುನಾವಣಾ ಹೋರಾಟ ತ್ರಿಕೋನ ಸ್ಪರ್ಧೆಯಾಗಿವೆ.

ಇಂತಹ ಉಪ ಚುನಾವಣೆಗಳು ಸಾಮಾನ್ಯವಾಗಿ ರಾಜ್ಯದ ರಾಜಕಾರಣದ ಮೇಲೆ ಭಾರೀ ಗಂಭೀರವಾದ ಪರಿಣಾಮಗಳನ್ನುಂಟು ಮಾಡದಿದ್ದರೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮುಖ್ಯಮಂತ್ರಿಗಳೂ ಒಳಗೊಂಡ ಬಾರೀ ಹಗರಣಗಳು, ಮುಖ್ಯಮಂತ್ರಿ ಪದಚ್ಯುತಿಗಾಗಿ ಒಳಜಗಳ, ಜನತೆಯತ್ತ ಸರ್ಕಾರದ ಕಡುನಿರ್ಲಕ್ಷ್ಯ, ಮಧ್ಯಂತರ ಚುನಾವಣೆಗಳ ನಿರೀಕ್ಷೆ ಇವೆಲ್ಲಾ ಸೇರಿರುವುದರಿಂದ ಉಪಚುನಾವಣೆಯಲ್ಲಿ ಗೆಲುವ ಸೋಲುಗಳು ಸಹ ಭವಿಷ್ಯದ ದೃಷ್ಟಿಯಲ್ಲಿ ಜನ ಸಾಮಾನ್ಯರ ಮೇಲೆ ಪರಿಣಾಮ ಬೀರುತ್ತವೆ. ಮುಂಬರಬಹುದಾದ ಚುನಾವಣಾ ನಿರೀಕ್ಷೆಯಲ್ಲಿರುವ ಪ್ರತಿ ಪಕ್ಷಗಳೂ ಸಹ ಇದನ್ನು ಬಲಾಬಲದ ಮನೋಭೂಮಿಕೆ ಸಿದ್ಧಗೊಳಿಸುವುದೆಂದೇ ತೀವ್ರ ಪೈಪೋಟಿಗೆ ಇಳಿಯಲಿವೆ.



ಬಿಜೆಪಿ ರಾಜ್ಯಸರ್ಕಾರ ಇಷ್ಟೆಲ್ಲಾ ಹಗರಣ ಆವಾಂತರ, ಕಿತ್ತಾಟಗಳಲ್ಲಿ ನಿರತವಾಗಿದ್ದು ಜನತೆಯಲ್ಲಿ ಅತೃಪ್ತಿ ಉಂಟು ಮಾಡಿದ್ದರೂ ಕಳೆದ ಚುನಾವಣೆಗಳಲ್ಲಿ ಅದು ಬಿಜೆಪಿ ವಿರುದ್ಧ ಪೂರ್ಣವಾಗಿ ತಿರುಗಿಲ್ಲ. ಅಧಿಕೃತ ವಿರೋಧ ಪಕ್ಷವಾಗಿರುವ ಕಾಂಗ್ರೆಸ್‌ಗಂತೂ ಇದು ಲಾಭವಾಗಲಿಲ್ಲ, ಬಳಸಿಕೊಳ್ಳಲಿಲ್ಲ. ವಿರೋಧ ಪಕ್ಷವಾಗಿದ್ದು ರಾಜಕೀಯವಾಗಿ ವಿಫಲವಾಗಿರುವ, ಕೇಂದ್ರದಲ್ಲಿ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಕಾಂಗ್ರೆಸ್‌ನ್ನು ಜನ ನೆಚ್ಚಿಕೊಳ್ಳಲಿಲ್ಲ. ಹೀಗಾಗಿ ಕೆಲವೆಡೆ ಬಿಜೆಪಿ, ಕೆಲವೆಡೆ ಜೆಡಿ(ಎಸ್) ಗೆಲುವು ಸಾಧಿಸಿದೆ. ವಿರೋಧಪಕ್ಷಗಳ ವೈಫಲ್ಯವನ್ನೇ, ದೌರ್ಬಲ್ಯಗಳನ್ನೇ ತನ್ನ ಬಲವೆಂದೇ ಭಾವಿಸಿರುವ ಬಿಜೆಪಿ ಚುನಾವಣೆಗಳಲ್ಲಿ ಹಣ, ಜಾತಿ, ಆಡಳಿತ ಯಂತ್ರವನ್ನು ಇಡಿಯಾಗಿ ಬಳಸಿ ಮೇಲುಗೈ ಸಾಧಿಸಲು ಯತ್ನಿಸಿದಂತೆ ಈ ಬಾರಿಯೂ ಪ್ರಯತ್ನಿಸುವುದರಲ್ಲಿ ಅನುಮಾನವಿಲ್ಲ. ಸರ್ಕಾರದ ದುರಾಡಳಿತದ ಬಗ್ಗೆ ರಾಜಕೀಯ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳೇ ಪ್ರಮುಖ ವಿರೋಧ ಪಕ್ಷಗಳಿಂದ ಇಲ್ಲ.

ಈಗಂತೂ ಮೂರು ಕ್ಷೇತ್ರಗಳಲ್ಲಿ ಚುನಾವಣೆ ಕಣದಲ್ಲಿ ಕಾವು ಕಾಣಿಸಿಕೊಂಡಿದೆ. ಆದರಿಲ್ಲಿ ರಾಜಕೀಯ ನೆಲೆಯ ಹೋರಾಟಕ್ಕಿಂತ ಅನುಕೂಲ ಸಿಂಧು ರಾಜಕಾರಣದತ್ತಲೇ ತಂತ್ರಗಳನ್ನು ಹೆಣೆಯತೊಡಗಿರುವುದೂ ಕಾಣುತ್ತಿದೆ. ಅಂದರೆ ಪಕ್ಷಬೇಧವಿಲ್ಲದೆ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ 'ಮ್ಯಾಚ್ ಫಿಕ್ಸಿಂಗ್'ಗೂ ಸದ್ಯ ಮುಂದು! ಇಂತಹ ಪ್ರವೃತ್ತಿಗಳು ಇಂದು ಬಲಪಂಥೀಯ ರಾಜಕೀಯ ಪಕ್ಷಗಳಲ್ಲಿ ಸಾಮಾನ್ಯವಾಗುತ್ತಿರುವುದೇ ಬಲಪಂಥೀಯ ರಾಜಕಾರಣದ ಅಧಃಪತನವನ್ನು ತೋರಿಸುತ್ತದೆ.

ಹೀಗಿರುವಾಗಲೂ ರಾಜ್ಯದ ವಿಶೇಷವಾಗಿ ಆಯಾ ಕ್ಷೇತ್ರಗಳ ಮತದಾರರ ಮುಂದೆ ಗಂಭೀರ ರಾಜಕೀಯ ಪ್ರಶ್ನೆ ಸವಾಲುಗಳಿವೆ. ಜನದ್ರೋಹಿ, ಭ್ರಷ್ಟ ಕೋಮುವಾದಿ ಬಿಜೆಪಿ, ಜನವಿರೋಧಿಭ್ರಷ್ಟ ಕಾಂಗ್ರೆಸ್‌ಗಳು ಪರಸ್ಪರ ಪರ್ಯಾಯವಲ್ಲವೇ ಅಲ್ಲ. ಈ ಶಕ್ತಿಗಳನ್ನು ಸೋಲಿಸುವ ರಾಜಕೀಯ ಅಗತ್ಯತೆ ಜನತೆಗಿದೆ. ರೂಪುಗೊಳ್ಳಬೇಕಿದೆ. ಬಲಗೊಳ್ಳಬೇಕಿದೆ. ಈ ಮೂರು ಕ್ಷೇತ್ರಗಳಲ್ಲಿನ ವಿವಿಧ ಪಕ್ಷಗಳ ಬಲಾಬಲವನ್ನು ಗಮನಿಸಿದರೆ ಕಾಂಗ್ರೆಸ್, ಬಿಜೆಪಿಗಳನ್ನು ಸೋಲಿಸಲು ಜಾತ್ಯಾತೀತ ಜನತಾದಳಕ್ಕೆ ಬೆಂಬಲಿಸುವುದು, ಗೆಲ್ಲುವುದು ಅಗತ್ಯ. ಬಿಜೆಪಿ, ಕಾಂಗ್ರೆಸ್‌ಗಳನ್ನು ಜನ ಪೂರ್ಣ ತಿರಸ್ಕರಿಸಿದಲ್ಲಿ ಅದು ರಾಜ್ಯದಲ್ಲಿ ಹೊಸ ರಾಜಕೀಯ ಬೆಳವಣಿಗೆ ಸಹಾಯಕವಾಗಲಿದೆ.

* * *

ವಿದ್ಯುತ್ ಸ್ಥಾವರ ಪೇಜಾವರರ ಅವಾಂತರ - ಶಾಮೀಲಾದ ಸರ್ಕಾರ

ಉಡುಪಿ ಜಿಲ್ಲೆಯ ನಂದಕೂರಿನ ನಾಗಾರ್ಜುನ ಥರ್ಮಲ್ ವಿದ್ಯುತ್ ಸ್ಥಾವರದಿಂದ 'ಹಾರು' ಬೂದಿ ಸುತ್ತಲಿನ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆಯೆಂದು ಹಲವಾರು ವರ್ಷಗಳಿಂದ ಹೇಳುತ್ತಲೇ ಬರಲಾಗಿತ್ತು. ವಿಶೇಷವಾಗಿ ಈ ದಿನಗಳಲ್ಲಿ ಹೋರಾಟ ನಡೆಸುಕೊಂಡು ಬಂದಿದ್ದರೂ ಇನ್ನೂ ಯಾವುದೇ ಇತ್ಯರ್ಥವನ್ನೇ ಕಾಣದಿರುವಲ್ಲಿ ರಾಜ್ಯ ಸರ್ಕಾರದ ನಿರ್ಲಕ್ಷ್ಯತನ, ಮುಖ್ಯವಾಗಿ ಉದ್ದಿಮೆಯ ಆಡಳಿತ ವರ್ಗದೊಂದಿಗಿನ ಶಾಮೀಲುತನವೇ ಕಾರಣ; ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬ ತಂತ್ರವನ್ನೇ ಸರ್ಕಾರ ಅನುಸರಿಸುತ್ತಿದೆ. ಇದರಲ್ಲಿ 'ಹಾರುವ' ಬೂದಿ ಸಮಸ್ಯೆ ತಡೆಯದಿದ್ದಲ್ಲಿ ನೇರ ಹೋರಾಟಕ್ಕೆ ರೆಡಿಯೆಂದೇ ಸಾರಿದ್ದ ಪೇಜಾವರ ಸ್ವಾಮಿಯವರು ಮಧ್ಯಪ್ರವೇಶಿಸಿದ್ದು ಜನರ ಹೋರಾಟ ತೀವ್ರಗೊಳ್ಳುತ್ತಿರುವಾಗ. ಆದರೆ ಅವರ ಈ ಮಧ್ಯಪ್ರವೇಶ ಜನರಿಗೆ ಪರಿಹಾರವಿರಲಿ, ಸಾಂತ್ವನ ಹೇಳಲೂ ಆಗದೇ ಆಡಳಿತ ಮಂಡಳಿಯ ವಾದವನ್ನೇ ಪ್ರತಿಪಾದಿಸಿದ್ದಾರೆಂದು

ಪುಟ 10 ಕ್ಕೆ

ಮಡಿಕೇರಿ : ಗದ್ದುಗೆಗೆ ಬೆಂಕಿ ನಿಷ್ಪಕ್ಷಪಾತ ತನಿಖೆ ಅಗತ್ಯ

ಡಾ. ಇ.ರ. ದುರ್ಗಾಪ್ರಸಾದ್

ಫೆಬ್ರುವರಿ 22, 2011 ರಂದು ಮಡಿಕೇರಿಯಲ್ಲಿರುವ ಲಿಂಗರಾಜ, ದೇವಮ್ಮನವರ ಗದ್ದಿಗೆಯ ಪ್ರವೇಶದ್ವಾರಕ್ಕೆ ಬೆಂಕಿ ಕೊಡಲಾದದ್ದು ಈಗಾಗಲೇ ವ್ಯಾಪಕವಾಗಿ ವರದಿಯಾದ ಒಂದು ದುಷ್ಕೃತ್ಯವಾಗಿದೆ. ಇದರಿಂದ ಆ ಐತಿಹಾಸಿಕ ಸ್ಮಾರಕದ ಬಾಗಿಲಿನ ಭಾಗ ಸುಟ್ಟುಹೋಗಿದೆ.

ಈ ಘಟನೆಯ ಹೆಸರಿನಲ್ಲಿ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಆದರೆ ಈ ವ್ಯಕ್ತಿಗಳ ಮೇಲೆ ಬೇರೊಂದು ಘಟನೆಗೆ ಸಂಬಂಧಿಸಿದಂತೆ ಹದಿನೈದು ದಿನಗಳ ಮೊದಲು ಪುಕಾರು ಕೊಡಲಾಗಿದ್ದು ಪೊಲೀಸರು ಆ ಪುಕಾರಿಗೆ ಸಂಬಂಧಿಸಿದಂತೆ ಅವರನ್ನು ಬಂಧಿಸಿದ್ದಾಗಿದೆ. ಹೀಗೆ ಬಂಧಿಸಿದ ನಂತರ ಗದ್ದುಗೆ ಘಟನೆಯನ್ನು ಸೇರಿಸಿ ಅವರ ಮೇಲೆ ಮೊಕದ್ದಮೆ ಹಾಕಿದ್ದಾರೆ. ಅವರು ಈ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರಲ್ಲ ಎಂಬುದು ಪೊಲೀಸರನ್ನೊಳಗೊಂಡು ಎಲ್ಲರಿಗೂ ತಿಳಿದದ್ದೇ ಆಗಿದೆ. ಪೊಲೀಸರು ಈ ರೀತಿ ಸುಳ್ಳು ಮೊಕದ್ದಮೆ ಹಾಕುವುದರ ಮೂಲಕ 'ಗದ್ದುಗೆ ಘಟನೆಗೆ ಮುಸ್ಲಿಮರೇ ಕಾರಣ' ಎಂಬ ಭಾವನೆ ನಾಡಿನ ಜನಸಾಮಾನ್ಯರಲ್ಲಿ ಸೃಷ್ಟಿಯಾಗುವಂತೆ ಮಾಡಿದ್ದಾರೆ. ಈ ವರ್ತನೆ ಸರಿಯಲ್ಲ. ಈ ಘಟನೆಯ ನಿಷ್ಪಕ್ಷಪಾತ ತನಿಖೆಯಾಗಬೇಕು ಮತ್ತು ನೈಜ ದುಷ್ಕರ್ಮಿಗಳನ್ನು ಕಂಡುಹಿಡಿದು ಅವರಿಗೆ ಸೂಕ್ತ ಶಿಕ್ಷೆಯಾಗಬೇಕಾಗಿದೆ.

ಗದ್ದುಗೆ ಪುರಾತತ್ವ ಇಲಾಖೆಯ ಸುಪರ್ದಿಗೆ ಬರುವುದಿದ್ದು ಈ ಹಳೆಯ ಸ್ಮಾರಕಗಳನ್ನು ಕಾಪಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಲ್ಲಿ ಇಲಾಖೆಯ ವಿಫಲತೆ ಇಲ್ಲಿ ಎದ್ದು ಕಾಣುತ್ತಿದೆ. ಅದನ್ನು ಪಾಳುಬಿಟ್ಟು ಸುತ್ತ ಕಾಡು ಬೆಳೆಯುವಂತೆ ಮಾಡಿದ್ದಾರೆ. ಆ ಪ್ರದೇಶವನ್ನು ಪುಂಡಪೋಕರಿಗಳು ತಮ್ಮ ಸ್ವೇಚ್ಛಾವಿಹಾರ ಕ್ಷೇತ್ರವಾಗಿ ಮಾಡಿಕೊಳ್ಳಲು ಅವಕಾಶವನ್ನು ಈ ಇಲಾಖೆ ಮತ್ತು ಪೊಲೀಸ್ ಇಲಾಖೆಯೇ ಮಾಡಿಕೊಟ್ಟಿರುವುದಾಗಿದೆ. ಇದರ ರಕ್ಷಣೆಯ ಜವಾಬ್ದಾರಿಯಲ್ಲಿ ಸರಕಾರದ ಇಲಾಖೆಗಳು ನಿರ್ಲಕ್ಷ್ಯ ತೋರಿರುವುದು ಸ್ಪಷ್ಟವಾಗುತ್ತಿದೆ. ಸರಕಾರದ ನಿರ್ಲಕ್ಷ್ಯವೇ ಇಂದಿನ ದುರ್ಘಟನೆಗೆ ಮುಖ್ಯ ಕಾರಣ

ಕೋಮುವಾದ ನೆತ್ತಿಗೇರಿದ ಕೆಲವರು 24, 2011 ರಂದು ಹಿಂದೂ ಸಮಾಜೋತ್ಸವದ ಮೆರವಣಿಗೆಯ ಸಂದರ್ಭದಲ್ಲಿ ಕೆಲವು ಮುಸ್ಲಿಂ ಅಂಗಡಿಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಈ ದುಷ್ಕರ್ಮಿಗಳ ಬಗ್ಗೆ ಪೊಲೀಸರಿಗೆ ಹೆಸರುಗಳನ್ನು ಕೊಟ್ಟಿದ್ದರೂ ಪೊಲೀಸರು ಸೂಕ್ತ ಕ್ರಮ ಕೈಗೊಂಡಿಲ್ಲ. ಕ್ರಮ ಕೈಗೊಂಡಂತೆ ನಾಟಕವಾಡಿದ್ದಾರೆ.

25 ರಂದು ಕೆಲವು ಅಂಗಡಿಗಳ ಮೇಲೆ ಕಲ್ಲು ತೂರಲಾಗಿದೆ. ಈ ಬಗ್ಗೆಯೂ ನಿಷ್ಪಕ್ಷಪಾತ ತನಿಖೆಯಾಗಬೇಕು ಮತ್ತು ಕಠಿಣ ಕ್ರಮ ಬೇಕು. ಘಟನೆಗಳನ್ನು ಗಮನಿಸಿದಾಗ ಶಾಂತ ವಾತಾವರಣವನ್ನು ಕದಲಲು ಹಿಂದೂ ಪರವೆಂದು ಹೇಳಿಕೊಳ್ಳುವ ಸಂಘಟನೆಗಳವರು ಉದ್ದೇಶ ಪೂರ್ವಕವಾಗಿ ಸಂಘಟಿಸಿದ ಸಂಚು ಇವುಗಳೆಂದು ಕಂಡುಬರುತ್ತದೆ.

ಸಮುದಾಯದವರೇ ಆದ ಕೆಲವೊಂದು ತೀವ್ರಗಾಮಿಗಳಿಂದಾಗುವ ಅನಾಹುತಗಳನ್ನು ಗಮನಿಸಬೇಕು ಮತ್ತು ಅವರನ್ನು ದೂರವಿಡಬೇಕು.

ಮತಾಂಧತೆಯನ್ನು ಮತಾಂಧತೆಯಿಂದ ಎದುರಿಸಲು ಸಾಧ್ಯವಿಲ್ಲ ಎಂದು ಮನಗಾಣಬೇಕು.

ಮತನಿರಪೇಕ್ಷ ಶಕ್ತಿಗಳೊಂದಿಗೆ ಕೈ ಜೋಡಿಸುವುದರಿಂದ ಮಾತ್ರ ಮುಸ್ಲೀಮರ ರಕ್ಷಣೆ ಸಾಧ್ಯವೆಂದು ಅವರು ಮನಗಾಣಬೇಕು.

ಗದ್ದುಗೆ ಪುರಾತನ ಕಟ್ಟಡವಾಗಿದ್ದು ಅವುಗಳನ್ನು ರಕ್ಷಿಸುವುದು ಚರಿತ್ರೆಯ ದೃಷ್ಟಿಯಿಂದ ಅತ್ಯಗತ್ಯ. ಅದನ್ನು ಹಾಳುಗೆಹುವ ದುಷ್ಕಮಿಗಳ ಯತ್ನ ಖಂಡನಾರ್ಹ. ಅಂತಹವರಿಗೆ ಕಠಿಣ ಶಿಕ್ಷೆಯಾಗಲೇ ಬೇಕು. ಆದರೆ " ಈ ಸ್ಮಾರಕಗಳ ನಾಶ ಹಿಂದೂ ಧರ್ಮಕ್ಕೆ, ಹಿಂದೂಗಳಿಗೆ ಮಾಡುವ ಅಪಮಾನ" ಎಂದು ಹಿಂದೂ ಪರವೆಂದು ಹೇಳಿಕೊಳ್ಳುವ ಕೆಲವು ಸಂಘಟನೆಗಳು ಹೇಳಿಕೊಂಡಿರುವುದು ಎಷ್ಟು ಸರಿ ಎಂದು ಅವರು ವಿವರಿಸಬೇಕು. ಹಾಲೇರಿ ಅರಸರು ಹಿಂದೂ ಧರ್ಮವೆಂದು ಹೇಳಲಾಗುವ ಧರ್ಮದ ಉದಾತ್ತ ಅಂಶಗಳ ಪ್ರತೀಕಗಳಾಗಲು ಸಾಧ್ಯವೇ? ಎಂದು ಈ ಸಂಘಟನೆಗಳು ವಿವರಣೆ ಕೊಡಬೇಕು.

ಈ ಹಾಲೇರಿ ಅರಸುಗಳು 10,000 ಕ್ಕೂ ಹೆಚ್ಚು ಕೊಡವರನ್ನು ಅಲ್ಲದೇ ಬ್ರಾಹ್ಮಣರನ್ನು ಕೊಂದವರೆಂದು ಈ ಸಂಘಟನೆಗಳವರು ಮರೆಯಬಾರದು.

ಭಾ.ಜ.ಪ. ಸರಕಾರದಡಿಯಲ್ಲಿ ಆದರ 'ಬೆಂಬಲಿಗರಿಗೊಂದು ಕಾನೂನು, ಇತರರಿಗೆ ಒಂದು ಕಾನೂನು' ಅನುಸರಿಸುತ್ತಿದೆ ಎಂದು ಕಂಡುಬರುತ್ತಿದೆ. ಆ ಪಕ್ಷದ ಹಿಂಬಾಲಕರು, ಬೆಂಬಲಿಗರು ಯಾವ ರೀತಿ ವರ್ತಿಸಿದರೂ ಅವರಿಗೆ ರಕ್ಷಣೆ, ಇತರರು ಅಮಾಯಕರಾದರೂ ಅವರಿಗೆ ಅನಗತ್ಯ ಶಿಕ್ಷೆ ಎಂಬ ದ್ವಿಮುಖಿ ಧೋರಣೆ ಅನುಸರಿಸಲ್ಪಡುತ್ತಿರುವುದು ಕಂಡುಬರುತ್ತಿದೆ, ಅನುಭವವಾಗುತ್ತಿದೆ. ಇದು ಖಂಡನಾರ್ಹ.

ಮಡಿಕೇರಿ ಘಟಕೆಗಳ ಸಮಗ್ರ, ನಿಷ್ಪಕ್ಷಪಾತ ತನಿಖೆಯಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೊಡಗು ಜಿಲ್ಲಾ ಸಮಿತಿ ತೀವ್ರವಾಗಿ ಆಗ್ರಹಿಸಿದೆ.

○

ಕರ್ನಾಟಕದಲ್ಲಿ ಡಾಕ್ಟ್ರುಗಳು ಜಾಸ್ತಿಯಾಗ್ಯವ್ರೆ!

ಈ. ಬಸವರಾಜು
ಮಲ್ಲೇನಹಳ್ಳಿ

ಯಣ್ಣ ಕರ್ನಾಟಕದಲ್ಲಿ ಡಾಕ್ಟ್ರುಗಳು ಜಾಸ್ತಿಯಾಗ್ಯವ್ರೆ. ನಮಿಗೆ ಇನ್ನೇನೂ ತ್ವಂದ್ರೆಯಿಲ್ಲ.

ಅಂಗಂದ್ರೇನಣ್ಣ? ಇದ್ಕಿಂದ್ದಂಗೆ ಎಲ್ಲಿಂದ ಬಂದ್ರು ಅಷ್ಟೊಂತರ ಜನ?

ಯಲ್ಲ ಮಟಗಳಿಂದ ಬತ್ತಾ ಅವ್ರೆ.

ಮಟಗಳಲ್ಲಿ ಪ್ರಾರ್ಥನೆ, ಪೂಜೆ, ಪುನಸ್ಕಾರ, ವೇದ ಏಳ್ಕೊಡ್ತಾ ಇದ್ರು, ಇದ್ಕಿದ್ದಂಗೆ ಇದೇಳ್ಕೊಡಕೆ ಸುರು ಮಾಡ್ಕವ್ರಲ ಯಾಕೆ? ನಿಂಗ್ಯಾರೇಳ್ದರು?

ಅದೇ ಆಸ್ಪತ್ರೆಗಳ್ನ ಮಟಗಳಿಗೆ ಕೊಡ್ತಿನಿ ಅಂತವ ಯಡ್ಯೂರಪ್ಪ ಏಳ್ಕವ್ನೆ. ಅದ್ಕೆ ಮಟಗಳಲ್ಲಿ ಡಾಕ್ಟ್ರುಗಳು ಜಾಸ್ತಿ ಅವ್ರೇನೋ ಅಂತ ನಾನೆ ಅನ್ಕಂಡೆ

ನೀನ್ವಬ್ಬ ಧ್ವಡ್ ಬುದ್ವಂತ ಕಣಣ್ಣ. ಈ ಸರ್ಕಾರ ಒಂತರ ಮಟಗಳ ಸರ್ಕಾರ ಕಣಣ್ಣ. ಅದ್ಕೆ ಆಸ್ಪತ್ರೆ ಕೊಡ್ತಿನಿ ಅಂತ ಹೇಳ್ಕದೆ.

ಅದೆ ನಾನು ಅನ್ಕಂಡೆ. ಆಸ್ಪತ್ರೆ ನಡ್ಸರು ಡಾಕ್ಟು. ಅವ್ರುನ್ನ ನೋಡ್ಕಳರು ಸರ್ಕಾರದವ್ರು. ಅದ ಬುಟ್ಟು ಮಟಗಳಿಗೆ ಕೊಡದು ಅಂದ್ರೇನು?

ಈಗ ಮಟಗಳಿಗೆ ಕೊಡ್ತಿನಿ ಅಂತ ಯಡೂರಪ್ಪ ಏಳ್ಕವ್ನೆ. ಈಗಾಗ್ಲೇ ಕ್ಯಲುವ್ರಿಗೆ ಕೊಟ್ಟವ್ನೆ!!

ಯಾಕೆ ಅವ್ನ ಕೈಲಿ ನಡ್ಸಕಾಗದಿಲ್ವಂತೊ?

ಅವ್ನಿಗೆ ಸರ್ಕಾರನೇ ನಡ್ಸದು ಕಷ್ಟ ಆಗ್ಯದೆ, ಅವ್ರ ಪಕ್ಷದಲ್ಲೇ ಯಳ್ಡ್ ಪಕ್ಷ ಆಗಿ ಕೂತದೆ, ಇನ್ನ ಆಸ್ಪತ್ರೆಗಳ್ನ ಎಲ್ಲಿ ನಡುಸ್ತನೆ? ಅದ್ಕೆ ಯಾರಾರ ಬೇಕಾದ್ರೆ ಕೇಳ್ರಪ್ಪ ಕೊಡ್ತಿನಿ ಅಂದವ್ನೆ.

ಈಗೇನ್ ಮಟಗಳು ಬ್ಯಳಿತಾನೆ ಅವೆ, ಬ್ಯಾರೇರಿಗೆ ಎಲ್ಲಿ ಬುಟ್ಟರು, ಕೊಡದ್ನೆಲ್ಲ ನಮಿಗೇ ಕೊಡಿ ಅಂತರೆ. ತಗಂಡು ಏನ್ ಮಾಡ್ತರೆ ಅಂತಿನಿ?

ಏನಿಲ್ಲ, ಅಮಾಸೆ-ಉಣ್ಮೇಲಿ ಯಂತ್ರ ಬರೀತರೆ, ಮಂತ್ರ ಆಕ್ತರೆ, ಕಾಯ್ಲೆ ಬಂದ್ರೆ ಸ್ವಾಮಿಗಳ ಕಾಲಿಗೆ ಬೀದ್ದು ಆಸೀರ್ವಾದ ತಗಳಿ, ಯಲ್ಲ ವಾಸಿ ಆಯ್ತದೆ ಅಂತರೆ, ಅಂಗೂ ವಾಸಿ ಆಗಿಲ್ಲ ಅಂದ್ರೆ ವಳ್ಗೆ ಆಸ್ಪತ್ರೆಗೋಗಿ ಅಂತರೆ ಅಷ್ಟೆಯ!

ಆಮ್ಯಾಲೆ ಸ್ವಾಮಿಗಳಿಗೆ ಕಾಯ್ಲೆ ಬಂದ್ರೆ ಏನ್ ಮಾಡ್ಯರು?

ಅವ್ರು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಗೆ ಓಯ್ತರೆ!

ಯಡೂರಪ್ಪುಂಗೆ ಇಷ್ಟೂ ಗೊತ್ತಿಲ್ವ?

ಗೊತ್ತದೆ. ಮಟಗಳಿಗೆ ದುಡ್ ಕೊಟ್ಟೇ ಇಷ್ಟೊಂದ್ ಬ್ಯಂಬ್ಲ ತಗತವ್ನೆ. ಇನ್ನ ಆಸ್ಪತ್ರೆ, ನೀರಿನ್ ಟ್ಯಾಂಕು, ಬಸ್ ಟ್ಯಾಂಡು, ಲ್ಯಟ್ರಿನ್ ರೂಮು ಯಲ್ಲಾನು ಕೊಟ್ರೆ ಮಟ ನಡ್ಸರೇ ಕ್ಯಾನ್ ವಾಸ್ ಮಾಡಿ ಯಡೂರಪ್ಪುನ್ ಗೆಲ್ಲುಸ್ತರೆ ಅಷ್ಟೆಯ.

ನೀನೇನೆ ಕೊಡು, ಲ್ಯಟ್ರಿನ್ ರೂಮ ಕೊಡಿ ಅಂತ ಏಳ್ಬಾಡ ಕಣಣ್ಣ. ಮಟಗಳ್ ಕೈಲಿ ಅಂತ ಕ್ಯಲ್ಸ ಮಾಡುಸ್ಬಾರ್ದು.

ಇದ್ಯಲ್ಲಾನು ನೋಡ್ಕಂಡು ನಮ್ ಸ್ರೀರಾಮಣ್ಣರು ಸುಮ್ಕೆ ಇದ್ದರೆ?

ಅದ್ಯಾಪ್ಪ ಸ್ರೀರಾಮಣ್ಣೋರು?

ಅದೇ ಆರೋಗ್ಯ ಮಂತ್ರಿ ಸ್ರೀರಾಮಣ್ಣೋರು.

ಅವ್ರು ಸುಮ್ಕಿರದ್ಕೆ ಇಂಗಾಗಿರದು. ಅವ್ರು ಕಬ್ಬುಣದ್ ಅದ್ರ ಗುಡ್ಡಿ ಗುಂಡಾಂತ್ರ ಮಾಡಿ, ದುಡ್ ಮಾಡ್ತಾ ಅವ್ರೆ. ಆಸ್ಪತ್ರೆ ಕಡೆ ಮಕ ಆಕ್ತಾ ಇಲ್ಲ. ಅದ್ಕೆ ಯಡೂರಪ್ಪ ಆಸ್ಪತ್ರೆಗಳ್ನ ಬೇಕಾದವ್ರಿಗೆ ಕೊಡ್ತಾ ಅವ್ನೆ.

ಇಂಗಾದ್ರೆ ಜನಗಳ ಆರೋಗ್ಯದ ಗತಿ ಏನಂತಿನಿ.

ಅದೋಗತಿ ಆಯ್ತುಳೆ ಬುಡು.

ನಂಗೆ ಒಂದು ಐಡಿಯಾ ಬಂದದೆ. ಇದ ಯಡೂರಪ್ಪಂಗೆ ಕೊಟ್ರೆ ನಂಗೂ ಯಾವ್ದಾದ್ರೂ ಮಂಡ್ಳಿ ಅಧ್ಯಕ್ಷಗಿರಿ ಕೊಡ್ಬೌದೇನಪ್ಪ.

ಕೊಡ್ತಿನಿ ಅಂತನೇ ವರ್ತು ಕೊಡದು ಸುಳ್ಳು. ಪಾಪ ಆ ವರ್ತೂರು ಪ್ರಕಾಸ ಅನ್ನನು ಮಿನಿಷ್ಟಾಯ್ತಿನಿ ಅಂತವ ಬಟ್ಟೆ ವಲಿಸ್ಕಂಡು ಕಾಯ್ತಾ ಅವ್ನೆ. ಈ ಯಡೂರಪ್ಪ ಇವತ್ತು ಅಮಾಸೆ, ಇವತ್ತು ಉಣ್ಮೆ ಇದು ರಾವ್ ಕಾಲ, ಮಟ್ ಮಂಗ್ಯವಾರ, ಕಡೆ ಸುಕ್ರವಾರ ಅಂತ ಏಳ್ಕಂಡು ಇನ್ನೂ ಕೊಟ್ಟಿಲ್ಲ, ಕೊಡಂಗೂ ಕಾಣ್ತಾ ಇಲ್ಲ. ಇನ್ನ ನಿಂಗೆ ಕೊಟ್ಟನೆ? ಮದ್ಲು ಅದೇನ್ ಐಡ್ಯ ಏಳಣ್ಣ.

ಏನೂ ಇಲ್ಲ. ಸರ್ಕಾರನೇ ಮಟಗಳ್ಗೆ ಬರ್ಕೊಡದು. ಒಂದೊಂದ್ ಜಿಲ್ಲೆ, ಒಂದೊಂದ್ ಡಿಪಾಟ್‌ಮೆಂಟ ಒಂದೊಂದ್ ಮಟಕ್ಕೆ ಬರ್ಕೊಡದು. ಅವ್ರು ಯಡೂರಪ್ಪುಂಗೆ ತಿಂಗ್ಳಿಗೆ ಇಷ್ಟು ಅಂತ ಕೊಡದು.

ಈ ಮನೆ ಹಾಳ್ ಐಡ್ಯವ ಅವ್ನಿಗೆ ಕೊಟ್ಟೆಯ? ಅದ್ನೂ ಮಾಡಿಬಡ್ ಬೌದು. ಕ್ವನಿಗೆ ಅವ್ನ ಮಕ್ಳು, ಮರಿಗ್ಯಲ್ಲ ಬರ್ಕೊಟ್ ಬುಡ್ತನೆ!

ಭಂಡತನಕ್ಕೆ ಮಿತಿಯಿಲ್ಲವೇ?

ಪುಟ 3ರಿಂದ

ಕೆಲವು ಹಿರಿಯ ನಾಯಕರು ಹಲವು ಸಚಿವರು ಹೈಕಮಾಂಡ್ ಬಾಗಿಲನ್ನು ತಟ್ಟಿದ್ದು. ಆದರೂ ಯಡ್ಡಿಯೂರಪ್ಪನವರ ಮೇಲೆ ಕ್ರಮ ಕೈಗೊಳ್ಳದೇ ಬಿಜೆಪಿ ಹೈಕಮಾಂಡ್, ಆರ್.ಎಸ್.ಎಸ್.ಗಳು ಬೆಂಬಲಿಸುತ್ತಿರುವುದು ಅವರ ಶಾಮೀಲುತನವನ್ನು ಮತ್ತೆ ಬಹಿರಂಗಕ್ಕೆ ಇಟ್ಟಿದೆ.

ಯಡ್ಡಿಯೂರಪ್ಪನವರ ವಿರುದ್ಧ ತೆರೆ-ಮರೆಯಲ್ಲಿ ಕಾರ್ಯವೆಸಗುತ್ತಿದ್ದ ಪಕ್ಷಾಧ್ಯಕ್ಷ ಕೆ.ಎಸ್. ಈಶ್ವರಪ್ಪ, ಅನಂತಕುಮಾರ್ ರವರುಗಳು ಇದೀಗ ಮುಖಾಮುಖಿಯಾಗಿರುವುದು ಪ್ರಕರಣಕ್ಕೆ ಸ್ವಲ್ಪ ಹೆಚ್ಚಿನ ಗಂಭೀರತೆ ತಂದಿದೆ. ಆದರೆ ಈ ಗುಂಪು ಸರ್ಕಾರವನ್ನು ವಿಸರ್ಜಿಸಿ ಹೊಸ ಜನಾದೇಶಕ್ಕೆ ಹೋಗಲು ಸಿದ್ದವಿಲ್ಲ ಮತ್ತು ಮುಖ್ಯಮಂತ್ರಿ ಬದಲಾವಣೆಯೊಂದೆ ಸಾಕು ಎಂದೂ, ಆ ಸ್ಥಾನದಲ್ಲಿ ಕೈಗೊಂಬೆ ಮುಖ್ಯಮಂತ್ರಿಯನ್ನು ಸ್ಥಾಪಿಸಿ ಲೂಟಿಯ ಅವಕಾಶ ಗಿಟ್ಟಿಸಬೇಕೆಂಬ ಲೆಕ್ಕಚಾರವನ್ನು ಹಾಕಿದೆ. ಇದನ್ನೂ ದೃಢವಾಗಿ ವಿರೋಧಿಸಲೇಬೇಕು. ಇದೇ ಕಿತ್ತಾಟದಿಂದಾಗಿ ಆಡಳಿತಕ್ಕೆ ಗಮನ ಕೊಡದೇ ಜನದ್ರೋಹ ಎಸಗಲಾಗುತ್ತಿದೆ.ಬಹುಮತ ಕಳೆದುಕೊಂಡು, ತಾಂತ್ರಿಕ ಕಾರಣಗಳಿಂದ ಅಧಿಕಾರದಲ್ಲಿರುವ ಈ ಸರ್ಕಾರ ರಾಜೀನಾಮೆ ನೀಡಲೇಬೇಕಿದೆ, ಚುನಾವಣೆಗೆ ಹೋಗಬೇಕಿದೆ . ಇದಕ್ಕಾಗಿ ಜನತೆಯ ಅತೃಪ್ತಿಯನ್ನು ಕ್ರೋಡಿಕರಿಸುವ ಸಂಘರ್ಷಕ್ಕೆ ಇಳಿಯಬೇಕಿದೆ.

○

ಕನ್ನಡ ವಾರಪತ್ರಿಕೆ

ಹಗರಣಗಳೇ ಅಭಿವೃದ್ಧಿಯಾಗಿರುವಾಗ ಈ ಸರ್ಕಾರದಲ್ಲಿ ಹೊರಬರುತ್ತಿರುವ ಪ್ರಕರಣಗಳಿಗೆ ಕೊನೆಯಿಲ್ಲವಾಗಿದೆ. ದಾಖಲೆಗಳ ಸಮೇತ ಪ್ರೇರಣಾ ಟ್ರಸ್ಟ್‌ನ ಹೊಸ ಹಗರಣ ಸ್ಫೋಟಗೊಂಡಿದ್ದರೂ ಮುಖ್ಯಮಂತ್ರಿ ರಾಜೀನಾಮೆ ನೀಡದೇ ಭಂಡತನದಲ್ಲಿ ಮೆರೆಯುತ್ತಿದ್ದಾರೆ. ಇಂತಹ ಸರ್ಕಾರವನ್ನು ಕಿತ್ತೊಗೆಯುವುದೊಂದೇ ಮಾರ್ಗವೆಂದು ಎಡಶಕ್ತಿಗಳು ಜನತೆ ಚಳುವಳಿಗೆ ಇಳಿದಿರುವ ಸಂದರ್ಭದಲ್ಲಿ ಹಗರಣಗಳ ಅವಲೋಕನ ಇಲ್ಲಿ.

ಘೋರ ಭ್ರಷ್ಟ ಬಿಜೆಪಿ ಮತ್ತು ಯಡಿಯೂರಪ್ಪನ ಕರ್ಮಕಾಂಡಗಳು

■ ಜಯ

ಬಿಜೆಪಿ ಮತ್ತು ಯಡಿಯೂರಪ್ಪನ ಘೋರ ಕರ್ಮಕಾಂಡಗಳು, ಸ್ವಜನ-ಪಕ್ಷಪಾತ ಮತ್ತು ಭ್ರಷ್ಟ ಲೋಲುಪತೆಗಳು ಇನ್ನಿಲ್ಲದಂತೆ ಮುಗಿಲೆತ್ತರಕ್ಕೆ ಏರುತ್ತಲೇ ಇವೆ. ಇದಕ್ಕೆ ಹೊಸ ಸೇರ್ಪಡೆಯೆಂದರೆ ಯಡಿಯೂರಪ್ಪನ ಮಕ್ಕಳ ಒಡೆತನದಲ್ಲಿರುವ ಪ್ರೇರಣಾ ಟ್ರಸ್ಟ್‌ಗೆ ಅಕ್ರಮವಾಗಿ ರೂ. 27 ಕೋಟಿ ವಂತಿಗೆ ಸಂಗ್ರಹಿಸಿರುವುದು. ಪ್ರೇರಣಾ ಶಿಕ್ಷಣ ಮತ್ತು ಸಾಮಾಜಿಕ ಟ್ರಸ್ಟ್‌ಗೆ (ಪಿಇಎಸ್) ಇಷ್ಟು ದೊಡ್ಡ ಪ್ರಮಾಣಾಧ ದೇಣಿಗೆಯನ್ನು ಕೇವಲ ಎರಡು ಮೂರು ಖಾಸಗಿ ಕಂಪನಿಗಳಿಂದ ಸಂಗ್ರಹಿಸಲಾಗಿದ್ದು, ದೇಣಿಗೆ ನೀಡಿರುವ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ರಾಜ್ಯ ಬೊಕ್ಕಸಕ್ಕೆ ರೂ. 180ಕೋಟಿ ನಷ್ಟವಾಗಿದೆ ಎಂಬುದು ಯಡಿಯೂರಪ್ಪನವರ ಮೇಲಿರುವ ಗುರುತರವಾದ ಆರೋಪ. ಈ ಟ್ರಸ್ಟ್ ಕೆಲವೇ ದಿನಗಳಲ್ಲಿ ರೂ. 100 ಕೋಟಿಗೂ ಮೀರಿದ ವ್ಯವಹಾರ ನಡೆಸುತ್ತಿರುವುದಾದರೂ ಹೇಗೆ? ಎಂಬುದು ಎಲ್ಲರ ಪ್ರಶ್ನೆ.


ಪ್ರೇರಣಾ ಟ್ರಸ್ಟ್‌ಗೆ ದೊಡ್ಡ ಮೊತ್ತದ ದೇಣಿಗೆ ನೀಡಿದ್ದಕ್ಕಾಗಿ ಸರ್ಕಾರಿ ಒಡೆತನದ ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯೊಂದಿಗೆ ಜಿಂದಾಲ್ ಸ್ಟೀಲ್ ಕಂಪನಿಯು ಮಾಡಿಕೊಂಡಿರುವ ಒಪ್ಪಂದದ ಷರತ್ತುಗಳನ್ನು ಸಡಿಲಗೊಳಿಸಿ ಜಿಂದಾಲ್ ಕಂಪನಿಗೆ ಲಾಭ ಮಾಡಿಕೊಡಲಾಗಿದೆ. ಮತ್ತೊಂದು ಖಾಸಗಿ ಕಂಪನಿ ಆದರ್ಶ ಡೆವಲಪರ್ಸ್ ಕಂಪನಿಯು ದೇವರ ಬೀಸನಹಳ್ಳಿ ಬಳಿ ಒತ್ತುವರಿ ಮಾಡಿಕೊಂಡಿರುವ 13.35 ಎಕರೆ ಸರ್ಕಾರಿ ಭೂಮಿಯುನ್ನು ತೆರವುಗೊಳಿಸದೆ ಹಾಗೆಯೇ ಉಳಿಸಿಕೊಡಲಾಗಿದೆ. ಇದರ ಪ್ರತಿಫಲವಾಗಿ ಈ ಕಂಪನಿಯು ಪ್ರೇರಣಾ ಟ್ರಸ್ಟ್‌ಗೆ ದೇಣಿಗೆ ರೂಪದಲ್ಲಿ ಹಣ ನೀಡಿದೆ.

ಅಲ್ಲದೆ, ಯಡಿಯೂರಪ್ಪನವರ ಅಳಿಯ

ಕೆಲವು ಮಸೂದೆಗಳ ಪ್ರತಿಯು ಯಾವೊಬ್ಬರಿಗೂ ನೀಡಿರಲಿಲ್ಲ, ಅಲ್ಲದೆ ಮಸೂದೆ ಮಂಡಿಸಿದ ಸಚಿವರು ಚೀಟಿಯಲ್ಲಿ ಬರೆದುಕೊಂಡು ಓದಿ ಅವುಗಳನ್ನು ಅಂಗೀಕರಿಸಲಾಗಿದೆ ಎಂದು ಘೋಷಿಸಿ ಕೊಂಡದ್ದು ಬಿಜೆಪಿಯ ಪ್ರಜಾಪ್ರಭುತ್ವ -ವಿರೋಧಿ ಪ್ರವೃತ್ತಿಗೆ ಮತ್ತೊಮ್ಮೆ ಸಾಕ್ಷಿಯಾಗಿದೆ.

ಸೋಹನ್‌ಕುಮಾರ್ ಅವರು ರೈತರಿಂದ ಪ್ರತಿ ಎಕರೆಗೆ ರೂ. 5.15 ಲಕ್ಷ ದರದಲ್ಲಿ ಒಟ್ಟು 21.5 ಎಕರೆ ಖರೀದಿಸಿ, ನಂತರ ಎಕರೆಗೆ ರೂ. 24.15 ಲಕ್ಷ ರೂಪಾಯಿ ದರದಲ್ಲಿ ಪ್ರೇರಣಾ ಟ್ರಸ್ಟ್‌ಗೆ ಮಾರಿದ್ದಾರೆ.

ಇವೆಲ್ಲ ಆರೋಪಗಳ ಕುರಿತು ತನಿಖೆ ನಡೆಸಬೇಕೆಂದು ವಿರೋಧ ಪಕ್ಷಗಳ ಒಕ್ಕೊರಲ ಧ್ವನಿಗೆ ಜಗ್ಗದ ಜಗದೇಕ 'ಭಂಡ' ಯಡಿಯೂರಪ್ಪ ಮತ್ತು ನೈತಿಕತೆಯ ಪ್ರಜ್ಞೆಯೇ ಇಲ್ಲದ ಬಿಜೆಪಿಗಳು ವಿಧಾನಸಭಾ ಅಧಿವೇಶನವನ್ನು ಮತ್ತೆ ಬಲಿ ತೆಗೆದುಕೊಂಡಿವೆ. ವಿಧಾನಸಭೆಯೊಳಗೆ ಪಟ್ಟುಹಿಡಿದು ವಿರೋಧಪಕ್ಷಗಳು ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭವನ್ನೇ ಗುಳ್ಳೆ ನರಿಯಂತೆ ಹೊಂಚು ಹಾಕಿ ಕಾಯುತ್ತಿದ್ದ ಬಿಜೆಪಿಯು ಚರ್ಚೆಯೇ ಇಲ್ಲದೇ ತರಾತುರಿಯಲ್ಲಿ 11 ಮಸೂದೆಗಳನ್ನು ಅಂಗೀಕರಿಸಿದೆ. ಇದರಲ್ಲಿ ಕೆಲವು ಮಸೂದೆಗಳ ಪ್ರತಿಯು



ಯಾವೊಬ್ಬರಿಗೂ ನೀಡಿರಲಿಲ್ಲ, ಅಲ್ಲದೆ ಮಸೂದೆ ಮಂಡಿಸಿದ ಸಚಿವರು ಚೀಟಿಯಲ್ಲಿ ಬರೆದುಕೊಂಡು ಓದಿ ಅವುಗಳನ್ನು ಅಂಗೀಕರಿಸಲಾಗಿದೆ ಎಂದು ಘೋಷಿಸಿಕೊಂಡದ್ದು ಬಿಜೆಪಿಯ ಪ್ರಜಾಪ್ರಭುತ್ವ-ವಿರೋಧಿ ಪ್ರವೃತ್ತಿಗೆ ಮತ್ತೊಮ್ಮೆ ಸಾಕ್ಷಿಯಾಗಿದೆ.

ಇಂತಹ ಎಲ್ಲ ವಾಮ ಮಾರ್ಗ ಮತ್ತು ಭ್ರಷ್ಟ ಮಾರ್ಗಗಳಿಂದ ಯಡಿಯೂರಪ್ಪನ ಕುಟುಂಬವೊಂದರ ಆಸ್ತಿ ಶಿವಮೊಗ್ಗವೊಂದರಲ್ಲಿಯೇ ಸುಮಾರು ರೂ. 2000 ಕೋಟಿ ಮೀರುತ್ತದೆಂದು ಹೇಳಲಾಗುತ್ತಿದೆ.

ಸರ್ಕಾರ ನಡೆಸುವ ಅಕ್ರಮ ಡಿನೋಟಿಫಿಕೇಷನ್ ದಂಧೆ:

ರಾಜ್ಯದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಭೂಮಿ ಅವಶ್ಯವಿದ್ದಾಗ ಅಂಥಹ ಭೂಮಿಯನ್ನು ರೈತರಿಂದ ಸ್ವಾಧೀನಪಡಿಸಿಕೊಂಡು ಕೈಗಾರಿಕಾ ಉದ್ದೇಶಕ್ಕಾಗಿ ಕಂಪನಿಗಳಿಗೆ ಹಂಚಿಕೆ ಮಾಡುವ ಅಧಿಕಾರವನ್ನು ಕರ್ನಾಟಕ ಕೈಗಾರಿಕಾ ಭೂ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊಂದಿದೆ. ಇದಕ್ಕೆ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಪೂರಕ ಕಾಯಿದೆಯನ್ನು ಜಾರಿಗೆ ತಂದರು. ಅಲ್ಲಿಂದೀಚೆಗೆ ಸತತವಾಗಿ ಬಂದ ಸರ್ಕಾರಗಳು ಕೈಗಾರಿಕೆಗಾಗಿ ಭೂಮಿ ಅವಶ್ಯ ಎಂಬ ನೆಪವೊಡ್ಡಿ ತಮಗೆ ಬೇಕಾದವರಿಗೆ ಭೂಮಿ ಹಂಚಿಕೆ ಮಾಡಲು ಕೆಐಎಡಿಬಿ ಹೊಂದಿರುವ ಪರಮಾಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಾ ಬಂದಿವೆ. ಯಾವುದೇ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಕೆಐಎಡಿಬಿ ಯು ಅಧಿಸೂಚನೆ (ನೋಟಿಫಿಕೇಷನ್) ಹೊರಡಿಸಿ ಸ್ವಾಧೀನಪಡಿಸಿಕೊಳ್ಳಬಹುದು. ನಂತರ ಬೇಡವಾದಲ್ಲಿ ಅಧಿಸೂಚನೆ ಹಿಂತೆಗೆದುಕೊಳ್ಳಬೇಕು. (ಡಿ-ನೋಟಿಫಿಕೇಷನ್) ಇದರಲ್ಲಿ ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರ ಮುಂಚೂಣಿಯಲ್ಲಿವೆ.

2008ರ ಅಕ್ಟೋಬರ್ ನಿಂದ 2010ರ ಅಕ್ಟೋಬರ್‌ವರೆಗೆ ಯಡಿಯೂರಪ್ಪ 106 ಪ್ರಕರಣಗಳಲ್ಲಿ ಒಟ್ಟು 221.34 ಎಕರೆ ಜಮೀನು ಡಿನೋಟಿಫೈ ಮಾಡಿದ್ದು '500 ಕೋಟಿ ರೂಪಾಯಿಗಳಷ್ಟು ಲಾಭ ಗಳಿಸಿದ್ದಾರೆ ಎಂದು ಹೇಳಲಾಗಿದೆ. ಅಲ್ಲದೆ ಹೀಗೆ ಡಿನೋಟಿಫೈ ಮಾಡಿರುವ ಆಸ್ತಿಯ ಮೌಲ್ಯ 3768.90 ಕೋಟಿ ಸರ್ಕಾರಕ್ಕೆ ನಷ್ಟವಾಗಿದೆ.

ಮಠಗಳು, ಬಿಜೆಪಿ ಹೈಕಮ್ಯಾಂಡ್ ಮತ್ತು ದೇವಸ್ಥಾನಗಳಿಗೆ ತಪ್ಪು ಕಾಣಿಕೆ:

ಹೋದ ತಿಂಗಳು ನಂಜನಗೂಡಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಶ್ರೀ ನಂಜುಂಡೇಶ್ವರ ದೇವರ ಮೇಲೆ ಆಣೆ ಇಟ್ಟು ತಾನು ಇನ್ನು ಮುಂದೆ ಯಾವುದೇ ಹಗರಣ ಅಥವಾ ತಪ್ಪು ಮಾಡುವುದಿಲ್ಲ ಎಂದಿದ್ದ ಯಡಿಯೂರಪ್ಪ, ಇತ್ತ ತನ್ನ ಲೂಟಿ ಕಾರ್ಯವನ್ನು ಮುಂದುವರಿಸಿಯೇ ಇದ್ದಾರೆ. ಇದೇ ತಿಂಗಳು ಮತ್ತೆ ನಂಜನಗೂಡಿಗೆ ಭೇಟಿ ಮಾಡಿ 'ತಪ್ಪು ಮಾಡಿದ್ದರೆ ಮನ್ನಿಸಪ್ಪಾ ನಂಜುಂಡೇಶ್ವರ' ಎಂದು ಮಠಗಳಿಗೆ ಮತ್ತು ತನ್ನ ಬಿಜೆಪಿ ಹೈಕಮ್ಯಾಂಡಿಗೆ ಒಪ್ಪಿಸಿದಂತೆ ನಂಜುಂಡೇಶ್ವರನಿಗೂ ಕಾಣಿಕೆ ಒಪ್ಪಿಸಿದ್ದಾರೆ.

ಹಗರಣಗಳ ಲೆಕ್ಕಾಚಾರಕ್ಕೆ ಕಂಪ್ಯೂಟರ್ ಸಾಲದು, ಸೂಪರ್ ಕಂಪ್ಯೂಟರ್ ಬೇಕು!:

ಕೆಲವು ತಿಂಗಳ ಹಿಂದೆಯಷ್ಟೆ ಜೆಡಿ(ಎಸ್) ಪಕ್ಷದ ಮುಖಂಡರು ಆಧಾರಗಳ ಸಮೇತ ಯಡಿಯೂರಪ್ಪ ಮತ್ತು ಕುಟುಂಬದವರು ಮಾಡಿರುವನ್ನೆಲಾದ ಭ್ರಷ್ಟಾಚಾರಗಳ ಕುರಿತು ಲೋಕಾಯುಕ್ತರಿಗೆ ದೂರು ನೀಡಿದ್ದು, ಆ ಕುರಿತು ತನಿಖೆ ಇನ್ನೂ ನಡೆಯುತ್ತಿದೆ. ಈ ಮಾರ್ಚ್ ತಿಂಗಳ ಕೊನೆ ಹತ್ತಿರ ಬರುತ್ತಿರುವಂತೆಯೇ ಅಕ್ರಮ ಗಣಿಗಾರಿಕೆಯ ರೆಡ್ಡಿ ಬ್ರದರ್ಸ್ ಮತ್ತು ಯಡಿಯೂರಪ್ಪನವರ ದಿನ ಎಣಿಕೆ ಆರಂಭವಾಗುತ್ತದೆ. ಇದರಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿ ವಿವೇಚನಾ ಕೋಟಾದಡಿ ತಮ್ಮ ಪುತ್ರರು, ಮಗಳು ಮತ್ತು ಅಳಿಯನಿಗೆ ಕೋಟ್ಯಾಂತರ ಮೌಲ್ಯದ ಬಿಡಿಎ ನಿವೇಶನಗಳನ್ನು ಮನಸೋಇಚ್ಛೆ ಹಂಚಿಕೆ ಮಾಡಿದ್ದಾರೆ. ಆಪ್ತ ಸಚಿವೆ ಶೋಭಾ ಕರಂದ್ಲಾಜೆ ಕೂಡ ಆದರ್ಶ ಡೆವಲಪರ್ಸ್ ಸಮೂಹದಿಂದ ಕೋಟ್ಯಾಂತರ ರೂಪಾಯಿ ವಂತಿಗೆ ಪಡೆದು ದೊಡ್ಡ ಪ್ರಮಾಣದ ಆಸ್ತಿ ಖರೀದಿಸಿರುವುದು ದಾಖಲೆಗಳ ಸಮೇತ ಸಿಕ್ಕುಬಿದ್ದಿದೆ.

ಯಡಿಯೂರಪ್ಪನವರ ಕುಟುಂಬ ಸದಸ್ಯರು ನಡೆಸಿರುವ ವ್ಯವಹಾರಗಳಲ್ಲಿ ಹಲವಾರು ಕೋಟಿ ತೆರಿಗೆ ನೀಡದೆ ಆದಾಯ ತೆರಿಗೆ ಇಲಾಖೆಗೆ ತೆರಿಗೆ ವಂಚನೆ ಮಾಡಲಾಗಿದೆ ಎನ್ನಲಾಗಿದೆ. ಹೀಗೆ, ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರದ ಭ್ರಷ್ಟಾಚಾರಗಳ ಪ್ರಕರಣಗಳ ಪ್ರಮಾಣದ ಲೆಕ್ಕಾಚಾರಕ್ಕೆ ಸಾಮಾನ್ಯ ಕಂಪ್ಯೂಟರ್ ಸಾಲದ ಸೂಪರ್ ಕಂಪ್ಯೂಟರ್ ಬೇಕು ಎಂಬಂತಿದೆ.

ಲೋಕಾಯುಕ್ತರ ತನಿಖೆಗಳ ತೂಗುಕತ್ತಿ ಯಡ್ಡಿ ಮೇಲೆ:

ಹಿರಿಯ ವಕೀಲರಾದ ಸಿರಾಜಿನ್ ಬಾಷ ಮತ್ತು ಕೆ.ಎನ್. ಬಾಲರಾಜ್‌ರವರು ರಾಜ್ಯಪಾಲರ ಬಳಿ ತೆರಳಿ ಯಡಿಯೂರಪ್ಪನ ಅಕ್ರಮ ಸಂಪತ್ತಿನ ಕುರಿತಂತೆ ಪೂರ್ತಿ ದಾಖಲೆಗಳನ್ನು ತೋರಿಸಿದ್ದಾರೆ. ಇದನ್ನು ಲೋಕಾಯುಕ್ತ ನ್ಯಾಯಾಲಯದಲ್ಲಿ ತನಿಖೆ ನಡೆಸಲು ಈ ವಕೀಲರು ಕೋರಿದ ಅನುಮತಿಗೆ ರಾಜ್ಯಪಾಲರು ಅಸ್ತು ಎಂದಿದ್ದಾರೆ. ಪೂರ್ತಿ ದಾಖಲೆಗಳ ಸಮೇತ ಸುಮಾರು 18 ಪ್ರಕರಣಗಳ ಕುರಿತು ಮುಖ್ಯಮಂತ್ರಿ ಯಡಿಯೂರಪ್ಪನ ವಿರುದ್ಧ ಇದೇ ವಕೀಲರು ಮೊಕದ್ದಮೆ ದಾಖಲಿಸಿದ್ದು, ಲೋಕಾಯುಕ್ತರು ತನಿಖೆ ನಡೆಸುತ್ತಿದ್ದಾರು.

■ ಸರ್ವೇ ನಂ. 56, ಕೆಆರ್ ಪುರಂ, ಬೆಂಗಳೂರಿನಲ್ಲಿ 16 ಎಕರೆಗಳನ್ನು 2008ರಲ್ಲಿ ಯಡಿಯೂರಪ್ಪನವರ ಸರ್ಕಾರ ಡಿನೋಟಿಫೈ ಮಾಡಿದೆ. ನಂತರ ರೂ. 7.4 ಕೋಟಿ ಮೌಲ್ಯದ ಅದೇ ಆಸ್ತಿಯನ್ನು ಮುಖ್ಯಮಂತ್ರಿಯ ಮಕ್ಕಳು ಮತ್ತು ಅಳಿಯ ಶೇ. 75ರಷ್ಟು ಪಾಲುದಾರಿಕೆ ಹೊಂದಿರುವ ಮೆ: ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿ ಕಂಪನಿಗೆ ವರ್ಗಾಯಿಸಲಾಗಿದೆ.

ಪುಟ 15 ಕ್ಕೆ

ಕುಂದಾಪುರ : ದಲಿತರ ಬೇಡಿಕೆಗಳ ಈಡೇರಿಕೆಗೆ ಒತ್ತಾಯ

ದಲಿತ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಿಪಿಐ(ಎಂ) ಪಕ್ಷವು ಕುಂದಾಪುರದಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರರವರ ಮುಖಾಂತರ ಮುಖ್ಯಮಂತ್ರಿಯವರಿಗೆ ಮನವಿ ಅರ್ಪಿಸಿತು.



ರಾಜ್ಯ ಸರಕಾರದ ಬಜೆಟ್‌ನಲ್ಲಿ ದಲಿತರಿಗೆ ಶೇ.24 ರಷ್ಟು ಹಣ ಒದಗಿಸಬೇಕು. ಕೇಂದ್ರ ಸರಕಾರವು ನೀಡುವ ರೀತಿಯಲ್ಲಿ ಶೇ.7 ರಷ್ಟು ಮೀಸಲಾತಿಯನ್ನು ದಲಿತ ಸಮುದಾಯದ ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಬೇಕು. ವಿಶೇಷ ಘಟಕ ಯೋಜನೆಯನ್ನು ಹೆಚ್ಚಿಸಿ ಹಣವನ್ನು ಒಂದೇ ಇಲಾಖೆಯಡಿ ತರಬೇಕು. 2010, 11ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಗಾಗಿ ನಿಗದಿಯಾದ ಶೇ.50 ರಷ್ಟು ಹಣ ಖರ್ಚಾಗದೇ ಇರುವುದರಿಂದ ಸದರಿ ಹಣಕಾಸು ವರ್ಷವು ಮುಗಿಯುವುದರೊಳಗಾಗಿ ಖರ್ಚು ಮಾಡಬೇಕು. ಉಳಿದದ್ದನ್ನು ಕೇಂದ್ರ ಯೋಜನೆ ಆಯೋಗದ ಶಿಫಾರಸಿನಂತೆ ಮುಂದಿನ ಹಣಕಾಸು ವರ್ಷಕ್ಕೆ ಮುಂದುವರಿಸಬೇಕು. ಅಲ್ಲದೆ ಹೊಸ ಜನಗಣತಿಯಲ್ಲಿ ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರಿಗೆ ತಲಾ ಎರಡು ಎಕ್ರೆ ಜಮೀನು ನೀಡಬೇಕು. ಮಾಶಾಸನ ರೂ.1000 ಕ್ಕೆ ಹೆಚ್ಚಿಸಬೇಕು. ಸ್ವಯಂ ಸೇವಕರಿಗೆ ರೂ.3000 ಮಾಸಿಕ ವೇತನ ನೀಡಬೇಕು. ಅಂತ್ಯೋದಯ ಕಾರ್ಡು ನೀಡಬೇಕು.

ದಲಿತ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಅಗತ್ಯವಿರುವಷ್ಟು ಹಾಸ್ಟೆಲುಗಳನ್ನು ಸ್ಥಾಪಿಸಬೇಕು. ಅರ್ಜಿ ಹಾಕುವ ಎಲ್ಲಾ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಪ್ರವೇಶ ಸಿಗಬೇಕು. ಎಲ್ಲಾ ದಲಿತ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯ ಕಟ್ಟಡ ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಬೇಕು. ದಲಿತ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟಕ್ಕಾಗಿ ಒದಗಿಸುವ ಮಾಸಿಕ ಸ್ಟೈಫಂಡ್ ಅನ್ನು ರೂ.1000 ದಿಂದ ರೂ.2000 ವರೆಗೆ ಹೆಚ್ಚಿಸಬೇಕು. ದಲಿತ ವಿದ್ಯಾರ್ಥಿ ವೇತನವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಬೇಕು. ದಲಿತ ಯುವಕರಿಗೆ ಸ್ವಯಂ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಬೇಕು. ಕಡಿಮೆ ಬಡ್ಡಿದರದ ಶೇಕಡಾ 50 ರಷ್ಟು ಸಬ್ಸಿಡಿ ಸಹಿತದ ಸಾಲ ಸೌಲಭ್ಯವನ್ನು ಒಂದು ಬಾರಿ ಮನ್ನಾ ಮಾಡಬೇಕು. ಅಂತರಜಾತಿ ಮತ್ತು ದೇವದಾಸಿ ಪುನರ್ ವಿವಾಹ ಕಾರ್ಯಕ್ರಮಗಳಿಗೆ ಸರಕಾರ 1 ಲಕ್ಷ ರೂ. ಪ್ರೋತ್ಸಾಹಧನ ನೀಡಬೇಕು. ದಲಿತ ಸ್ತ್ರೀ ಶಕ್ತಿ ಸಂಘಗಳಿಗೆ ವಿಶೇಷ ಅನುದಾನ ನೀಡುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಬೇಕು. ಖಾಸಗಿ ವಲಯದಲ್ಲಿ ಮೀಸಲಾತಿ ನೀಡಲು ಸೂಕ್ತ ಕಾನೂನು ತಿದ್ದುಪಡಿ ತರಬೇಕು. ಆಹಾರ ಭದ್ರತೆ ಕಾಯಿದೆ ಜಾರಿ ಮಾಡಿ ಎಲ್ಲರಿಗೂ ರೂ.2.00 ರಂತೆ 35 ಕೆ.ಜಿ. ಅಕ್ಕಿ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್‌ರವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಪಕ್ಷದ ತಾಲ್ಲೂಕು ಸಮಿತಿ ಕಾರ್ಯದರ್ಶಿ ಮಹಾಬಲ ವಡೇರಹೋಬಳಿ, ಪಕ್ಷದ ಮುಖಂಡರಾದ ಯು.ದಾಸ ಭಂಡಾರಿ, ವೆಂಕಟೇಶ್ ಕೋಣಿ, ಎಚ್.ನರಸಿಂಹ, ಅಶ್ವಥ್‌ಕುಮಾರ್, ಪಂಚಾಯತ್ ಸದಸ್ಯರಾದ ನಾಗರತ್ನ ನಾಡ, ಸುಬ್ಬಣ್ಣರವರು ಭಾಗವಹಿಸಿದ್ದರು.

ದಲಿತರ ಅರ್ಜಿ ನಿರ್ಲಕ್ಷ್ಯ : ಪ್ರತಿಭಟನೆ

ಮಂಗಳೂರು ಮಹಾನಗರ ಪಾಲಿಕೆ ದಲಿತ ವಿರೋಧ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ಸಿಪಿಐ(ಎಂ) ಹಾಗೂ ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರು ಮಾರ್ಚ್ 11 ರಂದು ಪಾಲಿಕೆ ಕಚೇರಿ ಒಳಗಡೆಯೇ ಧರಣಿ ನಡೆಸಿ ಪ್ರತಿಭಟನೆ ನಡೆಸಿದರು. ಸಿಂಟೆಕ್ಸ್ ಟ್ಯಾಂಕ್, ಮನೆ ದುರಸ್ತಿ, ಶೌಚಾಲಯ, ವಿದ್ಯುತ್ ಸಂಪರ್ಕಗಳಿಗೆ ಸಂಬಂಧಿಸಿದ ದಲಿತರ 15 ಅರ್ಜಿಗಳನ್ನು ವಿಲೇವಾರಿ ಮಾಡದೆ ಎರಡು ವರ್ಷಗಳಿಂದ ನಿರ್ಲಕ್ಷ್ಯ ವಹಿಸಲಾಗುತ್ತಿರುವ ಬಗೆಗೆ ಪ್ರತಿಭಟನಾಕಾರರು ತೀವ್ರವಾಗಿ ಟೀಕಿಸಿದರು. ಅಲ್ಲದೆ ಸ್ಥಳಕ್ಕೆ ಆಗಮಿಸಿದ ಪಾಲಿಕೆ ಜಂಟಿ ಆಯುಕ್ತರವರನ್ನು ಘೇರಾವ್ ಮಾಡಿದರು.

ಜಂಟಿ ಆಯುಕ್ತ ಹಾಗೂ ಕಂದಾಯ ಅಧಿಕಾರಿಗಳು ಮನವಿಗಳನ್ನು ಸ್ವೀಕರಿಸಿ, ವಾರದೊಳಗಾಗಿ ಅರ್ಜಿಗಳನ್ನು ಇತ್ಯರ್ಥಪಡಿಸುವುದಾಗಿ ಭರವಸೆ ನೀಡಿದರು. ಹೋರಾಟದ ನೇತೃತ್ವವನ್ನು ಮಂಗಳೂರು ನಗರ ಸಿಪಿಐ(ಎಂ) ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ನಗರ ದಲಿತ ಹಕ್ಕುಗಳ ಸಮಿತಿ ಕಾರ್ಯದರ್ಶಿ ಲಿಂಗಪ್ಪ ನಂತೂರು, ಕಾರ್ಯಕರ್ತರುಗಳಾದ ಜಯಕುಮಾರ್, ತಿಮ್ಮಯ್ಯ ಕೊಂಚಾಡಿ, ಸರೋಜಮ್ಮ, ಕುಮುದಾ, ಯೋಗೀಶ್ ಜಪ್ಪಿನಮೊಗರು, ಮನೋಜ್, ಪ್ರಶಾಂತ್ ಮೊದಲಾದವರು ವಹಿಸಿದ್ದರು.

★

ಬಂಟ್ವಾಳ ತಾಲ್ಲೂಕು ಅಕ್ಷರ ದಾಸೋಹ ನೌಕರರ ಸಮಾವೇಶ

ರಾಜ್ಯ ಸರ್ಕಾರ ಅಕ್ಷರದಾಸೋಹ ಕಾರ್ಮಿಕರಿಗೆ ಹಲವಾರು ಸವಲತ್ತುಗಳನ್ನು ನೀಡುವುದನ್ನು ನಿರಾಕರಿಸಲು ಈ ಯೋಜನೆಯನ್ನು ಖಾಸಗೀಕರಿಸಲು ಹೊರಟಿದೆ. ಇದು ಸಾವಿರಾರು ಮಹಿಳಾ ಕಾರ್ಮಿಕರನ್ನು ಬೀದಿಗೆ ತಳ್ಳುವ ಹುನ್ನಾರ; ಈ ಹುನ್ನಾರವನ್ನು ಸಿಐಟಿಯು ವಿರೋಧಿಸುತ್ತದೆ. ಅಕ್ಷರದಾಸೋಹ ಕಾರ್ಮಿಕರು ಸಂಘಟಿತರಾಗಿ ನಿರಂತರ ಹೋರಾಟ ನಡೆಸಿರುವುದರಿಂದ ಗೌರವಧನದ ಹೆಸರಿನ ಕೂಲಿಯನ್ನು ಏರಿಕೆ ಮಾಡುವಂತಹ ಕೆಲವು ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿದೆ. ಇನ್ನಷ್ಟು ಸವಲತ್ತುಗಳನ್ನು ಪಡೆಯಲು ಹೋರಾಟವನ್ನು ತೀವ್ರಗೊಳಿಸಬೇಕಾಗಿದೆ ಎಂದು ದಕ್ಷಿಣಕನ್ನಡ ಜಿಲ್ಲಾ ನೌಕರರ ಸಂಘ (ಸಿಐಟಿಯು) ಪ್ರಧಾನ ಕಾರ್ಯದರ್ಶಿ ಯಶೋಧಾ ಹೇಳಿದ್ದಾರೆ. ಅವರು ಬಿ.ಸಿ.ರೋಡಿನಲ್ಲಿ ಮಾರ್ಚ್ 13 ರಂದು ನಡೆದ ಬಂಟ್ವಾಳ ತಾಲ್ಲೂಕು ಅಕ್ಷರದಾಸೋಹ ನೌಕರರ ಸಮಾವೇಶದಲ್ಲಿ ಮಾತನಾಡುತ್ತಿದ್ದರು.

ಸಮಾವೇಶದ ಅಧ್ಯಕ್ಷತೆಯನ್ನು ಸಂಘಟನೆಯ ಬಂಟ್ವಾಳ ತಾಲ್ಲೂಕು ಸಮಿತಿ ಅಧ್ಯಕ್ಷ ರೇವತಿ ವಹಿಸಿದ್ದರು. ಸಮಾವೇಶವನ್ನುದ್ದೇಶಿಸಿ ಸಂಘಟನೆಯ ಜಿಲ್ಲಾಧ್ಯಕ್ಷೆ ಗಿರಿಜಾ ಮೂಡಬಿದ್ರಿ, ದಕ್ಷಿಣ ಕನ್ನಡ ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಬಂಟ್ವಾಳ ತಾಲ್ಲೂಕು ಸಿಐಟಿಯು ಅಧ್ಯಕ್ಷ ಸಂಜೀವ ಬಂಗೇರ, ಕಾರ್ಯದರ್ಶಿ ರಾಮಣ್ಣ ವಿಟ್ಲ ಮೊದಲಾದವರು ಉಪಸ್ಥಿತರಿದ್ದರು.

★

ಮನೆ ನಿವೇಶನಕ್ಕಾಗಿ ಉಳ್ಳಾಲ ಪುರಸಭಾ ಚಲೋ

ಉಳ್ಳಾಲ ವಲಯ ಡಿವೈಎಫ್‌ಐ ನೇತೃತ್ವದಲ್ಲಿ ಅಲ್ಲಲ್ಲಿ ಸ್ಥಳೀಯವಾಗಿ ಮನೆ ನಿವೇಶನ ಅರ್ಜಿದಾರರನ್ನು ಸ್ಥಳೀಯ ಆಡಳಿತ ಕಚೇರಿಗಳ ಮುಂದೆ ರ್‍ಯಾಲಿ ನಡೆಸುವ ಸರಣಿ ಕಾರ್ಯಕ್ರಮಗಳ ಭಾಗವಾಗಿ ಮೂರನೇ ಕಾರ್ಯಕ್ರಮ ಮಾರ್ಚ್ 14 ರಂದು ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ನಡೆಯಿತು. ಮನೆ ನಿವೇಶನರಹಿತರಿಗೆ ನಿವೇಶನ, ಸರ್ಕಾರಿ ಸ್ಥಳದಲ್ಲಿ ಮನೆ ಕಟ್ಟಿ ವಾಸಿಸುವವರಿಗೆ ಹಕ್ಕುಪತ್ರ ಹಾಗೂ ಮನೆಬಾಡಿಗೆ ನಿಯಂತ್ರಣ ಕಾಯ್ದೆ ಜಾರಿಗೆ ಆಗ್ರಹಿಸಿ ಪುರಸಭಾ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಉಳ್ಳಾಲದ ಮಾಸ್ತಿಕಟ್ಟೆಯಿಂದ ಉಳ್ಳಾಲ ಪುರಸಭೆವರೆಗೆ ನಡೆದ ಪುರಸಭಾ ಚಲೋ ಕಾರ್ಯಕ್ರಮದಲ್ಲಿ ಏಳುನೂರು ಮಂದಿಯಷ್ಟು ನಾಗರೀಕರು ಭಾಗವಹಿಸಿದ್ದರು. ಅಲ್ಲದೆ ಸುಮಾರು ಅಷ್ಟೇ ಸಂಖ್ಯೆಯ ಅರ್ಜಿಗಳನ್ನು ಪುರಸಭಾ ಮುಖ್ಯಾಧಿಕಾರಿಗೆ ಸಲ್ಲಿಸಲಾಯಿತು.

ಪುರಸಭಾ ಕಛೇರಿ ಎದುರುಗಡೆ ಸೇರಿದ ರ್‍ಯಾಲಿಯನ್ನುದ್ದೇಶಿಸಿ ಡಿವೈಎಫ್‌ಐ ದಕ್ಷಿಣಕನ್ನಡ ಜಿಲ್ಲಾಧ್ಯಕ್ಷ ಮುನೀರ್ ಕಾಟಿಪಳ್ಳ ಹಾಗೂ ಡಿವೈಎಫ್‌ಐ ಉಳ್ಳಾಲ ವಲಯ ಕಾರ್ಯದರ್ಶಿ ಅಶೋಕ್ ಶೆಟ್ಟಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಪ್ರಾಂತ ರೈತಸಂಘದ ಜಿಲ್ಲಾ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್‌ಐ ಉಳ್ಳಾಲ ವಲಯ ಅಧ್ಯಕ್ಷ ಮಹಾಬಲ, ಟಿ.ದೆಪ್ಪೆಲಿಮಾರ್, ಜೀವನ್‌ರಾಜ್ ಕುತ್ತಾರ್, ವಾಣಿ ಎಲ್.ಕೊಂಡಾಣ, ಎಲ್‌ಸಿಸಿ ತೊಕ್ಕೊಟ್ಟು, ರೋಹಿದಾಸ ಭಟ್ನಗರ, ಹರ್ಷವರ್ಧನ್ ವಹಿಸಿದ್ದರು. ಕಾರ್ಮಿಕ ನಾಯಕರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ ಮೊದಲಾದವರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬೈಂದೂರು : ಅಕ್ರಮ ಸಕ್ರಮ ಭೂಮಿ, ಮನೆ ನಿವೇಶನ ರಹಿತರ ಹೋರಾಟ ಸಮಿತಿ ರಚನೆ

ಕುಂದಾಪುರ ತಾಲ್ಲೂಕಿನ ಬೈಂದೂರು ಹೋಬಳಿ ವ್ಯಾಪ್ತಿಯೊಳಪಡುವ ಅನಧಿಕೃತವಾಗಿ ಅತಿಕ್ರಮಿಸಿರುವ ಸರ್ಕಾರಿ ಜಮೀನು ಸಕ್ರಮಗೊಳಿಸಲು ಮಂಜೂರಾತಿ ಕೋರಿ ನಮೂನೆ 53 ಮತ್ತು 50 ರಲ್ಲಿ ಅರ್ಜಿ ಸಲ್ಲಿಸಿದ ಬಡ ರೈತ ಕೃಷಿ ಕೂಲಿಕಾರರಿಗೆ ಶೀಘ್ರ ಭೂ ಮಂಜೂರಾತಿ ಹಕ್ಕುಪತ್ರ, ವಸತಿರಹಿತರಿಗೆ ನಿವೇಶನ ಹಕ್ಕುಪತ್ರ ಮಂಜೂರಾತಿಗೆ ಒತ್ತಾಯಿಸಲು, ಅಕ್ರಮ ಸಕ್ರಮ ಭೂಮಿ, ಮನೆ ನಿವೇಶನ ರಹಿತರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಬೈಂದೂರು ಸಿಐಟಿಯು ಕಛೇರಿಯಲ್ಲಿ ಜರುಗಿದ ರೈತ ಕೃಷಿ ಕೂಲಿಕಾರರ ಸಮಾವೇಶವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಇವರು ಉದ್ಘಾಟಿಸಿ ರೈತವಿರೋಧಿ ನೀತಿಗಳ ವಿರುದ್ಧ ಈ ಹಿನ್ನೆಲೆಯಲ್ಲಿ ಏಪ್ರಿಲ್ 19 ರಂದು ರಾಜ್ಯಾದ್ಯಂತ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ರೈತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಸರಕಾರಿ ಕಛೇರಿ ಮುತ್ತಿಗೆ ಹೋರಾಟ ಕಾರ್ಯಕ್ರಮ ಜರುಗಲಿರುವುದನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಗ್ರಾಮಾಂತರ ಪ್ರದೇಶದಲ್ಲಿ ಈಗಾಗಲೇ ಅಕ್ರಮ ಸಕ್ರಮ ಸಮಿತಿಗೆ ಅರ್ಜಿ ಸಲ್ಲಿಸಿದ ಅರ್ಜಿಯ ಕಡತವು ತನಿಖೆಗೆ ಬಾಕಿ ಇರುವುದನ್ನು ಕೂಡಲೇ ತನಿಖೆ ನಡೆಸಿ ಭೂ ಮಂಜೂರಾತಿ ನೀಡಬೇಕು. ವಸತಿರಹಿತರಿಗೆ ನಿವೇಶನ ಹಕ್ಕು ಪತ್ರ ಕೊಡಬೇಕು ಎಂದು ಒತ್ತಾಯಿಸಿ ಏಪ್ರಿಲ್ 19 ರಂದು ಬೈಂದೂರು ವಿಶೇಷ ತಹಶೀಲ್ದಾರರ ಕಛೇರಿ ಮುತ್ತಿಗೆ ಹಾಕುವ ಹೋರಾಟ ಕಾರ್ಯಕ್ರಮ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಅಕ್ರಮ ಸಕ್ರಮ ಭೂಮಿ, ಮನೆ ನಿವೇಶನ ರಹಿತರ ಹೋರಾಟ ಸಮಿತಿ ಅಧ್ಯಕ್ಷರಾಗಿ ಮಂಜ ಪೂಜಾರಿ ಪಡುವರಿ, ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಇವರನ್ನೊಳಗೊಂಡು 29 ಮಂದಿ ಸದಸ್ಯರ ಬೈಂದೂರು ವಲಯ ಹೋರಾಟ ಸಮಿತಿ ಆಯ್ಕೆ ಮಾಡಲಾಯಿತು. ಕಾರ್ಮಿಕ ಮುಖಂಡರಾದ ಕೆ.ಶಂಕರ, ಯು.ದಾಸ ಭಂಡಾರಿ, ಗಣೇಶ ತೊಂಡೆಮಕ್ಕಿ, ರೊನಾಲ್ಡ್ ರಾಜೇಶ ಕ್ವಾಡ್ರಸ್ ಬಿಜೂರು, ಅಬ್ದುಲ್ ಸಮದ್ ಬೈಂದೂರು, ಗಂಗಾಧರ ಆಚಾರ್ಯ ಶಿರೂರು ಉಪಸ್ಥಿತರಿದ್ದರು.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಸಂದರ್ಭದಲ್ಲಿ ರಾಜ್ಯ ಸರ್ಕಾರಗಳ ಸೀಮಿತ ಅಧಿಕಾರ ವ್ಯಾಪ್ತಿಯೊಳಗೆ ಸಹ ಕೇರಳ ರಾಜ್ಯ ದೇಶದ ಮುಂದೆ ಇಟ್ಟಿರುವ ಜನಪರ ಅಭಿವೃದ್ಧಿ ಮಾದರಿ ಕುರಿತು ಲೇಖನ.

ದಾರಿ ತೋರುತ್ತಿದೆ ಕೇರಳ

■ ಪ್ರಕಾಶ್ ಕಾರಟ್

ಕೇರಳದ ಜನ 54 ವರ್ಷಗಳ ಹಿಂದೆ 1957ರ ಏಪ್ರಿಲ್‌ನಲ್ಲಿ ಮೊಟ್ಟ ಮೊದಲ ಕಮ್ಯುನಿಸ್ಟ್ ಸರ್ಕಾರವನ್ನು ಆಯ್ಕೆ ಮಾಡಿದರು. ಮುಖ್ಯಮಂತ್ರಿ ಇಎಂಎಸ್ ನಂಬೂದರಿಪಾದ್ ಸರ್ಕಾರಕ್ಕೆ ಇದೊಂದು ಪರೀಕ್ಷೆಯಾಗಿತ್ತು. ಇಎಂಎಸ್ ಸರ್ಕಾರ ಭೂಸುಧಾರಣೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿತು. ಕನಿಷ್ಠ ಕೂಲಿ ಹೆಚ್ಚಿಸುವುದರೊಂದಿಗೆ, ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿತು. ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಪ್ರಭುತ್ವಗೊಳಿಸಿತು. ಹಾಗೇ ಜನಪರ ನೀತಿ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿತು.

ಈ ಮೊಟ್ಟ ಮೊದಲ ಕಮ್ಯೂನಿಸ್ಟ್ ಸರ್ಕಾರವನ್ನು ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ವಜಾಗೊಳಿಸಿತು. ಆದರೆ 28 ತಿಂಗಳ ಸರ್ಕಾರ ಕೈಗೊಂಡ ನೀತಿಗಳು ಮಾತ್ರ ಎಂದಿಗೂ ಶಾಶ್ವತ. ಕೃಷಿ ವಲಯದಲ್ಲಿ ಕೈಗೊಂಡ ಸುಧಾರಣೆಗಳು, ಪ್ರಜಾಪ್ರಭುತ್ವೀಯ ಬದಲಾವಣೆಗಳು ಕೇರಳ ಮಾತ್ರವಲ್ಲದೆ ಇಡೀ ದೇಶದ ಮೇಲೆ ತನ್ನದೇ ಆದ ಪರಿಣಾಮ ಬೀರಿದೆ.

ಇಎಂಎಸ್ ನಂಬೂದರಿ ಪಾದ್ ಸರ್ಕಾರ ಕೈಗೊಂಡ ನೀತಿಗಳು ಸಮರಧೀರ ಜನಪರ ಹೋರಾಟಗಳ ಮೂಲಕ ಮೂಡಿಬಂದಿದ್ದು. 1930ರ ಮಧ್ಯ ಭಾಗದಲ್ಲಿ ಮಲಬಾರ್ ಪ್ರದೇಶದಲ್ಲಿ ಭೂಮಾಲೀಕರ ವಿರುದ್ದ ರೈತರು ನಡೆಸಿದ ವರ್ಗ ಹೋರಾಟದ ಹಿನ್ನೆಲೆಯಲ್ಲಿ ರೂಪ ಪಡೆದಿದ್ದು. ಅಲೆಪ್ಪಿ ವಲಯದಲ್ಲಿ ಜರುಗಿದ ಸಾಮಾಜಿಕ ಸುಧಾರಣೆ ಹೋರಾಟಗಳು, ಉತ್ತರ ಮಲಬಾರ್‌ನಲ್ಲಿ ನಡೆದ ರೈತರ ಸಂಘರ್ಷಗಳು, ಜಮೀನ್ದಾರಿ ಮತ್ತು ಸಾಮ್ರಾಜ್ಯ ಶಾಹಿ ಶಕ್ತಿಗಳ ವಿರುದ್ಧ ಪುನ್ನಪ್ಪುರ ವಯಲಾರ್‌ನಲ್ಲಿ ನೆಡೆದ ಧೀರೋದಾತ್ತ ಹೋರಾಟಗಳ ಹಿನ್ನೆಲೆಯಲ್ಲಿ ಇಎಂಎಸ್ ಸರ್ಕಾರದ ನೀತಿಗಳು ರೂಪುಗೊಂಡಿದ್ದವು.

1967, 1980, 1987, 1996 ಮತ್ತು 2006ರಲ್ಲಿ ಎಡರಂಗ ಸರ್ಕಾರ ರಚನೆ ಮಾಡಿದ್ದು ಸಹ ನಿರಂತರ ಕೇರಳದ ದುಡಿಯುವ ವರ್ಗದ ಹೋರಾಟಗಳಿಂದಾಗಿಯೆ. ಕೇರಳದಲ್ಲಿ ಎಡರಂಗ ಸರ್ಕಾರಗಳು ಆರಂಭಿಸಿದ ಜನಪರ ಕಾರ್ಯಕ್ರಮಗಳು ಅನನ್ಯವಾಗಿವೆ. ಕೇರಳ ಸಂಪೂರ್ಣ ಸಾಕ್ಷರತೆಯನ್ನು ಸಾಧಿಸಿದೆ. ಶಿಶುಗಳ ಸಾವಿನ ಸಂಖ್ಯೆ ಕೇರಳದಲ್ಲಿ ದೇಶದಲ್ಲಿಯೇ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಕೇರಳದಲ್ಲಿನ ಆರೋಗ್ಯ ಮತ್ತು ಸಾಮಾಜಿಕ ಜೀವನ ಮಟ್ಟ ದೇಶದಲ್ಲಿಯೇ ಉತ್ತಮವಾಗಿದೆ. ಮಾರಕವಾದಂತಹ ಹೊಸ ಆರ್ಥಿಕ ನೀತಿಗಳ ಇಂದಿನ ಕಾಲಘಟ್ಟದಲ್ಲಿಯೂ ಕೇರಳದಲ್ಲಿನ ಸಾರ್ವಜನಿಕ ವಿತರಣಾ ವ್ಯವಸ್ಥೆ ದೇಶದಲ್ಲೇ ಅತ್ಯುತ್ತಮವಾಗಿದೆ. ಕೇರಳದಲ್ಲಿನ ಪ್ರತಿ ವ್ಯಕ್ತಿಯೂ ತನ್ನ ಹಕ್ಕಿಗಾಗಿ ಹೋರಾಟ ಮಾಡಲು ಸಂಘಟಿತವಾಗಿರುವುದರಿಂದ ಇಂತಹ ಕ್ರಾಂತಿಕಾರಿ ನೀತಿಗಳನ್ನು ಜಾರಿಗೆ ತರಲು ಸಾಧ್ಯವಾಗಿದೆ. ಎಡರಂಗ ಸರ್ಕಾರಗಳ ದೂರದೃಷ್ಟಿಯಿಂದಾಗಿ ಇಂದು ಕೇರಳದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಸಾಮಾಜಿಕ ಕಾರ್ಯಕ್ರಮ ಯೋಜನೆಗಳಿಗೆ ದಕ್ಕೆಯಾಗುವುದಿಲ್ಲ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಕೈಗೊಳ್ಳುತ್ತಿರುವ ಹೊಸ ಆರ್ಥಿಕ ನೀತಿಗಳು ಕೇರಳವನ್ನು ಅತಿ ಹೆಚ್ಚಾಗಿ ಬಾದಿಸುತ್ತಿದೆ. ಕೃಷಿ ವಲಯವನ್ನು ವಾಣಿಜ್ಯ ಬೆಳೆಗಳು ಆಕ್ರಮಿಸಿರುವುದು ಕೇರಳದ ಕೃಷಿ ರಂಗದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ವಾಣಿಜ್ಯವನ್ನು ಮುಕ್ತಗೊಳಿಸಿರುವುದು ಮತ್ತು ಕೃಷಿ ಉತ್ಪನ್ನಗಳ ಆಮದಿಗೆ ದೇಶದ ಅರ್ಥವ್ಯವಸ್ಥೆಯನ್ನು ಮುಕ್ತಗೊಳಿಸಿರುವುದು ರೈತರ ಮೇಲೆ ಮಾರಕ ಪರಿಣಾಮಗಳನ್ನು ಬೀರಿದೆ. ಮಲೇಷಿಯಾ, ತೈವಾನ್ ಮುಂತಾದ ಆಗ್ನೇಯ ಏಷ್ಯಾ ದೇಶಗಳ ನಡುವಿನ ಮುಕ್ತ ವಾಣಿಜ್ಯ ಒಪ್ಪಂದ ಇದಕ್ಕೆ ಒಂದು ಉತ್ತಮ ಉದಾಹರಣೆಯಾಗಿದೆ. ಕೆಲವು ಕುಟುಂಬಗಳಿಗಷ್ಟೇ ಸೀಮಿತವಾದಂತಹ ಗುರಿ ನಿಗದಿತ ಪಡಿತರ ವ್ಯವಸ್ಥೆ ಮತ್ತು ನಾಗರಿಕ ಪೂರೈಕೆ ಕೋಟಾಗಳಲ್ಲಿ ಕಡಿತ ಮಾಡಿರುವುದು ಕೇರಳದಲ್ಲಿ ಅಸ್ತಿತ್ವದಲ್ಲಿರುವ ಸಾರ್ವತ್ರೀಕರಣ ವ್ಯವಸ್ಥೆ ಮೇಲೆ ಮಾರಕ ಪರಿಣಾಮ ಬೀರಿದೆ. ರಾಜ್ಯಗಳಿಗೆ ನೀಡಬೇಕಾದ ಆಹಾರ ಧಾನ್ಯಗಳ ಪ್ರಮಾಣದಲ್ಲಿ ಕಡಿತ ಮಾಡಿರುವುದು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಯೋಜನೆಗಳ ಮೇಲೆ ದುಷ್ಪರಿಣಾಮ ಬೀರಿದೆ.

ಇಷ್ಟೆಲ್ಲ ಅಡ್ಡಿ ಆತಂಕಗಳ ನಡುವೆಯೂ ಕೇರಳದಲ್ಲಿ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿನ ಉತ್ಪಾದಕತೆಯಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಸಾಮಾಜಿಕ ವಲಯದಲ್ಲಿ ಪ್ರಶಂಸನೀಯ ಕಾರ್ಯಗಳನ್ನು ಕೈಗೊಂಡಿದೆ. ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಕೇರಳದಲ್ಲಿ ಸಾರ್ವಜನಿಕ ಉದ್ದಿಮೆಗಳು ಸಾಧಿಸಿರುವ ಪ್ರಗತಿ ಇನ್ಯಾವುದೇ ರಾಜ್ಯದಲ್ಲೂ ಕಾಣಲು ಸಾಧ್ಯವಿಲ್ಲ. 2005-06ನೇ ಸಾಲಿನಲ್ಲಿ ಕೇರಳದಲ್ಲಿನ ಬಹುತೇಕ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿದ್ದವು. ಆದರೆ 2009-10ರ ವೇಳೆಗೆ 37 ಕಂಪನಿಗಳ ಪೈಕಿ 32 ಲಾಭದಾಯಕ ಕಂಪನಿಗಳಾಗಿವೆ. ಆಡಳಿತ ವ್ಯವಸ್ಥೆಯಲ್ಲಿ ಕೈಗೊಂಡ ಕ್ರಮಗಳು, ಉದ್ದಿಮೆಗಳನ್ನು ಪುನರ್ ರಚಿಸಿದ್ದು, ಕೇಂದ್ರ ಸರ್ಕಾರದ ಉದ್ದಿಮೆಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದ್ದು, ಕಾರ್ಮಿಕರು ಮತ್ತು ಸಿಬ್ಬಂದಿಯ ಸಂಪೂರ್ಣ ಸಹಕಾರದಿಂದಾಗಿ ಇಷ್ಟೊಂದು ಪ್ರಗತಿ ಸಾಧಿಸಲು ಸಾಧ್ಯವಾಯಿತು. ಸಾರ್ವಜನಿಕ ಉದ್ದಿಮೆಗಳು ಸಹ ಉತ್ಪಾದಕತೆಯಲ್ಲಿ ಗಣನೀಯ ಪ್ರಗತಿ ಸಾಧಿಸುವುದರೊಂದಿಗೆ, ಸಾರ್ವಜನಿಕ ಸೇವೆಯನ್ನು ಯಶಸ್ವಿಯಾಗಿ ಸಾಧಿಸಬಹುದು ಎಂಬುದನ್ನು ಕೇರಳದ ಈ ನಾಲ್ಕೂವರೆ ವರ್ಷಗಳ ಅನುಭವ ಮಾದರಿಯಾಗಿದೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಆರ್ಥಿಕ ನೀತಿಗಳ ಪರಿಣಾಮವಾಗಿಯೂ ಉತ್ಪಾದಕತೆಯನ್ನು ಹೆಚ್ಚಿಸಲು ಎಡರಂಗ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ದುಡಿಯುವ ವರ್ಗ ಮತ್ತು ವಿವಿಧ ಸಮುದಾಯಗಳಿಗೆ ಪರಿಹಾರ ಒದಗಿಸಲು ಹಲವು ರೀತಿಯ ಕ್ರಮಗಳನ್ನು ಕೈಗೊಂಡಿದೆ.

■ ಪ್ರತಿ ಕೆ.ಜಿ. ಅಕ್ಕಿ 2 ರೂ.ನಂತೆ 25 ಲಕ್ಷ ಬಿಪಿಎಲ್ ಕುಟುಂಬಗಳಿಗೆ ಅಕ್ಕಿ ವಿತರಿಸುತ್ತಿದೆ. ಸಹಕಾರ ಕ್ಷೇತ್ರದ ಅಡಿಯಲ್ಲಿ 50 ಸಾವಿರಕ್ಕೂ ಹೆಚ್ಚು ಮಾರಾಟ ಮಳಿಗೆಗಳನ್ನು ಸ್ಥಾಪಿಸಿದ್ದು, ಅಗತ್ಯ ಉತ್ಪನ್ನಗಳನ್ನು ಮುಕ್ತ ಮಾರುಕಟ್ಟೆಗಿಂತ ಶೇಕಡ 15ರಿಂದ 45ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

■ ಸಾಲದ ಸುಳಿಯಲ್ಲಿ ಸಿಲುಕಿರುವ ರೈತರಿಗೆ ನೆರವಾಗುವ ಉದ್ದೇಶದಿಂದ ಸಾಲ ಪರಿಹಾರ ಆಯೋಗವನ್ನು ರಚಿಸಲಾಗಿದೆ. ಆಹಾರ ಭದ್ರತೆ ಯೋಜನೆ ಅಡಿಯಲ್ಲಿ 15 ಲಕ್ಷ ಹೆಕ್ಟೇರ್ ಭೂಮಿಯನ್ನು ಭತ್ತ ಉತ್ಪಾದನೆಗೆ ಒಳಪಡಿಸಲಾಗಿದೆ. ಇದರಿಂದಾಗಿ 1.25 ಲಕ್ಷ ಟನ್‌ನಷ್ಟು ಹೆಚ್ಚು ಭತ್ತ ಉತ್ಪಾದಿಸಲಾಗುತ್ತಿದೆ. ಭತ್ತ ಖರೀದಿ ದರವನ್ನು ಪ್ರತಿ ಕೆ.ಜಿ 7 ರೂ.ಗಳಿಂದ 13 ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ದರ ಇಡೀ ಭಾರತದಲ್ಲೇ ಅತಿ ಹೆಚ್ಚಿನದಾಗಿದೆ.



■ 18 ಲಕ್ಷ ಕುಟುಂಬಗಳಿಗೆ ಸಮಗ್ರ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಮುಂದಿನ ವರ್ಷದ ವೇಳೆಗೆ ಈ ಸಂಖ್ಯೆಯನ್ನು 35ಲಕ್ಷಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ.

■ ಇಎಂಎಸ್ ವಸತಿ ಯೋಜನೆ ಅಡಿಯಲ್ಲಿ ಇದುವರೆಗೂ 3.5 ಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಬಿಪಿಎಲ್ ಕ್ಯಾಟೆಗೆರಿ ಅಡಿಯಲ್ಲಿ ಮನೆ ಇಲ್ಲದ ಎಲ್ಲ ಕುಟುಂಬಗಳಿಗೆ ಮನೆಗಳನ್ನು ಒದಗಿಸುವ ಗುರಿಯನ್ನು ಸರ್ಕಾರ ಹೊಂದಿದೆ.

■ ಮೀನುಗಾರರು, ತೆಂಗಿನ ನಾರು ಮತ್ತು ಕೈಮಗ್ಗ ಕಾರ್ಮಿಕರಿಗೆ ನೆರವಾಗಲು ವಿಶೇಷ ಯೋಜನೆ ರೂಪಿಸಲಾಗಿದೆ. ಅಸಂಘಟಿತ ವಲಯದಲ್ಲಿ ಮೊದಲ ಬಾರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ. 65 ರಿಂದ 80 ಲಕ್ಷ ಕಾರ್ಮಿಕರು ಇದರ ಅಡಿಯಲ್ಲಿ ಅನುಕೂಲ ಪಡೆಯಲಿದ್ದಾರೆ.

■ ಮೀನುಗಾರರ ಸಾಲ ಪರಿಹಾರ ಯೋಜನೆಗೆ 380 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಇದರಿಂದ 80 ಸಾವಿರ ಮೀನುಗಾರಿಕೆ ಕುಟುಂಬಗಳ ಅನುಕೂಲ ಪಡೆದವು. ಮತ್ಸ್ಯ ಕೇರಳಂ ಯೋಜನೆ ರೂಪಿಸಿದ ಪರಿಣಾಮವಾಗಿ ಆಂತರಿಕ ಮೀನುಗಾರಿಕೆ ಉತ್ಪಾದನೆ ಈಗಿನ 0.75 ಲಕ್ಷ ಟನ್‌ಗಳಿಂದ 1.03 ಲಕ್ಷ ಟನ್‌ಗಳಿಗೆ ಏರಿಕೆಯಾಯಿತು.

■ ಕಳೆದ ನಾಲ್ಕು ವರ್ಷಗಳಲ್ಲಿ ಭೂಮಿ ಇಲ್ಲದ ಕುಟುಂಬಗಳಿಗೆ ನಿವೇಶನ ಪಟ್ಟಾಗಳನ್ನು ನೀಡಲಾಯಿತು. ಇದರ ಅಡಿಯಲ್ಲಿ 1,20,300 ಕುಟುಂಬಗಳು ನಿವೇಶನಗಳನ್ನು ಪಡೆದವು. ಅರಣ್ಯ ಬುಡಕಟ್ಟು ಹಕ್ಕು ಕಾಯ್ದೆ ಅಡಿಯಲ್ಲಿ 10 ಸಾವಿರ ಬುಡಕಟ್ಟು ಕುಟುಂಬಗಳು ಭೂಮಿಯನ್ನು ಪಡೆದವು.

■ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 50ರಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿರಿಸಲಾಗಿದೆ.

ಇತ್ತೀಚೆಗೆ ಮಂಡಿಸಿದ 2011-12ನೇ ಸಾಲಿನ ಕೇರಳ ರಾಜ್ಯದ ಬಜೆಟ್, ಆರ್ಥಿಕ ಮತ್ತು ಉದಾರೀಕರಣ ನೀತಗಳನ್ನು ಒಳಗೊಂಡಿರುವ ಕೇಂದ್ರ ಬಜೆಟ್‌ಗೆ ಸಂಪೂರ್ಣ ತದ್ವಿರುದ್ದವಾಗಿದೆ. ಬಜೆಟ್‌ನಲ್ಲಿ ಪ್ರಕಟಿಸಿರುವ ಸಾಮಾಜಿಕ ಕಲ್ಯಾಣ ಯೋಜನೆಗಳು ಗುರುತರವಾಗಿದೆ. ಇದಕ್ಕೊಂದು ಉದಾಹರಣೆ ನೀಡುವುದಾದರೆ ರಾಜ್ಯದಲ್ಲಿ ಜನಿಸುವ ಪ್ರತಿ ಮಗುವಿಗೆ 10 ಸಾವಿರ ರೂ.ಗಳ ಸಹಾಯಧನ ಯೋಜನೆ ಜಾರಿಗೆ ತರಲಾಗಿದೆ. ಮಕ್ಕಳು ಪದವಿ ಪೂರ್ವ ಶಿಕ್ಷಣ ಹಂತಕ್ಕೆ ತಲುಪಿದಾಗ ಮೂಲ ಹಣ ಮತ್ತು ಬಡ್ಡಿ ಹಣವನ್ನು ಭದ್ರತೆಯಾಗಿ ಇಟ್ಟು ಮುಂದಿನ ವಿದ್ಯಾಭ್ಯಾಸಕ್ಕೆ ಸಾಲ ಪಡೆಯಬಹುದು. ಇಲ್ಲವೇ ಕೌಶಲ್ಯ ಅಭಿವೃದ್ಧಿಗೆ ಬಳಕೆ ಮಾಡಬಹುದು ಅಥವಾ ಸ್ವಯಂ ಉದ್ಯೋಗ ಆರಂಭಿಸಲು ಈ ಹಣವನ್ನು ಬಳಕೆ ಮಾಡಬಹುದು. ಬಿಪಿಎಲ್ ಕುಟುಂಬಗಳ ವ್ಯಾಪ್ತಿಗೆ ಬರದೆ ಇರುವವರು ಸಹಾಯಧನದ ಅರ್ಧದಷ್ಟು ಹಣವನ್ನು ಕೊಡುಗೆಯಾಗಿ ನೀಡಬೇಕು.

ಈ ಕಾರ್ಯಕ್ರಮಗಳು ವಿಧಾನಸಭೆ ಚುನಾವಣೆಯಲ್ಲಿ ಎಡರಂಗ ಸರ್ಕಾರ ಜನರ ಮುಂದೆ ಹೋಗಲು ಅವರ ಬಳಿ ಇರುವ ಅಭಿವೃದ್ಧಿ ಯೋಜನೆ ಗಳಾಗಿವೆ. ಮತ್ತೊಂದು ಕಡೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ವಿವಿಧ ಜಾತಿ ಮತ್ತು ಮೂಲಭೂತವಾದಿ ಶಕ್ತಿಗಳ ಬೆಂಬಲ ಹೊಂದಿದೆ. ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಭ್ರಷ್ಟಾಚಾರ ಹಗರಣಗಳಲ್ಲಿ ಮುಳುಗಿರುವುದಷ್ಟೇ ಅಲ್ಲ, ರಾಜ್ಯದಲ್ಲೂ ಭ್ರಷ್ಟಾಚಾರ ಪ್ರಕರಣಗಳಲ್ಲಿ ಮುಳುಗಿದೆ. ಇತ್ತೀಚೆಗಷ್ಟೆ ಯುಡಿಎಫ್‌ನ ಮಾಜಿ ಸಚಿವರೊಬ್ಬರಿಗೆ ನ್ಯಾಯಾಲಯ ಒಂದು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿತು. ಮತ್ತೊಂದು ಪ್ರಕರಣದಲ್ಲಿ ಮಾಜಿ ಸಚಿವ ಕುನ್ಹಲಿಕುಟ್ಟಿ ವಿರುದ್ದದ ಲೈಂಗಿಕ ಹಗರಣ ಪ್ರಕರಣದ ಮರು ತನಿಖೆಗೆ ಆದೇಶಿಸಲಾಗಿದೆ. ಇದಕ್ಕೆ ತದ್ವಿರುದ್ಧವಾಗಿ ವಿ.ಎಸ್.ಅಚ್ಯುತಾನಂದನ್ ನೇತೃತ್ವದ ಎಡರಂಗ ಸರ್ಕಾರ ಭ್ರಷ್ಟಾಚಾರದ ವಿರುದ್ದ ಟೊಂಕ ಕಟ್ಟಿ ನಿಂತಿದೆ.

ಜನಪರ ಕಾರ್ಯಕ್ರಮಗಳ ಆಧಾರದಲ್ಲಿ ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಚುನಾವಣಾ ಕಣಕ್ಕೆ ಇಳಿದಿವೆ. ಹೊಸ ಆರ್ಥಿಕ ನೀತಿಗಳಿಗೆ ಪ್ರತಿಯಾಗಿ ಅಭಿವೃದ್ಧಿ ನೀತಿಗಳನ್ನು ಮುಂದಿಟ್ಟುಕೊಂಡು ಜನರ ಮುಂದೆ ಹೊರಟಿದೆ. ಜಾತ್ಯತೀತ, ಸೌಹಾರ್ದಯುತ ಸಮಾಜವನ್ನು ನಿರ್ಮಾಣ ಮಾಡುವ ಅಜೆಂಡಾದೊಂದಿಗೆ ಜನಾದೇಶ ಪಡೆಯಲು ಮುಂದಾಗಿದೆ.

ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯವನ್ನು ಕೊರೆದು ಹಾಕಿಯಾದರೂ ಸರಿ, ಭಾರತವನ್ನು ಅಮೆರಿಕಾದ ಅಡಿಯಾಳು ಮಿತ್ರನಾಗಿ ಮಾಡುವ ಗುರಿಯ ಸಾಧನೆಗಾಗಿ 'ಓಟಿಗಾಗಿ ನೋಟಿ'ನ ನಾಚಿಕೆಗೇಡಿ ಭ್ರಷ್ಟಾಚಾರವನ್ನು ನಡೆಸಲಾಯಿತು ಎಂಬುದೇ ಇಲ್ಲಿ ಮುಖ್ಯವಾದ ಪ್ರಶ್ನೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವವನ್ನು ಕಾಪಾಡಿಕೊಂಡು, ಬಲಪಡಿಸಲು ಈ ಎಲ್ಲಾ ಆಯಾಮಗಳನ್ನು ಆಮೂಲಾಗ್ರ ಪರೀಕ್ಷಣೆ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಬಹಳ ಮಹತ್ವದ್ದಾಗುತ್ತದೆ. ಯುಪಿಎ ಸರಕಾರ ತಪ್ಪಿಸಬಯಸುತ್ತಿರುವುದು ಇದನ್ನೇ; ಇದರಲ್ಲಿ ಚರ್ಚೆಯನ್ನು ಒಂದು ಪ್ರಸಂಗಕ್ಕಷ್ಟೇ ಸೀಮಿತಗೊಳಿಸಬಯಸುವ ಬಿಜೆಪಿಯ ಸಕ್ರಿಯ ಬೆಂಬಲವೂ ಈ ಸರಕಾರಕ್ಕಿದೆ.

ವಿಕಿಲೀಕ್ಸ್‌ನ ಭಾರತ ಕೇಬಲ್‌ಗಳು : ಸಮಗ್ರ ತನಿಖೆ ಅಗತ್ಯ

ಸರಕಾರ ಕೊನೆಗೂ ವಿಕಿಲೀಕ್ಸ್ ಬಯಲು ಮಾಡಿದ ಒಂದು ಸಂಗತಿಯ ಬಗ್ಗೆ ಸಂಸತ್ತಿನ ಎರಡೂ ಸದನಗಳಲ್ಲಿ ಅಲ್ಪಾವಧಿ ಚರ್ಚೆಗೆ ಒಪ್ಪಲೇಬೇಕಾಗಿ ಬಂದಿದೆ. ಈ ವಿಕಿಲೀಕ್ಸ್ ಇದುವರೆಗೆ ಬಯಲಿಗೆ ತಂದಿರುವ ಸಂಗತಿಗಳು ನಮ್ಮ ವ್ಯವಸ್ಥೆಯೊಳಗೆ ಅಮೆರಿಕಾದ ಆಡಳಿತ ಎಷ್ಟು ವ್ಯಾಪಕವಾಗಿ, ಆಳವಾಗಿ ತೂರಿಕೊಂಡಿದೆಂಬುದನ್ನು ತೋರಿಸಿಕೊಟ್ಟಿದೆ. ಇದನ್ನು ಕಳೆದ ವಾರ ಈ ಅಂಕಣದಲ್ಲಿ ನೋಡಿದ್ದೇವೆ.

ಈ ಸಂಸದೀಯ ಚರ್ಚೆ ಮಾತ್ರ 2008ರ ಓಟಿಗಾಗಿ ನೋಟು ಪ್ರಸಂಗಕ್ಕಷ್ಟೇ ಸೀಮಿತಗೊಂಡಿದೆ. ಯುಪಿಎ-1 ಸರಕಾರ ಏಕಪಕ್ಷೀಯವಾಗಿ ಭಾರತ-ಅಮೆರಿಕಾ ಪರಮಾಣು ವ್ಯವಹಾರ ನಡೆಸಲು ಮುಂದಾದಾಗ ಎಡಪಕ್ಷಗಳು ಬೆಂಬಲ ಹಿಂತೆಗೆದುಕೊಂಡ ನಂತರ ವಿಶ್ವಾಸ ಮತ ಗೆದ್ದ ಸಂದರ್ಭದ ಪ್ರಸಂಗ ಇದು. ಚರ್ಚೆ ಹೀಗೆ ಸೀಮಿತಗೊಳ್ಳಲು ಕಾರಣ ಬಿಜೆಪಿ ಪ್ರಧಾನ ಮಂತ್ರಿಗಳ ವಿರುದ್ಧ ಮಂಡಿಸಿದ ಹಕ್ಕು ಚ್ಯುತಿ ನಿರ್ಣಯದ ಸ್ವರೂಪ. 14ನೇ ಲೋಕಸಭೆ ರಚಿಸಿದ ತನಿಖಾ ಸಮಿತಿಯ ವರದಿಯ ಪ್ರಕಾರ ಈ ಪ್ರಸಂಗದಲ್ಲಿ ಭ್ರಷ್ಟಾಚಾರ ಇರಲಿಲ್ಲ ಎಂದು ಪ್ರಧಾನ ಮಂತ್ರಿಗಳು ಸಂಸತ್ತನ್ನು ತಪ್ಪು ದಾರಿಗೆಳೆದಿದ್ದಾರೆ ಎಂಬ ಆಧಾರದಲ್ಲಿ ಬಿಜೆಪಿ ಈ ಹಕ್ಕು ಚ್ಯುತಿ ಠರಾವನ್ನು ಮಂಡಿಸಿತ್ತು. ಈ ಬಗ್ಗೆ ಮುಂದೆ ನೋಡೋಣ.

ಕಾಂಗ್ರೆಸಿನ ಬೆನ್ನಿಗೆ ಬಿಜೆಪಿ!

ಈ ಪ್ರಕ್ರಿಯೆಯಲ್ಲಿ, ವಿಕಿಲೀಕ್ಸ್ ಬಯಲಿಗೆಳೆದ ಪ್ರಮುಖ ಪ್ರಶ್ನೆಯನ್ನು, ಹೇಗೆ ಭಾರತ-ಅಮೆರಿಕಾ ಸಾಮರಿಕ ಸಂಬಂಧಗಳನ್ನು ಭದ್ರಪಡಿಸಲು ಭಾರತ ಪ್ರಯತ್ನಿಸುತ್ತಿದೆ ಮತ್ತು ಇದರ ಪರಿಣಾಮವಾಗಿ ಭಾರತದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕಾದ ಹಸ್ತಕ್ಷೇಪ ಹೇಗೆ ಹೆಚ್ಚುತ್ತಿದೆ ಎಂಬ ಸಂಗತಿಯ ಮೇಲೆ ಚರ್ಚೆ ಕಾಂಗ್ರೆಸಿಗಂತೂ ಬೇಕಿಲ್ಲ, ಬಿಜೆಪಿಗೂ ಅದು ಬೇಕಿಲ್ಲ ಎಂಬುದು ಸ್ಪಷ್ಟವಾಗಿದೆ. ಈ ಎರಡೂ ಪಕ್ಷಗಳು ಮುಖ್ಯ ಪ್ರಶ್ನೆಯ ಮೇಲಿನ ಚರ್ಚೆಯನ್ನು ತಪ್ಪಿಸಿ ಅದರ ಒಂದು ಭಾಗದ ಮೇಲಷ್ಟೇ ಗಮನ ಸೀಮಿತಗೊಳಿಸುವ ಪ್ರಯತ್ನದಲ್ಲಿವೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಅಮೆರಿಕಾದೊಂದಿಗೆ ಈ ಸಾಮರಿಕ ಸಂಬಂಧಕ್ಕೆ ಅಡಿಪಾಯ ಹಾಕಿದ್ದು ವಾಜಪೇಯಿ ಸರಕಾರವೇ-ಈಗ ಕುಖ್ಯಾತವಾಗಿರುವ ಜಸ್ವಂತ್‌ಸಿಂಗ್-ಸ್ಟ್ರೋಬ್ ತಾಲ್ಬೊಟ್ ಗುಪ್ತ ಮಾತುಕತೆಗಳ ಮೂಲಕ. ವಿಕಿಲೀಕ್ಸ್ ಬಯಲು ಮಾಡಿದ ಸಂದೇಶಗಳು ಇದನ್ನು ಕೂಡ ದೃಢಪಡಿಸಿವೆ. ಅಷ್ಟೇ ಅಲ್ಲ, ಬಿಜೆಪಿ ಅಧಿಕಾರಕ್ಕೆ ಬಂದರೆ ಈ ಭಾರತ-ಅಮೆರಿಕಾ ವ್ಯವಹಾರವನ್ನು ರದ್ದುಗೊಳಿಸುವುದೂ ಇಲ್ಲ, ಪರಾಮರ್ಶೆಗೆ ಒಳಪಡಿಸುವುದೂ ಇಲ್ಲ ಎಂದು ಬಿಜೆಪಿ ಮುಖಂಡತ್ವ ಹೇಳಿರುವುದಾಗಿ ಈ ಸಂದೇಶಗಳು ತೋರಿಸುತ್ತವೆ. ಆದ್ದರಿಂದ, ಭಾರತವನ್ನು ಅಮೆರಿಕಾದ ಅಡಿಯಾಳು ಮಿತ್ರನಾಗಿ ಪರಿವರ್ತಿಸುವ ಪ್ರಶ್ನೆಯಲ್ಲಿ ಬಿಜೆಪಿ ಮತ್ತು



ಕಾಂಗ್ರೆಸ್ ಎರಡೂ ಕೂಡ ಒಂದೇ ದೋಣಿಯಲ್ಲಿವೆ.

ಆದ್ದರಿಂದಲೇ ಸಂಸತ್ತಿನ ಚರ್ಚೆ 'ಓಟಿಗಾಗಿ ನೋಟು' ತನಿಖಾ ಸಮಿತಿಯ ವರದಿಗಷ್ಟೇ ಸೀಮಿತವಾಗಿತ್ತು. ಸದನದಲ್ಲಿ ಒಂದು ಕಾನೂನು ಅಂಶಗಳ ಸಮರ ನಡೆಯಿತಷ್ಟೇ; ಸಮಿತಿ ಇನ್ನಷ್ಟು ತನಿಖೆ ನಡೆಸಬೇಕು ಎಂದು ಶಿಫಾರಸು ಮಾಡಿದುದರ ಅರ್ಥ, ಭ್ರಷ್ಟಾಚಾರ ನಡೆದಿಲ್ಲ ಎಂದು ಅಂತಿಮವಾಗಿ ಸಾಬೀತಾಗಿದೆಯೆಂದೇನೂ ಅಲ್ಲ ಎಂದು ಬಿಜೆಪಿ ವಾದಿಸಿದರೆ, ಕಾಂಗ್ರೆಸ್ ತನಿಖಾ ಸಮಿತಿಯ ಈ ಶಿಫಾರಸು ಭ್ರಷ್ಟಾಚಾರ ನಡೆದಿದೆ ಎಂಬುದು ಸಾಬೀತಾಗಿಲ್ಲ ಎಂದು ತೋರಿಸಿರುವುದಾಗಿ ವಾದಿಸಿದೆ.

ಹೊಲಸು ಅನೈತಿಕತೆಯಷ್ಟೇ ಅಲ್ಲ

ನಿಜಸಂಗತಿಯೆಂದರೆ, ಇಡೀ ದೇಶ, ಅಷ್ಟೇ ಏಕೆ, ಇಡೀ ಜಗತ್ತು ಲೋಕಸಭೆಯಲ್ಲಿ ಕರೆನ್ಸಿ ನೋಟುಗಳ ಕಂತೆಗಳ ನಗ್ನ ಪ್ರದರ್ಶನವನ್ನು ಕಂಡಿತು. ಆ ಸಂದರ್ಭದಲ್ಲಿ ಬಿಜೆಪಿ ತನ್ನ ಕೆಲವು ಎಂ.ಪಿ.ಗಳ ವಿರುದ್ಧ ಪಕ್ಷದ ವಿಪ್ ಉಲ್ಲಂಘಿಸಿ ಮತ ನೀಡಿದ್ದಕ್ಕಾಗಿ, ಇತರ ಕೆಲವರ ಮೇಲೆ ಮತದಾನದಲ್ಲಿ ಗೈರು ಹಾಜರಾಗಿದ್ದಕ್ಕಾಗಿ ಕ್ರಮ ಕೈಗೊಳ್ಳಬೇಕಾಗಿ ಬಂದಿತ್ತು. ಹೀಗಿದ್ದರೂ, ಬಿಜೆಪಿಯ ಮುಖ್ಯ ಆಪಾದನೆಯೆಂದರೆ, ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರದಲ್ಲಿ ಉಳಿಯಲಿಕ್ಕಾಗಿ ಹೇಗಾದರೂ ಒಂದು ಬಹುಮತವನ್ನು ಸೃಷ್ಟಿಸಲು ಅಪಾರ ಹಣತೆತ್ತು ಕುದುರೆ ವ್ಯಾಪಾರದಲ್ಲಿ ತೊಡಗಿತು ಎಂಬುದು. ಆದರೆ ಲಂಚ ತೆಗೆದುಕೊಳ್ಳುವವರು ಕೂಡ ಲಂಚ ಕೊಡುವವರಷ್ಟೇ ಅಪರಾಧಿಗಳಲ್ಲವೇ?

ನಮ್ಮ ಸಂಸದೀಯ ಪ್ರಜಾಪ್ರಭುತ್ವದ ತಳಪಾಯವನ್ನೇ ಬುಡಮೇಲು ಮಾಡುವ ಭ್ರಷ್ಟಾಚಾರದ ಇಂತಹ ಪ್ರಸಂಗಗಳು ನೈತಿಕ ಪ್ರಶ್ನೆಯಷ್ಟೇ ಅಲ್ಲ. ನಿಜ, ಇದು ಅತೀ ಹೊಲಸು ಅನೈತಿಕತೆ. ಇನ್ನೂ ಮಹತ್ವದ ಸಂಗತಿಯೆಂದರೆ, ಯುಪಿಎ ಸರಕಾರ ಅಧಿಕಾರದಲ್ಲಿ ಉಳಿಯುವುದನ್ನು ಖಾತ್ರಿ ಮಾಡಿಕೊಳ್ಳಲು ಇಂತಹ ಕ್ರಮಗಳಿಗೆ ಇಳಿಯಲಾಯಿತು;



ಪರಮಾಣು ವ್ಯವಹಾರವನ್ನು ಯಶಸ್ವಿಯಾಗಿ ಕುದುರಿಸಲು ಇದು ಅನಿವಾರ್ಯವಾಗಿದ್ದರೆ, ಈ ಪರಮಾಣು ವ್ಯವಹಾರ ಭಾರತ ಅಮೆರಿಕಾದ ಅಡಿಯಾಳು ಮಿತ್ರನಾಗಿರುವ ಸಾಮರಿಕ ಮೈತ್ರಿಯನ್ನು ಬೆಸೆಯುವ ಪ್ರಕ್ರಿಯೆಯ ಜೀವಾಳವಾಗಿತ್ತು.

ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯವನ್ನು ಕೊರೆದು ಹಾಕಿಯಾದರೂ ಸರಿ, ಈ ಗುರಿ ಸಾಧನೆಗಾಗಿ ಇಂತಹ ನಾಚಿಕೆಗೇಡಿ ಭ್ರಷ್ಟಾಚಾರವನ್ನು ನಡೆಸಲಾಯಿತು ಎಂಬುದೇ ಇಲ್ಲಿ ಮುಖ್ಯವಾದ ಪ್ರಶ್ನೆ. ಆದ್ದರಿಂದ ನಮ್ಮ ಸಂಸದೀಯ ಪ್ರಜಾಪ್ರಭುತ್ವವನ್ನು ಕಾಪಾಡಿಕೊಂಡು, ಬಲಪಡಿಸಲು ಈ 'ಓಟಿಗಾಗಿ ನೋಟಿ'ನ ಎಲ್ಲಾ ಆಯಾಮಗಳನ್ನು ಆಮೂಲಾಗ್ರವಾಗಿ ಪರೀಕ್ಷಿಸುವುದು ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವುದು ಬಹಳ ಮಹತ್ವದ್ದಾಗುತ್ತದೆ. ಸರಕಾರ ತಪ್ಪಿಸಬಯಸುತ್ತಿರುವುದು ಇದನ್ನೇ; ಇದರಲ್ಲಿ ತನಿಖೆಯನ್ನು ಓಟಿಗಾಗಿ ನೋಟು ಪ್ರಸಂಗಕ್ಕಷ್ಟೇ ಸೀಮಿತಗೊಳಿಸಬಯ್ಯುಸುವ ಬಿಜೆಪಿಯ ಸಕ್ರಿಯ ಬೆಂಬಲ ಈ ಸರಕ್ಕಾರಕ್ಕಿದೆ.

ದೇಶದ ಭವಿಷ್ಯಕ್ಕೆ ಅನಿಷ್ಟಕಾರಿ

ಸಂಸತ್ತಿನಲ್ಲಿ ನೋಟುಗಳ ಈ ಹಗರಣಕಾರೀ ಪ್ರದರ್ಶನಕ್ಕೆ ದಾರಿ ಮಾಡಿಕೊಟ್ಟ ಸಂಗತಿಯ ಎಲ್ಲ ಅಂಶಗಳ ಬಗ್ಗೆ ಒಂದು ತನಿಖೆ ನಡೆಸದಿದ್ದರೆ, ನಿರಾಕರಣೆಯಲ್ಲಿ ಬದುಕುವಂತಾಗುತ್ತದೆ. ಆದರೆ ಸರಕಾರ ದಿಲ್ಲಿ ಪೋಲೀಸರಿಗೆ ತನಿಖೆ ಮುಂದುವರೆಸಲು ಅವಕಾಶ ನೀಡುವ, ಅದರಲ್ಲೂ ಓಟಿಗಾಗಿ ನೋಟು ತನಿಖಾ ವರದಿಯಲ್ಲಿ ಹೆಸರಿಸಿದ ಮೂವರು ವ್ಯಕ್ತಿಗಳ ಮೇಲಿನ ಭ್ರಷ್ಟಾಚಾರದ ತನಿಖೆ ನಡೆಸುವ ಭರವಸೆಯನ್ನಷ್ಟೇ ಕೊಟ್ಟಿದೆ. ಇದು ಸಾಲದು, ಅಷ್ಟೇ ಅಲ್ಲ, ಒಂದು ಅಮೆರಿಕಾ-ಪರ ನಿಲುವು ಮತ್ತು ಅಜೆಂಡಾವನ್ನು ಸಕ್ರಿಯವಾಗಿ ಅನುಸರಿಸಲು ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವವರನ್ನು ತಡೆಯುವ ಕೆಲಸವನ್ನೂ ಇದು ಮಾಡಲಾರದು. ಇದು ಭಾರತದ ಭವಿಷ್ಯದ ಹಿತಗಳಿಗೆ ಅನಿಷ್ಟಕಾರಿಯಾಗಲಿದೆ.

ಆದ್ದರಿಂದ ಈ ಯುಪಿಎ ಸರಕಾರ ವಿಕಿಲೀಕ್ಸ್ ಬಯಲಿಗೆ ತಂದ ಎಲ್ಲ ಅಂಶಗಳ ತನಿಖೆ ಮಾಡುವಂತೆ ಒತ್ತಡ ಉಂಟು ಮಾಡಬೇಕಾಗಿದೆ.

ಏಕೆಂದರೆ ಈ ಅಮೆರಿಕಾ ಆಡಳಿತ ಭಾರತದ ಧೋರಣೆಗಳ ಚೌಕಟ್ಟು ಯಾವ ದಿಕ್ಕಿನಲ್ಲಿರಬೇಕು ಎಂಬುದರ ಮೇಲೆ ಪ್ರಭಾವ ಬೀರಲು, ಆಮೂಲಕ ನವ-ಉದಾರವಾದಿ ಆರ್ಥಿಕ ಧೋರಣೆಗಳನ್ನು ಕ್ರೋಢೀಕರಿಸಲು ಸಕ್ರಿಯ ಪ್ರಯತ್ನದಲ್ಲಿ ತೊಡಗಿದೆ ಎಂಬ ಸಂಗತಿಯತ್ತ ಈ ಕೇಬಲ್‌ಗಳು ಬೊಟ್ಟು ಮಾಡುತ್ತಿವೆ. ನಮ್ಮ ಸಂಸದೀಯ ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಳ್ಳಲು ಮತ್ತು ಬಲಪಡಿಸಲು ಸರಕಾರ ಇಂತಹ ಸಮಗ್ರ ತನಿಖೆ ಮಾಡುವಂತೆ ಒತ್ತಡ ಹಾಕಬೇಕಾಗಿದೆ.

(ಮಾರ್ಚ್ 27, 2011 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕೀಯ ಆಧರಿಸಿ)

ಮಧ್ಯಪ್ರಾಚ್ಯ ದೇಶಗಳ ನೆಲದೊಳಗೆ ಜಗತ್ತಿನಲ್ಲಿರುವ ಒಟ್ಟು ತೈಲ ಸಂಪತ್ತಿನ ಶೇ.55 ರಷ್ಟು ಇದೆ. ಇಂಥ ಅಗಾಧ ಪ್ರಮಾಣದ ದ್ರವ ಬಂಗಾರವನ್ನು ಹೊಂದಿರುವ ದೇಶದ ಅಧಿಕಾರಸ್ಥರನ್ನು, ಜನರನ್ನು ಕುಕ್ಕಿತಿನ್ನಲು ಹೊರಟಿರುವ ಸಾಮ್ರಾಜ್ಯಶಾಹಿ ಹದ್ದಿನ ಸಂಚಿನಲ್ಲಿ ಆಶ್ಚರ್ಯವಾದರೂ ಏನಿದೆ?

ತೈಲಕ್ಕಾಗಿ ಲಿಬ್ಯಾದ ಮೇಲೆ ಸಾಮ್ರಾಜ್ಯಶಾಹಿ ದಾಳಿ

ಮಾರ್ಚ್ 20 ರಿಂದ ಫ್ರೆಂಚ್, ಬ್ರಿಟಿಷ್, ಅಮೆರಿಕನ್ ವಿಮಾನಗಳು, ಸಬ್ ಮೇರಿನ್‌ಗಳು, ಯುದ್ಧ ಹಡಗುಗಳಿಂದ ಲಿಬ್ಯಾದ ಮೇಲೆ ಮಿಲಿಟರಿ ದಾಳಿ ಆರಂಭವಾಗಿದೆ. ಒಂದೇ ದಿನದಲ್ಲಿ 58 ವಿಮಾನ ದಾಳಿಗಳನ್ನು ಮಾಡಲಾಗಿದೆ. ಅಮೆರಿಕ-ಪ್ರಾಯೋಜಿತ ಮತ್ತು ನಾಟೋ-ಸಂಯೋಜಿತ ದಾಳಿಗಳ ಉದ್ದೇಶ ಜನರನ್ನು ಗದ್ದಾಫಿ ಸರ್ಕಾರದ ದಾಳಿಗಳಿಂದ ಜನತೆಯ ರಕ್ಷಣೆ ಎನ್ನಲಾಗಿದೆ. ಆದರೆ ಈ ದಾಳಿಗಳಿಂದಲೇ ಜನಸಾಮಾನ್ಯರು ಸಾವು-ನೋವುಗಳಿಗೆ ಈಡಾದ ವರದಿಗಳು ಬಂದಿವೆ. ಹಿಂದೆ ಯುಗೋಸ್ಲಾವಿಯ, ಇರಾಕ್ ಮತ್ತು ಈಗಲೂ ಮುಂದುವರೆಯುತ್ತಿರುವ ಅಫ್ಘಾನಿಸ್ತಾನದ "ಮಾನವೀಯ ಮಿಲಿಟರಿ ದಾಳಿಗಳು" ಯಾವತ್ತೂ ಜನರ ರಕ್ಷಣೆ ಮಾಡಲಾರವು. ಬದಲಾಗಿ ಸಾವು-ನೋವುಗಳು ವಿಪರೀತವಾಗಿ ಹೆಚ್ಚುತ್ತವೆ ಎಂದು ದಿನೇ ತೋರಿಸುತ್ತಿವೆ. ಸಾಮ್ರಾಜ್ಯಶಾಹಿ ನಾಟೋ ಕೂಟದ ಉದ್ದೇಶ ಅದರ ತೈಲ ಹಿತಾಸಕ್ತಿ ಕಾಪಾಡುವುದು. ಅದಕ್ಕಾಗಿ ಲಿಬ್ಯಾದ ಸರ್ಕಾರವನ್ನು ಬದಲಾಯಿಸಲು ಈ ಮಿಲಿಟರಿ ಅತಿಕ್ರಮಣ.

ಬಹರೇನ್ ಸರ್ವಾಧಿಕಾರಿಯ ಮೇಲೆ ಧಾಳಿ ಏಕಿಲ್ಲ?

ಇದು ಅಮೆರಿಕ ಇತರ ಅರಬ್ ದೇಶಗಳಲ್ಲಿ ಜನರ ರಕ್ಷಣೆಗೆ ಏನು ಮಾಡುತ್ತಿದೆ ಎಂಬುದರಿಂದ ತಿಳಿಯುತ್ತದೆ. ಬಹ್ರೈನಿನಲ್ಲಿ ಅಲ್ಲಿಯ ಅಮೆರಿಕ-ಬೆಂಬಲಿತ ಸರ್ವಾಧಿಕಾರಿ ಕಲೀಫಾ ವಿರುದ್ಧ ಜನತೆಯ ದಂಗೆ ಹತ್ತಿಕ್ಕಲು ಸೌದಿ ಅರೇಬಿಯಾದಿಂದ ಸೈನ್ಯ ಕಳಿಸಲಾಗಿದೆ. ಸೈನ್ಯ ದಂಗೆಯೆದ್ದ ಜನತೆಯ ಟೆಂಟುಗಳಿಗೆ ಬೆಂಕಿ ಹಾಕಿದೆ. ದಂಗೆ ಹತ್ತಿಕ್ಕಲು ಜನತೆಯ ಮೇಲೆ ವ್ಯಾಪಕ ಮಿಲಿಟರಿ ದಾಳಿ ನಡೆದಿದ್ದು ತೀವ್ರ ಸಾವು-ನೋವುಗಳು ಆಗಿವೆ. ಮಿಲಿಟರಿ ಆಡಳಿತ ಘೋಷಿಸಲಾಗಿದೆ. ಇಲ್ಲೂ ಅಮೆರಿಕ ಮಿಲಿಟರಿ ಮಧ್ಯ ಪ್ರವೇಶ ಮಾಡುತ್ತಿದೆ. ಆದರೆ ಅದು ಕಲೀಫಾ ಬೆಂಬಲವಾಗಿ, ಜನತೆಯ ಮೇಲೆ ದಾಳಿ ಮಾಡಲು. 1783 ರಿಂದ ಆಳ್ವಿಕೆ ಮಾಡುತ್ತಿರುವ ಮತ್ತು ಈಗ ಜನರ ಮೇಲೆ ತೀವ್ರ ಹಿಂಸಾಚಾರ ಮಾಡುತ್ತಿರುವ ಕಲೀಫಾ ಅಮೆರಿಕದ ಭಾರೀ ಆರ್ಥಿಕ-ಮಿಲಿಟರಿ ನೆರವಿಂದಲೇ ಬದುಕಿರುವುದು. ಬಹ್ರೈನಿಗೆ 2003 ರಿಂದ ಈಚೆಗೆ 10 ಕೋಟಿ ಡಾಲರುಗಳ ನೆರವು ನೀಡಿದೆ. ಅಮೆರಿಕದ ಬೆಂಬಲವಿಲ್ಲದೆ ಕಲೀಫಾ ಆಳ್ವಿಕೆ ಒಂದು ದಿನವೂ ನಡೆಯಲಾರದು. ಆದರೆ ಕಲೀಫಾ ಇಲ್ಲದೆ ಬಹ್ರೈನಿನಲ್ಲಿರುವ ಅಮೆರಿಕದ 5 ನೇ ನೌಕಾಪಡೆ ನೆಲೆ ಮತ್ತು ಪಶ್ಚಿಮ ಏಶ್ಯಾದ ಮೇಲೆ ಮಿಲಿಟರಿ ಅಧಿಪತ್ಯ ಹೆಚ್ಚು ದಿನ ಇರಲಾರದು.

ಯೆಮನ್ ಬೇರೆಯಲ್ಲ

ಅದೇ ಸ್ಥಿತಿ ಯೆಮೆನಿನಲ್ಲಿ ಇದೆ. ಅಮೆರಿಕ ಬೆಂಬಲಿತ ಅಧ್ಯಕ್ಷನ ಸಾಲೆ ವಿರುದ್ಧ, ಆತನ ಸರ್ಕಾರ ಮತ್ತು ಮಿಲಿಟರಿಯ ವಿಭಾಗಗಳೇ ಜನತಾ ದಂಗೆಗೆ ಬೆಂಬಲ ಕೊಟ್ಟಿವೆ. ಆದರೆ ಅಮೆರಿಕದ ಉಪಾಧ್ಯಕ್ಷರು "ಸರ್ಕಾರವನ್ನು ಅಸ್ಥಿರಗೊಳಿಸಿದರೆ ಅಲ್-ಖೈದಾ



ಅಪಾಯ ಹೆಚ್ಚುತ್ತದೆ" ಎಂದು ಜನತೆಗೆ ಎಚ್ಚರಿಕೆ ಕೊಟ್ಟಿದ್ದಾರೆ ! ತನ್ನ ನಾಗರಿಕರ ಮೇಲೆ ಎಲ್ಲಾ ಥರದ ಅತ್ಯಾಚಾರಗಳನ್ನು ದಶಕಗಳ ಕಾಲ (ಇತ್ತೀಚಿನ ಗಾಜಾ ಪಟ್ಟಿ ದಾಳಿಗಳಲ್ಲಿ ಸೇರಿದಂತೆ) ಎಸಗಿರುವ ಮತ್ತು ಎಲ್ಲಾ ವಿಶ್ವಸಂಸ್ಥೆಯ ನಿರ್ಣಯಗಳನ್ನು ಉಲ್ಲಂಘಿಸಿರುವ ಇಸ್ರೇಲಿಗೆ ಅಮೆರಿಕ ಕೊಟ್ಟಿರುವ 'ಶಿಕ್ಷೆ'ಯಂತೂ ಎಲ್ಲರಿಗೂ ಗೊತ್ತೇ ಇದೆ. ಹೀಗಿದೆ ಅಮೆರಿಕದ "ಜನತೆಯ ರಕ್ಷಣೆಗೆ ಮಿಲಿಟರಿ ದಾಳಿ"ಯ ಗೋಮುಖ ವ್ಯಾಘ್ರ ನೀತಿ.

ವಿರೋಧದ ದನಿ

ನಾಟೋ ದಾಳಿಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ನಿರ್ಣಯದ ಅಸ್ತು ಇದೆ. 'ಅಂತರ್ರಾಷ್ಟ್ರೀಯ ಬೆಂಬಲ' ಇದೆ ಎನ್ನಲಾಗಿದೆ. ಭದ್ರತಾ ಸಮಿತಿಯಲ್ಲಿ ಐದು (ಭಾರತ, ರಶ್ಯಾ, ಚೀನಾ, ದಕ್ಷಿಣ ಆಫ್ರಿಕಾ, ಬ್ರೆಜಿಲ್) ದೇಶಗಳು ನಿರ್ಣಯವನ್ನು ವಿರೋಧಿಸಿದ್ದು ಮತದಾನದಲ್ಲಿ ಭಾಗವಹಿಸಲಿಲ್ಲ. ಅಲ್ಲದೆ ನಿರ್ಣಯ ಲಿಬ್ಯಾದ ಮೇಲೆ ವಿಮಾನ ಹಾರಾಟ ನಿಷೇಧ ಮತ್ತು ಅದನ್ನು ಪಾಲಿಸಲು ಅಗತ್ಯ ಮಿಲಿಟರಿ ಕ್ರಮಕ್ಕೆ ಮಾತ್ರ ಸೀಮಿತವಾಗಿದೆ. ಲಿಬ್ಯಾದ ಸಾರ್ವಭೌಮತೆ ಅತಿಕ್ರಮಣ ಮಾಡುವ ಮಿಲಿಟರಿ ದಾಳಿಗೆ ನಿರ್ಣಯದ ಅನುಮತಿ ಇಲ್ಲ ಎಂದು ಹೇಳಿ ದಾಳಿಯನ್ನು ತೀವ್ರವಾಗಿ ಖಂಡಿಸಿವೆ. ನಿರ್ಣಯಕ್ಕೆ ಬೆಂಬಲ ನೀಡಿದ್ದ ಅರಬ್ ಲೀಗ್ ಸಹ ನಾಟೋ ಮಿಲಿಟರಿ ದಾಳಿಯನ್ನು ಖಂಡಿಸಿದೆ. ಅದು ಲಿಬ್ಯನ್ ಜವತೆಯ ರಕ್ಷಣೆಯ ಘೋಷಿತ ಉದ್ದೇಶಕ್ಕೆ ವಿರುದ್ಧವಾಗಿದೆ ಎಂದಿದ್ದಾರೆ. ನಾಟೋ ಕೂಟದ ಒಳಗೆ ಸಹ ತೀವ್ರ ಮತಬೇಧ ಉದ್ಭವಿಸಿದೆ. ಜರ್ಮನಿ, ತುರ್ಕಿ, ನಾರ್ವೆ ಲಿಬ್ಯಾದ ಒಳಗೆ ಮಿಲಿಟರಿ ದಾಳಿಯನ್ನು ವಿರೋಧಿಸಿವೆ. ಬ್ರಿಟನ್, ಫ್ರಾನ್ಸ್ ಮಿಲಿಟರಿ ದಾಳಿಯ ಏಕಪಕ್ಷೀಯ ನಿರ್ಧಾರ ತೆಗೆದು ಕೊಳ್ಳುತ್ತಿವೆ ಎಂದು ದೂರಿವೆ. ಮಿಲಿಟರಿ ದಾಳಿಯ ಉದ್ದೇಶಗಳ ಬಗೆಗೂ ಹಲವು ದನಿಗಳು ಕೇಳಬಂದಿವೆ. ಲಿಬ್ಯಾ ಸರ್ಕಾರ ಬದಲಾವಣೆ ದಾಳಿಯ ಉದ್ದೇಶ 'ಅಲ್ಲ'. ಗದ್ದಾಫಿ ಕಾಂಪೌಂಡಿನ ಮೇಲೆ ದಾಳಿ ತಪ್ಪು ಎಂದು ಹಲವು ದೇಶಗಳು ಹೇಳುತ್ತಿದ್ದರೆ, ಬ್ರಿಟನ್ ವಿದೇಶ ಮಂತ್ರಿ ಬೇರೆ ರಾಗ ತೆಗೆದಿದ್ದಾರೆ.

ಟುನೀಶಿಯಾ-ಈಜಿಪ್ಟುಗಳಿಂದ ಆರಂಭವಾಗಿ ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಏಶ್ಯಾದ ಅರಬ್ ದೇಶಗಳಲ್ಲಿ ಜನತಾ ದಂಗೆ ಹಬ್ಬುತ್ತಿದೆ. ಅದರ ಹಿಂದೆ ಇರುವುದು ಸರ್ವಾಧಿಕಾರಿ ಅಧ್ಯಕ್ಷರು, ದೊರೆಗಳ ವಿರುದ್ಧ ತೀವ್ರ ಅತೃಪ್ತಿ ಮತ್ತು ಆಕ್ರೋಶ. ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ತೈಲ ಹಿತಾಸಕ್ತಿ ಕಾಪಾಡಲು ಈ ಅಧ್ಯಕ್ಷರು, ದೊರೆಗಳನ್ನು ಮಿಲಿಟರಿ-ಆರ್ಥಿಕ ನೆರವುಗಳ ಮೂಲಕ ಜನತೆಯ ಮೇಲೆ ಹೊರಿಸಿದೆ. ಇತ್ತೀಚೀನ ಆರ್ಥಿಕ ಬಿಕ್ಕಟ್ಟಿನಿಂದ ಉಂಟಾದ ತೀವ್ರ ಉದ್ಯೋಗ ಕಡಿತ ಮತ್ತು ಬೆಲೆ ಏರಿಕೆಯ ಫಲವಾಗಿ ಆಕ್ರೋಶ ಸಿಡಿದಿದೆ. ಜನತೆಯ ದಂಗೆ ಹಲವು ದಶಕಗಳ ಸಾಮ್ರಾಜ್ಯಶಾಹಿಯ ಮಿಲಿಟರಿ ರಾಜಕೀಯ ಅಧಿಪತ್ಯಕ್ಕೆ ತೀವ್ರ ಸವಾಲು ಹಾಕಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಅಧಿಪತ್ಯ ಪುನಸ್ಥಾಪಿಸಲು ಲಿಬ್ಯಾದ ನೆಪವನ್ನು ಆರಿಸಿಕೊಂಡು ಮಿಲಿಟರಿ ಮಧ್ಯಪ್ರವೇಶ ಮಾಡಹತ್ತಿದೆ.

ಲಿಬ್ಯಾದ ಸ್ಥಿತಿ ಬೇರೆ ಅರಬ್ ದೇಶಗಳಿಗಿಂತ ಭಿನ್ನವಾಗಿದೆ. ಕ್ಯಾಸ್ಟ್ರೋ ಅವರು ಹೇಳಿರುವಂತೆ ಗದ್ದಾಫಿಯವರ ಆಡಳಿತದಿಂದಾಗಿ ಆಫ್ರಿಕಾದಲ್ಲೇ ಅತ್ಯಂತ ಹೆಚ್ಚಿನ ಮಾನವ ಅಭಿವೃದ್ಧಿ ಸೂಚಕ ಮತ್ತು ಸರಾಸರಿ ಆಯುಷ್ಯ ಹೊಂದಿದೆ. ಆಹಾರ ಭದ್ರತೆ, ಸಾಮಾಜಿಕ ಕಲ್ಯಾಣ ಕ್ರಮಗಳು, ಶಿಕ್ಷಣ, ಆರೋಗ್ಯ ಸೇವೆಗಳ ಸುವ್ಯವಸ್ಥೆ

ಪುಟ 14 ಕ್ಕೆ

ಇದು 'ಪ್ರಜಾವಾಣಿ' ಪತ್ರಿಕೆಯಲ್ಲಿ ಮಾರ್ಚ್ 20 ರಂದು ಪ್ರಕಟವಾದ ವರದಿ. ಪ್ರತ್ಯಕ್ಷದರ್ಶಿಯೊಬ್ಬರ ಯಾವುದೇ ಪೂರ್ವಾಗ್ರಹಗಳಿಲ್ಲದ ನೀರವಾದ ಈ ಅಭಿಪ್ರಾಯಗಳನ್ನು ನೋಡಿ, ಬಾಂಬ್ ದಾಳಿಗೆ ನಿಂತ ಅಮೇರಿಕಾ, ನ್ಯಾಟೋ ಕೂಟದ ಹೇಳಿಕೆಯನ್ನೂ ನೋಡಿ.

'ಲಿಬಿಯಾ ಪರಿಸ್ಥಿತಿ ನಾವಂದುಕೊಂಡಂತಿಲ್ಲ'!

'ಲಿಬಿಯಾದ ಇಂದಿನ ಪರಿಸ್ಥಿತಿಯ ಬಗ್ಗೆ ಬರುತ್ತಿರುವ ವರದಿ ಸಂಪೂರ್ಣ ಏಕಮುಖವಾಗಿದೆ. ಅಲ್‌ಜಝೀರಾ ಚಾನೆಲ್ ಗಡಾಫಿ ವಿರೋಧಿ. ಅಲ್ಲಿನ ಶೇ.95 ರಷ್ಟು ಜನರಿಗೆ 'ಓ ಅಲ್ಲಾ, ಓ ಮುಅಮ್ಮರ್, ಓ ಲಿಬಿಯಾ' (ಅಲ್ಲಾ ಒಬ್ಬನೇ, ಮುಮ್ಮರ್ ಒಬ್ಬರೇ, ಲಿಬಿಯಾ ಒಂದೇ) ಎಂಬುದೇ ಘೋಷವಾಕ್ಯ. ಆದರೆ ಕಳೆದ 42 ವರ್ಷಗಳಿಂದ ಆಳ್ವಿಕೆ ನಡೆಸುತ್ತಿರುವುದರಿಂದ ಅವರ ರಾಜಕೀಯ ವಿರೋಧಿಗಳು ಈಗ ಪರಿಸ್ಥಿತಿ ಲಾಭ ಪಡೆಯುತ್ತಿದಾರೆ.'.

ಲಿಬಿಯಾದ ರಾಜಧಾನಿ ಟ್ರಿಪೋಲಿಯಿಂದ 70 ಕಿ.ಮೀ ದೂರದ ಸಬ್ರತಾ ಪಟ್ಟಣದ 'ಏಪ್ರಿಲ್ 7 ಕಲಾ, ವಿಜ್ಞಾನ ಕಾಲೇಜು' ಇಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ಬಳ್ಳಾರಿ ಮೂಲದ ಆರ್.ಚನ್ನಬಸವಗೌಡ ಅವರ ಅನುಭವದ ನುಡಿಗಳಿವು.

ಅಲ್ಲಿನ ಯುದ್ಧಪೀಡಿತ ವಾತಾವರಣದ ಹಿನ್ನೆಲೆಯಲ್ಲಿ ಭಾರತಕ್ಕೆ ವಾಪಸಾದ ಅವರು ಅಲ್ಲಿನ ಒಟ್ಟಾರೆ ವಾಸ್ತವ ಪರಿಸ್ಥಿತಿಯ ಬಗ್ಗೆ ಸೋಮವಾರ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡರು.

'ಲಿಬಿಯನ್ನರಲ್ಲಿ ಬಹುಪಾಲು ಜನ ಸುಖವಾಗಿದ್ದಾರೆ. ಅಲ್ಲಿನ ನಿರುದ್ಯೋಗಿಗಳಿಗೆ ನಾಗರೀಕತ್ವದ ಕಾರ್ಡ್ ತೋರಿಸಿದರೆ ಗಡಾಫಿ ಸರ್ಕಾರ ಪ್ರತಿ ತಿಂಗಳೂ 400 ರಿಂದ 500 ದಿನಾರ್ (1 ದಿನಾರ್ 1 ಡಾಲರ್‌ಗೆ ಸಮ) ಭತ್ಯೆ ನೀಡುತ್ತದೆ. ಅಲ್ಲಿ ಗಂಡಸರಿಗಿಂತ ಹೆಂಗಸರೇ ಹೆಚ್ಚು ಸಂಖ್ಯೆಯಲ್ಲಿ ಉದ್ಯೋಗಿಗಳು. ಪೊಲೀಸ್ ನೌಕರಿ ಅತಿ ಕಡಿಮೆ ವಿದ್ಯಾರ್ಹತೆಗೆ ಸಿಗುತ್ತದೆ. ಆದ್ದರಿಂದ ಪ್ರತಿ ಮನೆಗೆ ಒಬ್ಬರಂತೆ ಪೊಲೀಸರು. ಆದರೆ ಕಾಲೇಜು ಪ್ರಾಧ್ಯಾಪಕರಾಗಬೇಕಾದರೆ ಸ್ನಾತಕೋತ್ತರ ಪದವಿ ಕಡ್ಡಾಯ. ಹೆಣ್ಣುಮಕ್ಕಳು ಹೆಚ್ಚಾಗಿ ಈ ಪದವಿ ಓದುತ್ತಾರೆ. ಸಹಜವಾಗಿ ಅವರೇ ಪ್ರಾಧ್ಯಾಪಕರೂ ಆಗುತ್ತಾರೆ. ಶಾಲೆಗೆ ಬರುವವರಲ್ಲಿ ಶೇ.75 ರಷ್ಟು ಹೆಣ್ಣುಮಕ್ಕಳು. ಅವರು ಬುರ್ಕಾ ಹಾಕುವುದಿಲ್ಲ. ಗಂಡಸರೊಂದಿಗೆ ಮಾತನಾಡಬಾರದು ಎಂಬ ನಿರ್ಬಂಧವನ್ನೂ ನಾನಲ್ಲಿ ಕಾಣಲಿಲ್ಲ.

'ಮು ಅಮ್ಮರ್ ಗಡಾಫಿ ಸರ್ವಾಧಿಕಾರಿಯೆಂದು ಬಿಂಬಿಸುತ್ತಾರೆ. ಆದರೆ ಅಲ್ಲಿನ ಪ್ರಜೆಗಳ ಮೇಲೆ ಯಾವುದೇ ನಿರ್ಬಂಧಗಳಿಲ್ಲ. ಉಚಿತ ಆಸ್ಪತ್ರೆಗಳಿವೆ. ಗಂಡಸರು ಉನ್ನತ ಅಧ್ಯಯನಕ್ಕೆ ವಿದೇಶಕ್ಕೆ ಹೋಗುವುದಾದರೆ ಅವರ ಪತ್ನಿ ಮತ್ತು ಮಕ್ಕಳ ಜೀವನ ವೆಚ್ಚವನ್ನು ಸರ್ಕಾರವೇ ನೋಡಿಕೊಳ್ಳುತ್ತದೆ. ಶಿಕ್ಷಣಕ್ಕಂತೂ ವಿಶೇಷ ಕಾಳಜಿ ನೀಡಲಾಗುತ್ತಿದ್ದು, ವಿಶ್ವವಿದ್ಯಾಲಯಕ್ಕೆ ನೀಡಿದ ಅನುದಾನ ಬಳಕೆ

ಪುಟ 14 ಕ್ಕೆ

‘ಹಳಿ ಇಲ್ಲದ ರೈಲ್ವೆ ಬಜೆಟ್’

ಮಾರ್ಚ್ 20, 2011 ರ ಜನಶಕ್ತಿ ಸಂಚಿಕೆ 12 ರಲ್ಲಿ ರೈಲ್ವೆ ಬಜೆಟ್‌ನ ಕುರಿತ ‘ಹಳ್ಳಿ ಇಲ್ಲದೇ ಓಡುತ್ತಿರುವ ಮಮತ ರೈಲು ಬಜೆಟ್’ ಎಂಬ ಲೇಖನದ ಜೊತೆಗೆ ಕಳೆದ ರೈಲ್ವೆ ಬಜೆಟ್ ಎಂತಹ ಬುರುಡೆ ಎಂದು ಸಾಕ್ಷ್ಯ ಸಹಿತ ತೋರಿಸುವ ಈ ಪಟ್ಟಿ ಪ್ರಕಟವಾಗಬೇಕಿತ್ತು. ಸ್ಥಳಾಭಾವದಿಂದ ಪ್ರಕಟವಾಗಿರಲಿಲ್ಲ. ಓದುಗರು ಗಮನಿಸಲು ಕೋರಿಕೆ.

2010ರ ರೈಲ್ವೆ ಬಜೆಟ್‌ನಲ್ಲಿ ಘೋಷಿಸಿದ್ದು

ಈ ಬಜೆಟ್‌ನಲ್ಲಿ ಹೇಳಿದ್ದು.

1	ಹೊಸ ಮಾರ್ಗಗಳು	2020–11ರಲ್ಲಿ 1000 ಕಿ.ಮೀ	700 ಕಿ.ಮೀ.ಗಳಷ್ಟು ಮಾರ್ಗಗಳನ್ನು 2011 ರ ಮೊದಲು ಪೂರ್ಣಗೊಳಿಸಲಾಗುವುದು
2	ಜಾಗತಿಕ ಮಟ್ಟದ ನಿಲ್ದಾಣಗಳು	ಹೊಸದಾಗಿ 10 ನಿಲ್ದಾಣಗಳನ್ನು ಜಾಗತಿಕ ಮಟ್ಟಕ್ಕೆ ಏರಿಸಲಾಗುವುದು. (2009ರ ಬಜೆಟ್‌ನಲ್ಲಿ 50 ನಿಲ್ದಾಣಗಳನ್ನು ಜಾಗತಿಕ ಮಟ್ಟಕ್ಕೆ ಏರಿಸಲಾಗುವುದೆಂದು ಘೋಷಿಸಲಾಗಿತ್ತು)	‘ಅಗಾಧವಾದ ವೆಚ್ಚದಿಂದಾಗಿ ಹೆಚ್ಚಿಗೆ ಏನನ್ನೂ ಮಾಡಲು ಸಾಧ್ಯವಾಗಿಲ್ಲ
3	ವಿವಿಧೋದ್ದೇಶದ ವಾಣಿಜ್ಯ ಸಂಕೀರ್ಣಗಳು (ಎಂ.ಎಫ್.ಸಿ)	93 ಎಂ.ಎಫ್.ಸಿ.ಗಳ ಸ್ಥಾಪನೆ (2009 ರಲ್ಲಿ 50 ಎಂ.ಎಫ್.ಸಿ. ಸ್ಥಾಪನೆ ಬಗ್ಗೆ ಹೇಳಲಾಗಿತ್ತು)	ಕೆಲವು ಎಂ.ಎಫ್.ಸಿ.ಗಳು ಪೂರ್ಣಗೊಳ್ಳುವ ಹಂತದಲ್ಲಿವೆ.
4	ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಬಾಟ್ಲಿಂಗ್ ಸ್ಥಾವರ	ಅಂಬಾಲ, ಅಮೊಧಿ, ಮಲ್, ನಾಸಿಕ್, ಫರಕ್ಕ ಮತ್ತು ತಿರುವನಂತಪುರಗಳಲ್ಲಿ 6 ಬಾಟ್ಲಿಂಗ್ ಸ್ಥಾವರಗಳ ಸ್ಥಾಪನೆ	ಯಾವುದೇ ಪ್ರಸ್ತಾಪವಿಲ್ಲ
5.	ಹೊಸ ಟಿಕೇಟ್ ಖರೀದಿ ಕೇಂದ್ರ	ಜಿಲ್ಲಾ, ಕೇಂದ್ರ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಟಿಕೀಟು ಕೇಂದ್ರಗಳ ಪ್ರಾರಂಭ (2009ರ ಬಜೆಟ್‌ನಲ್ಲಿ 5000 ಅಂಚೆ ಕಛೇರಿಗಳಲ್ಲಿ ಕಂಪ್ಯೂಟರೀಕೃತ ಟಿಕೆಟ್ ನೀಡುವ ಭರವಸೆ)	ಯಾವುದೇ ಪ್ರಸ್ತಾಪವಿಲ್ಲ
6.	ಕಾವಲು ಇಲ್ಲದ ಲೆವೆಲ್ ಕ್ರಾಸಿಂಗ್	2010–11 ರಲ್ಲಿ ಇನ್ನೂ 1000 ಲೆವೆಲ್ ಕ್ರಾಸಿಂಗ್‌ಗಳಲ್ಲಿ ನೌಕರರ ನೇಮಕ (2009–10 ರಲ್ಲಿ 3000 ಲೆವೆಲ್ ಕ್ರಾಸಿಂಗ್‌ನಲ್ಲಿ ನೇಮಕದ ಭರವಸೆ)	ಕಾವಲಿಲ್ಲದ 1500 ಕ್ರಾಸಿಂಗ್‌ಗಳನ್ನು ಕೈಬಿಡಲಾಗಿದೆ? 2500 ಕ್ರಾಸಿಂಗ್‌ನಲ್ಲಿ ನೇಮಕ ಮುಂದಿನ ವರ್ಷ!
7.	ಮನೆ	ರೈಲ್ವೆಯಲ್ಲಿರುವ ಎಲ್ಲಾ ನೌಕರರಿಗೆ ಮನೆ (2009 ರಲ್ಲಿ 10 ವರ್ಷಗಳಲ್ಲಿ ಮನೆ ನೀಡುವುದಾಗಿ ಭರವಸೆ)	ಯಾವುದೇ ಪ್ರಸ್ತಾಪವಿಲ್ಲ
8.	ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳು	522 ಆಸ್ಪತ್ರೆ ಮತ್ತು ಪರೀಕ್ಷಣಾ ಕೇಂದ್ರಗಳು : 50 ಕೇಂದ್ರೀಯ ವಿದ್ಯಾಲಯಗಳು 10 ವಸತಿ ಶಾಲೆಗಳು (2009 ರಲ್ಲಿ ರೈಲ್ವೆ ನೌಕರರ ಮಕ್ಕಳಿಗೆ ಪದವಿ, ತಾಂತ್ರಿಕ, ಮ್ಯಾನೇಜ್‌ಮೆಂಟ್ ಕಾಲೇಜ್‌ಗಳ ಸ್ಥಾಪನೆಯ ಭರವಸೆ)	ಆಸ್ಪತ್ರೆಗಳ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. 20 ವೈದ್ಯಕೀಯ ವಾಹನ ನೀಡಿಕೆಯ ಘೋಷಣೆ

(ಇನ್ನೂ ಹಲವಾರು ಭರವಸೆಗಳ ಪಟ್ಟಿ ಜನಶಕ್ತಿಯಲ್ಲಿದೆ. ಸ್ಥಳದ ಅಭಾವದಿಂದ ಪ್ರಕಟಿಸಲು ಆಗುತ್ತಿಲ್ಲ)

ತಪ್ಪು - ಒಪ್ಪು

ಜನಶಕ್ತಿ ಸಂಚಿಕೆಯ 12ರ ಪುಟ 6ರಲ್ಲಿ ಪ್ರಕಟವಾಗಿರುವ ‘ಬಡತನದ ಬೇಗೆ....’ ವರದಿಯಲ್ಲಿ ವರದಿ ಮಾಡಿದವರ ಹೆಸರು ತಪ್ಪಿಹೋಗಿದೆ.
‘ವರದಿ : ದೇವಿ, ಕಾರ್ಯದರ್ಶಿ, ಜೆ.ಎಂ.ಎಸ್. ಮಂಡ್ಯ ಜಿಲ್ಲಾ ಸಮಿತಿ’ ಎಂದು ಓದಿಕೊಳ್ಳುವುದು
ಕಳೆದ ಸಂಚಿಕೆಯಲ್ಲಿಪ್ರಕಟವಾದ ನಿತ್ಯಾನಂದಸ್ವಾಮಿಯವರ ‘ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಜನಾಂದೋಲನ’ ಲೇಖನದ ಎರಡನೇ ಕಂತು ಈ ವಾರ ಪ್ರಕಟಗೊಂಡಿಲ್ಲ. ಮುಂದಿನ ವಾರದಲ್ಲಿ ಪ್ರಕಟಗೊಳ್ಳಲಿದೆ. ಸಹಕರಿಸಿ.

- ಸಂ.

ಪ್ರೈಜ್ ಅಹಮದ್ ಪ್ರೈಜ್

ಪುಟ 2 ರಿಂದ

ಬಂಧಿಸಲಾಗಿತ್ತು. ಹಲವಾರು ಜೈಲುಗಳಲ್ಲಿ ಅವರನ್ನು ಬಂಧನದಲ್ಲಿಟ್ಟು ಕೊನೆಗೆ 1955 ರಲ್ಲಿ ಅವರನ್ನು ಬಿಡುಗಡೆ ಮಾಡಲಾಯ್ತು. ಜೈಲಿನಲ್ಲಿದ್ದಾಗ ಅವರಿಗೆ ಪೆನ್ನು, ಕಾಗದ, ವಾರ್ತಾಪತ್ರಿಕೆಗಳನ್ನೂ ನಿರಾಕರಿಸಲಾಗಿತ್ತು. ಕಠಿಣ ಜೈಲುವಾಸ ಮತ್ತು ಇಂತಹ ನಿರಾಕರಣೆ ಫೈಜ್‌ರ ಉತ್ಸಾಹವನ್ನು ಕೊಂಚವೂ ತಗ್ಗಿಸಲಿಲ್ಲ. ಜೈಲಿನಲ್ಲಿ ಅವರು ಕಳೆದ ಸಮಯ ಅತ್ಯಂತ ಅರ್ಥಪೂರ್ಣವಾಗಿತ್ತು. ಈ ಕೆಳಗಿನ ಪದ್ಯವೂ ಸೇರಿದಂತೆ ಅವರು ಹಲವು ಸುಂದರ ಪದ್ಯಗಳನ್ನು ಬರೆದದ್ದು ಅದೇ ಅವಧಿಯಲ್ಲಿ.

“ನನ್ನ ಲೇಖನಿಯುನ್ನು ನನ್ನಿಂದ ಕಸಿದಿದ್ದರೇನಾಯ್ತು.
ನನ್ನ ಹೃದಯುದ ರಕ್ತದಲ್ಲೇ ಅದ್ದಿದ್ದೇನೆ ನನ್ನ ಬೆರಳುಗಳನ್ನು
ನನ್ನ ಬಾಯಿ ಮುಚ್ಚಿಸಿದ್ದರೇನಾಯ್ತು
ಈ ಸರಪಳಿಯ ಪ್ರತಿಕೊಂಡಿಯನ್ನೂ
ನಾಲಗೆಯಾಗಿ ಪರಿವರ್ತಿಸಿದ್ದೇನೆ ನಾನು...”

1958 ರಲ್ಲಿ ಜನರಲ್ ಆಯೂಬ್ ಖಾನ್ ಅಧಿಕಾರಕ್ಕೇರಿದಾದ ಫೈಜ್ ಮತ್ತೆ ಬಂಧನಕ್ಕೊಳಗಾಗಿದ್ದರು. ಅವರ ಅಪ್ರತಿಮ ಕೆಲಸಕ್ಕಾಗಿ 1962 ರಲ್ಲಿ ಅವರಿಗೆ ಲೆನಿನ್ ಶಾಂತಿ ಪ್ರಶಸ್ತಿ ನೀಡಲಾಯ್ತು. ಆ ಪ್ರಶಸ್ತಿ ಸ್ವೀಕರಿಸುವಾಗ ಫೈಜ್ ಆಡಿದ ಮಾತುಗಳು ಅವರು ತಾವು ನಂಬಿದ ಆದರ್ಶ ಮತ್ತು ಸಿದ್ಧಾಂತಕ್ಕೆ ಎಷ್ಟು ಬದ್ಧರಾಗಿದ್ದರೆಂಬುದಕ್ಕೆ ಸಾಕ್ಷಿ. “ಮನುಷ್ಯನ ಪ್ರತಿಭೆ, ವಿಜ್ಞಾನ ಮತ್ತು ಕೈಗಾರಿಕೆಗಳು ಪ್ರತಿ ಮನುಷ್ಯನ ಸುಖ ಜೀವನಕ್ಕೆ ಬೇಕಾಗುವುದೆಲ್ಲವನ್ನೂ ನೀಡಬಲ್ಲವು. ಹಾಗಾಗಬೇಕಾದಲ್ಲಿ ಪ್ರಕೃತಿ ನೀಡಿದ ಅಪಾರ ಸಂಪತ್ತು ಮತ್ತು ಉತ್ಪಾದನೆ ಕೆಲವೇ ಆಸೆಬುರುಕರ ಸ್ವತ್ತಾಗದೆ ಇಡೀ ಮನುಕುಲಕ್ಕಾಗಿ ಬಳಸುವಂತಾಗಬೇಕು. ಮನುಕುಲದ ಸಮಾಜದ ತಳಹದಿ ದುರಾಸೆ ಶೋಷಣೆ ಮತ್ತು ಒಡೆತನದ ಮೇಲೆ ರಚಿತವಾಗದೆ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಪ್ರತಿಯೊಬ್ಬರ ಯೋಗಕ್ಷೇಮದ ಮೇಲೆ ರಚಿತವಾಗಬೇಕು. ವೈರಿಗಳ ಯಾವುದೇ ಸಂಚಿಗೂ ಸಿಲುಕದ ಮಾನವತೆಗೇ ಅಂತಿಮವಾಗಿ ಜಯ ದೊರೆಯುವುದು. ಶ್ರೇಷ್ಠ ಯುದ್ಧ, ದ್ವೇಷ ಮತ್ತು ಕ್ರೌರ್ಯದ ಆಧಾರದಲ್ಲಿದೆ ಶ್ರೇಷ್ಠ ಪರ್ಷಿಯನ್ ಕವಿ ಹೇಳಿದಂತೆ ಪ್ರೀತಿಯನ್ನುಳಿದು ಇನ್ನೆಲ್ಲ ತಳಹದಿಗಳೂ ದುರ್ಬಲ. ಪ್ರೀತಿಯ ತಳಹದಿಯ ಮೇಲೆ ಜಗತ್ತು ನಿರ್ಮಾಣವಾದಾಗ ಯಶಸ್ಸು ನಮ್ಮದಾಗುವುದು.

ವಿಶ್ವಪ್ರಜೆ

ಈ ಪ್ರಜ್ವಲ ಮಾತುಗಳು ಜಗತ್ತಿನಾದ್ಯಂತ ಫೈಜ್‌ರನ್ನು ಪ್ರಗತಿಶೀಲ ಜನರ ಪ್ರೀತಿಪಾತ್ರರನ್ನಾಗಿಸಿತು. ಅವರ ಕೃತಿಗಳು ಹಲವಾರು ಭಾಷೆಗಳಲ್ಲಿ ತರ್ಜುಮೆಗೊಂಡಿತು. ಫೈಜ್ ನಿಜಕ್ಕೂ ಒಬ್ಬ ವಿಶ್ವಪ್ರಜೆ. ಅವರು ಆಫ್ರಿಕನ್ ಜನತೆಯ ವಿಮೋಚನಾ ಹೋರಾಟದ ಭಗ್ಗೆ ಬರೆದಿದ್ದಾರೆ. ಪಾಲಸ್ತೈನ್ ಜನತೆಯ ಹೋರಾಟ ಅವರ ಹೃದಯಕ್ಕೆ ಹತ್ತಿರದ್ದಾಗಿತ್ತು. ಅಮೇರಿಕದ ಕರಿಯರ ಹೋರಾಟದ ಬಗ್ಗೆಯೂ ಅವರು ಬರೆದಿದ್ದಾರೆ. ದಲಿತರ ಮತ್ತು ದುಡಿಯುವ ವರ್ಗಗಳಿಗೆ ಅವರು ಸದಾ ಬದ್ಧರಾಗಿದ್ದರು. ಎಲ್ಲ ಅಡೆತಡೆಯ ನಡುವೆಯೂ ಅವರು ಸತ್ಯ ಹೇಳಲು ಅಂಜಲಿಲ್ಲ. ಒಂದು ನ್ಯಾಯಯುತ ಸಮಾಜಕ್ಕಾಗಿ ದನಿಯೆತ್ತುವುದು ಎಲ್ಲರ ಕರ್ತವ್ಯ. ನ್ಯಾಯಕ್ಕಾಗಿ ನಡೆಸುವ ಹೋರಾಟದಲ್ಲಿ ಯಾರೂ ತಟಸ್ಥರಾಗಿರುವುದು ಸಾಧ್ಯವಿಲ್ಲ; ಪ್ರತಿಯೊಬ್ಬರೂ ನ್ಯಾಯದ ಕಡೆಗೇ ಇರಬೇಕೆಂಬುದನ್ನು ಅವರು ತಮ್ಮ ‘ಬೋಲ್’ ಕವನದಲ್ಲಿ ನುಡಿದಿದ್ದಾರೆ.

“ಮಾತನಾಡು ನಿನ್ನ ತುಟಿಗಳಿನ್ನೂ ಬಿರಿದಿವೆ
ಮಾತಾಡು ನಿನ್ನ ನಾಲಗೆಯಿನ್ನೂ ನಿನ್ನದೇ ಆಗಿದೆ
ದೇಹ ದುರ್ಬಲ ನಿಜ ಆದರದು ಇನ್ನೂ ನಿನ್ನದೇ
ಮಾತಾಡು ನಿನ್ನ ಬದುಕಿನ್ನೂ ನಿನ್ನದೇ...

ತನ್ನ 73ನೆಯ ವಯಸ್ಸಿನಲ್ಲಿ 1984 ರಲ್ಲಿ ಮಹಾನ್ ಮಾನವತಾವಾದಿ ಮತ್ತು ಕಮ್ಯೂನಿಸ್ಟ್ ಫೈಜ್ ಮರಣ ಹೊಂದಿದರು. ಫೈಜ್ ಇಂದಿಗೂ ನಮ್ಮೆಲ್ಲರ ಹೃದಯಗಳಲ್ಲಿ ಚಿರಾಯುವಾಗಿದ್ದಾರೆ. ಅವರ ಕೃತಿಗಳು ಎಂದೆಂದಿಗೂ ದುಡಿಯುವ ವರ್ಗಕ್ಕೆ ದಾರಿದೀವಿಗೆಯಾಗಿವೆ.

ಫೈಜ್‌ರ ಜನ್ಮ ಶತಾಬ್ದಿ ಸಂಭ್ರಮದ ಆಚರಣೆಗೊಂದು ಅವಕಾಶ. ಫೈಜ್‌ರ ಆಶಯಗಳಾದ ಮಾನವ ಘನತೆ, ನ್ಯಾಯ ಮತ್ತು ಶೋಷಣೆ ಮುಕ್ತ ಸಮಾಜದ ಆಚರಣೆ.

ಗೆಲುವಿಗಾಗಿ ಕಸರತ್ತು

ಪುಟ 3 ರಿಂದ

ರೈತರು ತಿರುಗಿ ಬಿದ್ದಿದ್ದರಲ್ಲಿ ಅರ್ಥವಿಲ್ಲದಿಲ್ಲ. ಅಲ್ಲಿ ಜನರಿಂದ ತೀವ್ರ ಮುಖಭಂಗ ಅನುಭವಿಸಿದ ಯತಿವರ್ಯರು ಕೆಲವು ದಿನಗಳ ನಂತರ ಖುದ್ದಾಗಿ ಹಳ್ಳಿಗಳಿಗೆ ಭೇಟಿ ಮಾಡಿ ಬೂದಿ ಕಂಡಿದ್ದಾಗಿ ಹೇಳಿದ್ದು ಬೂಟಾಟಿಕೆ ಅನ್ನಿಸದೇ ಇರದು. ಈ ಹಿಂದೆ ಬೂದಿಯನ್ನೇ ಕಾಣದೇ ಅವರು ಹೋರಾಟದ ಮುಂಚೂಣಿ ನಿಲ್ಲುವುದಾಗಿ ಹೇಳಿದ್ದರಾದರೂ ಹೇಗೆ ಎಂಬ ಪ್ರಶ್ನೆ ಏಳದಿರದು. ಅಲ್ಲಿ ಬೂದಿ ಇದೆ. ಬೆಳೆ ಬೆಳೆಯದು, ಪರಿಸರ ಮಾಲಿನ್ಯದಿಂದ ವಿವಿಧ ರೋಗಗಳಿಗೆ ಜನ ಬಲಿಯಾಗುತ್ತಿದ್ದಾರೆ, ಕಂಪನಿ ಹೇಳುವಂತೆ ಯಾವುದೇ ಸುರಕ್ಷತಾ ಕ್ರಮಗಳನ್ನು ಅಲ್ಲಿ ಪಾಲಿಸುತ್ತಿಲ್ಲವೆಂದೂ ಇಂತಹ ಕಂಪನಿ ಆರಂಭದಲ್ಲಿ 1055 ಮೆಗಾವಾಟ್ ವಿದ್ಯುತ್ ಉದ್ದಿಮೆಯ ಘಟಕ ಆರಂಭಿಸುವುದಾಗಿ ಹೇಳಿದ್ದು ಈಗ ಅದು 2,000 ಮೆಗಾವ್ಯಾಟ್ ಸ್ಥಾವರ ನಿರ್ಮಾಣಕ್ಕೆ ಮುಂದಾಗಿದೆ ಎಂದೆಲ್ಲಾ ಆರೋಪಗಳಿವೆ. ಇಂತಹ ಗಂಭೀರ ಸಮಸ್ಯೆ ಬಗ್ಗೆ ಸರಕಾರ ದಿನಕ್ಕೊಂದು ಹೇಳಿಕೆ ನೀಡುತ್ತಿದೆ ವಿನಃ ಇತ್ಯರ್ಥಕ್ಕೆ ಮುಂದಾಗುತ್ತಿಲ್ಲ. ಕಂಪನಿ ಹಾಗೂ ಸರ್ಕಾರವೂ ಪಾರದರ್ಶಕವಾಗಿಲ ಬಿಜೆಪಿಗೆ ಯುಪಿಸಿಎಲ್ ಕಂಪನಿ ಮೇಲೆ ಪ್ರೀತಿ, ಜನರ ಓಟಿನ ಮೇಲೆ ಇಷ್ಟ ಎಂದೇ ವರ್ತಿಸುತ್ತಿದೆ. ಹೇಗೂ ಈ ಸರ್ಕಾರ ಉದ್ದಿಮೆ ಹೂಡಿಕೆದಾರರ ಸರ್ಕಾರವಲ್ಲವೇ?

ಇಂತಹದ್ದೊಂದು ಸಮಸ್ಯೆಗೆ ಪರಿಹಾರವೆಂಬಂತೆ ಕೆಲವರು ಉತ್ಪಾದನಾ ಘಟಕವನ್ನೇ ಮುಚ್ಚಿಬಿಡಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಇದು ನೆಗಡಿಯಾಯಿತೆಂದು ಮೂಗನ್ನೇ ಕೊಯ್ದುಕೊಂಡಂತೆ. ಅತ್ಯಂತ ತೀವ್ರತರ ವಿದ್ಯುತ್ ಅಭಾವದಿಂದ ಬಳಲುತ್ತಿರುವ ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಬೇಕಿದೆ. ಕಲ್ಲಿದ್ದಲು, ನೀರು ಮುಂತಾದ ವಿವಿಧ ಮೂಲಗಳಿಂದ ಉತ್ಪಾದಿಸಬೇಕು. ಇಲ್ಲಿ ಪ್ರಶ್ನೆ ಎಂದರೆ ಪರಿಸರ ಮಾಲಿನ್ಯ ಉಂಟುಮಾಡದಂತೆ ಎಲ್ಲಾ ಅಗತ್ಯ, ಎಚ್ಚರಿಕೆಯ ತಂತ್ರಜ್ಞಾನವನ್ನು ಬಳಸಿಉತ್ಪಾದಿಸಬೇಕು. ಜನರ, ಜಾನುವಾರುಗಳ, ಬೆಳೆಗಳ ಜೀವರಕ್ಷಣೆ, ಪೋಷಣೆ ಅಷ್ಟೇ ಅತೀ ಮಹತ್ವದ್ದು. ಇದಕ್ಕಾಗಿ ತಂತ್ರಜ್ಞಾನ ಲಭ್ಯವಿದೆ. ಅದನ್ನು ಈ ಸರ್ಕಾರ ತನ್ನ ಶಕ್ತಿ ಬಳಸಿ ಜಾರಿಗೊಳಿಸುವಂತೆ ಮಾಡಬೇಕು. ಆದರೆ ಆ ಸರ್ಕಾರಕ್ಕೆ ಈ ಬದ್ಧತೆಯೇ ಇಲ್ಲವೆಂಬುದೇ ಗಂಭೀರ ಸಂಗತಿ.

ನೌಕರ ದ್ರೋಹಿ ಪಿಂಚಣಿ ಯೋಜನೆ ವಿರುದ್ಧ ಅಂಗನವಾಡಿ ನೌಕರರ ಮುಷ್ಕರ

■ ಎಸ್.ವರಲಕ್ಷ್ಮಿ

ಅಂಗನವಾಡಿ ನೌಕರರಿಗೆ ನಿವೃತ್ತಿ ಸೌಲಭ್ಯವನ್ನು ರ್ಕಾರವು ನೀಡಬೇಕೆಂದು ಹಲವು ರ್ಷಗಳಿಂದಲೂ ಸಿಐಟಿಯು ಸಂಯೋಜಿತ ರ್ನಾಟಕ ರಾಜ್ಯ ಅಂಗನವಾಡಿ ನೌಕರರ ದ ಬೇಡಿಕೆಯಾಗಿದೆ. ದೇಶಾದ್ಯಂತ ನಡೆದ ಘಟನೆಯ ಹೋರಾಟದ ಫಲವಾಗಿ 1997 ಕೇಂದ್ರ ಸರ್ಕಾರವು ಪ್ರಥಮ ಬಾರಿಗೆ ನಿವೃತ್ತಿ ಡಬೇಕೆಂಬುದನ್ನು ಒಪ್ಪಿತು. 2004 ರಲ್ಲಿ ತ್ತಿ ಮಾಡುವುದು ಮತ್ತು ನಿವೃತ್ತಿ ಸೌಲಭ್ಯ ಕುವುದು ಆಯಾಯ ರಾಜ್ಯ ಸರ್ಕಾರದ ಕೆಲಸ



ಕೋಲಾರದಲ್ಲಿ


ಬುದನ್ನು ಆದೇಶದ ಮೂಲಕ ತಿಳಿಸಿತು. ಆ ರ ಸಂಘಟನೆ ಪ್ರಥಮ ಆದ್ಯತೆಯಾಗಿ ನಿವೃತ್ತಿ ಲಭ್ಯಕ್ಕೆ ಸಂಬಂಧಿಸಿದ ಈ ಆದೇಶದ ಜಾರಿಗೆ ವು ಮನವಿಪತ್ರಗಳನ್ನು ಕೊಟ್ಟಾಗ ರಾಜ್ಯ ರ್ಕಾರ ಇಷ್ಟೊಂದು ಹಣವನ್ನು ಭರಿಸಲು ುವುದಿಲ್ಲ ಎಂದು ತಿಳಿಸಿತು.

10.11.2006 ರಂದು ಅಧಿಕೃತವಾಗಿ ವಂತಿಗೆ ಾರಿತ ನಿವೃತ್ತಿ ವೇತನಕ್ಕೆ ಸಂಘಟನೆಯು ್ಯಯನಾತ್ಮಕ ವರದಿಯೊಂದಿಗೆ ಲಿಖಿತ ಸೂಚನೆ ಟ್ಟಿತ್ತು. ಈ ಸೂಚನೆ ಕೊಟ್ಟ ನಂತರವೂ ವು ಬಾರಿ ಹೋರಾಟಗಳನ್ನು ನಡೆಸಿ ಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರ್ದೇಶಕರ ಬಳಿ ಚರ್ಚೆ ನಡೆಸಿತು. ಇದರ ಫಲವಾಗಿ 2010 ರ ಬಜೆಟ್‌ನಲ್ಲಿ ರಾಜ್ಯ ರ್ಕಾರವು 10 ಕೋಟಿ ರೂಪಾಯಿ ಹಣವನ್ನು ದಿರಿಸಿತು.

ನಂತರ ಈ ಯೋಜನೆ ಹೇಗಿರಬೇಕು ನ್ನುವುದರ ಬಗ್ಗೆ 26.7.2010, 10.8.2010, 2.2010 ರಂದು ಅಧಿಕೃತವಾಗಿ ಇಲಾಖೆ ತ್ತು ಮುಖ್ಯಮಂತ್ರಿಗಳ ಸಮ್ಮುಖದಲ್ಲಿಯೇ



ಬಿಜಾಪುರ



ಚರ್ಚೆ ನಡೆದಿದೆ. ಈ ಎಲ್ಲಾ ಚರ್ಚೆಗಳಲ್ಲಿ ಎಲ್‌ಐಸಿ ಆಧಾರಿತ ವಂತಿಗೆ ಯೋಜನೆಯನ್ನು ಜಾರಿ ಮಾಡುವುದಾಗಿ ತಿಳಿಸಲಾಗಿತ್ತು. ಆದರೆ ಜನವರಿ ತಿಂಗಳಿನಿಂದ ಇದ್ದಕ್ಕಿದ್ದಂತೆ ಶೇರು ಮಾರುಕಟ್ಟೆಯಾಧಾರಿತ ನಿವೃತ್ತಿ ಯೋಜನೆಯನ್ನು ಜಾರಿ ಮಾಡಲು ನಿರ್ದೇಶಕರ ಕಛೇರಿಯಿಂದ ನಿರ್ದೇಶನ ನೀಡಿ ಹಲವು ವಿಧದ ಒತ್ತಡಗಳನ್ನು ನೌಕರರ ಮೇಲೆ ಹೇರಲಾಗುತ್ತಿದೆ. ನೌಕರರು ಹೋರಾಟಕ್ಕೆ ಹೋಗದಂತೆ 1 ಫೆಬ್ರವರಿ, 2011 ರಿಂದ ಜಾರಿ ಆಗುವಂತೆ ಆದೇಶವನ್ನು ಇಲಾಖೆ ಮಾತ್ರವಲ್ಲ ಫೆಬ್ರವರಿ, 1, 2011 ರಿಂದ ಅಂಗನವಾಡಿ ನೌಕರರು ಹೋರಾಟವನ್ನೇ ಮಾಡಬಾರದೆಂದು ಸರ್ಕಾರವು ಕಾರ್ಮಿಕ ವಿರೋಧಿಯಾದ ಮತ್ತು ಅಸಂವಿಧಾನಾತ್ಮಕವಾದ ಆದೇಶವನ್ನು ದೇಶದಲ್ಲಿಯೇ ಪ್ರಥಮ ಬಾರಿಗೆ ತಂದಿತು. ಈ ಸರ್ವಾಧಿಕಾರಿ ಧೋರಣೆಯನ್ನು ವಿರೋಧಿಸಿ, ಷೇರು ಮಾರುಕಟ್ಟೆ ಆಧಾರಿತ ನಿವೃತ್ತಿ ಯೋಜನೆ ಬೇಡ, ಈ ತಕ್ಷಣ ನಿವೃತ್ತಿಯಾಗುವವರಿಗೆ ಕ್ರಮವಾಗಿ ಒಂದು ಲಕ್ಷ ಹಾಗೂ ಐವತ್ತು ಸಾವಿರ ಪರಿಹಾರ ಹಾಗೂ ಮಾಸಿಕ ನಿವೃತ್ತಿವೇತನ ತೀರ್ಮಾನವಾಗುವವರೆಗೂ ಯಾರನ್ನೂ ನಿವೃತ್ತಿ ಮಾಡಬಾರದೆಂದು, ಈ ವಿವಾದದ ಕುರಿತು ಅಂತಿಮ ತೀರ್ಮಾನವಾಗುವವರೆಗೂ ಎನ್‌ಪಿಎಸ್ ಕುರಿತು ಸರ್ಕಾರಿ ಆದೇಶ ಮಾಡಬಾರದೆಂದು ಒತ್ತಾಯಿಸಿ, ಅಂಗನವಾಡಿ ನೌಕರರು ಪ್ರತಿಭಟನೆ ಮಾಡಬಾರದೆಂಬ ಸುತ್ತೋಲೆಯನ್ನು ರದ್ದು ಮಾಡಬೇಕೆಂದು ಒತ್ತಾಯಿಸಿ ಮಾರ್ಚ್ 21, 2011 ರಿಂದ 25 ರತನಕ ಎಲ್ಲಾ ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರುಗಳ ಕಛೇರಿಗಳ ಎದುರು ಧರಣಿ ಸತ್ಯಾಗ್ರಹ ಮಾಡಲು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ರಿ) ರಾಜ್ಯ ಸಮಿತಿಯು ತೀರ್ಮಾನಿಸಿ ಕರೆ ನೀಡಿತ್ತು.

ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ತುಮಕೂರು, ಚಿಕ್ಕಬಳ್ಳಾಪುರ, ಚಾಮರಾಜನಗರ, ಕೋಲಾರ, ಬೆಂಗಳೂರು, ಉ.ಕನ್ನಡ, ದಕ್ಷಿಣಕನ್ನಡ, ಕೊಪ್ಪಳ. ಬಿಜಾಪುರ, ಬೆಳಗಾಂ, ಬಾಗಲಕೋಟೆ, ಯಾದಗಿರಿ, ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ 1 ರಿಂದ 6 ದಿನಗಳತನಕ ಧರಣಿ ನಡೆದಿದೆ. ಇದರಲ್ಲಿ ಸಾವಿರಾರು ನೌಕರರು ಪಾಲ್ಗೊಂಡಿದ್ದಾರೆ.

ಆದರೆ ಸರ್ಕಾರದ ಪ್ರಾಬಲ್ಯ ತನ್ನ ಅಧಿಕಾರಬಲವನ್ನು ಉಪಯೋಗಿಸಿ ಎನ್‌ಪಿಎಸ್ ಲೈಟ್ ಫಾರಂಗೆ ಸಹಿ ಮಾಡದೆ ಇರುವವರಿಗೂ ಹಣ ಕಡಿತ ಮಾಡುವುದು. ಆ ವ್ಯಕ್ತಿ ಈ ಯೋಜನೆ ಬೇಡ ಎಂದರೆ ಪ್ರಮಾಣಪತ್ರ ಕೊಟ್ಟು ಅದರಲ್ಲಿ ನನಗೆ ಈ ಯೋಜನೆ ಬೇಡ, ಇದಕ್ಕಾಗಿ ಸರ್ಕಾರ ಇದಕ್ಕೆ ಹೊಣೆಯಲ್ಲ ಎಂದು ಪ್ರಮಾಣೀಕರಿಸಿದ್ದರೆ ಆ ಹಣವನ್ನು ವಾಪಸ್ಸು ಕೊಡಲಾಗುವುದು ಎಂಬ ಸುತ್ತೋಲೆಯನ್ನು ಸರ್ಕಾರದಿಂದ ಹೊರಡಿಸಿದ್ದಾರೆ. ಇದನ್ನು ವಿರೋಧಿಸುವವರಿಗೆ ಹಲವು ತರಹದ ಭಯಗಳನ್ನು ಹುಟ್ಟಿಸಿ ಸಹಿ ತೆಗೆದುಕೊಳ್ಳುತ್ತಿದ್ದಾರೆ. ಇಂತಹ ಕಾರ್ಮಿಕ ವಿರೋಧಿ, ದಮನಕಾರಿ ನೀತಿಗಳಿಗೆ ಸಂಘಟನೆ ಬಗ್ಗುವುದಿಲ್ಲ. ಹೋರಾಟ ಮುಂದುವರಿಯಲಿದೆ.



ನಕ್ಸಲ್ ಹಿಂಸೆಯ ವಿರುದ್ಧ ಪಶ್ಚಿಮ ಬಂಗಾಳ ಜನತೆಗೆ ಕಾರ್ಮಿಕರ ಸೌಹಾರ್ದ ಬೆಂಬಲ

ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್‌ನ ನೇರ ಕುಮ್ಮಕ್ಕು, ಸಹಾಯದೊಂದಿಗೆ ಮಾವೋವಾದಿ ನಕ್ಸಲೀಯರು ಎಡರಂಗ ಕಾರ್ಯಕರ್ತರು, ಬೆಂಬಲಿಗರ ಮೇಲೆ ನಡೆಸುತ್ತಿರುವ ಅಮಾನುಷ ದೌರ್ಜನ್ಯಗಳು ಕುಖ್ಯಾತವಾದವು. ಈ ದಾಳಿಗಳನ್ನು ಖಂಡಿಸಿ ಬೆಂಗಳೂರಿನ ಸಿಐಟಿಯು ಜಿಲ್ಲಾ ಸಮಿತಿಯು ಮಾರ್ಚ್ 21, 2011 ರಂದು ನಗರದ ಟೌನ್‌ಹಾಲ್ ಮುಂಭಾಗದಲ್ಲಿ ಸೌಹಾರ್ದತಾ ಕಾರ್ಯಕ್ರಮ, ಭಿತ್ತಿಚಿತ್ರ ಪ್ರದರ್ಶನ ಸಂಘಟಿಸಿತ್ತು. ಪ್ರೊ. ಮರುಳಸಿದ್ದಪ್ಪನವರು ಈ ಸಂದರ್ಭದಲ್ಲಿ ಮಾತನಾಡುತ್ತಿರುವ ಚಿತ್ರವಿದು.

ಏನೇ ಬೋರಿ ತಾರಾಟ ! ಅಂದರೆ....



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ರಾಜ್ಯ ಬಿಜೆಪಿಯೊಳಗೆ ಕಂಪನ, ಭಿನ್ನಮತದಲ್ಲಿ ಜನಹಿತವೇನಿದೆ?

ಕರ್ನಾಟಕ ರಾಜ್ಯದ ಬಿಜೆಪಿಯೊಳಗೆ ತೀವ್ರ ತರಹದ ಚಟುವಟಿಕೆಗಳು ನಡೆಯುತ್ತ ಭಿನ್ನಮತ ಎಂಬುದು ಮಗದೊಮ್ಮೆ ಸ್ಫೋಟಿಸಿದೆ. ಆ ಎಲ್ಲವುಗಳ ವಿವರ, ಅವುಗಳ ಜೀವಂತ ವೀಕ್ಷಕ ವಿವರಣೆಯಂತಹ ವರದಿಗಳು ಮಾಧ್ಯಮಗಳಲ್ಲಿ ಬರುತ್ತಿರುವುದರಿಂದ ಈ ಅಂಕಣದಲ್ಲಿ ಅದೇನು ಅಗತ್ಯವಿಲ್ಲ.

ಬಿಜೆಪಿ ಕಛೇರಿಯಲ್ಲಿ ಮುಖ್ಯಮಂತ್ರಿಗಳಿಗೇ ಗೊತ್ತಿಲ್ಲದಂತೆ ಬಿಜೆಪಿ ಸಚಿವ ಶಾಸಕರ ಸಭೆ..... ಅಲ್ಲಿಗೆ ಯಡಿಯೂರಪ್ಪನವರ ದಿಡೀರ್ ಭೇಟಿ.... ಸಭೆ ಬಂದ್.... ಭಿನ್ನರ ಗುಂಪಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ಕೆ.ಎಸ್.ಈಶ್ವರಪ್ಪ, ಸಂಸದ ಅನಂತ್‌ಕುಮಾರ್, ರೆಡ್ಡಿ ಸಹೋದರರು ಇನ್ನಷ್ಟು ಮಂದಿ..... ಯಡಿಯೂರಪ್ಪನವರ ದೆಹಲಿ ಯಾತ್ರೆ ಹೈಕಮಾಂಡ್‌ಗೆ ದೂರು.... ಭಿನ್ನರ ಬಣದ ಮುಖಂಡರ ದೆಹಲಿ ಯಾತ್ರೆ..... ರಾಜ್ಯದಲ್ಲಿ ಆರೆಸ್ಸೆಸ್ ಮುಖಂಡರ ತೇಪೆ ಯತ್ನ .....ಇತ್ಯಾದಿಗಳು ಏನೇನೋ ನಡೆಯುತ್ತಿವೆ.

ಇಲ್ಲಿ ಒಂದೇ ಸರಳ ಪ್ರಶ್ನೆ... ಇಷ್ಟೆಲ್ಲ ಮತ, ಸಮ್ಮತ, ಒಮ್ಮತ, ಭಿನ್ನಮತ ಇವುಗಳೆಲ್ಲಾ ನಿಜಕ್ಕೂ ಯಾಕಾಗಿ... ಚುನಾವಣಾ ಪ್ರಣಾಳಿಕೆಯಂತೆ 2 ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಕೊಡಲಾಗಲಿಲ್ಲ.....

ಉದ್ಯೋಗಖಾತ್ರಿ ಯೋಜನೆ ಜಾರಿ ಸರಿಯಾಗುತ್ತಿಲ್ಲ.... ರೈತರ ಆತ್ಮಹತ್ಯೆ ನಿಲ್ಲುತ್ತಿಲ್ಲ.... ಪ್ರವಾಹಪೀಡಿತ ನಿರಾಶ್ರಿತರಿಗೆ ಮನೆ ನೀಡಲಾಗಲಿಲ್ಲ. ಇಂತಹ ಯಾವುದಾದರೂ ಒಂದು ಪ್ರಶ್ನೆ ಭಿನ್ನಮತದ ನಡುವೆ ನುಸುಳಿದೆಯೇ? ಖಂಡಿತ ಇಲ್ಲ.

ಯಡಿಯೂರಪ್ಪನವರ ಭ್ರಷ್ಟಾಚಾರ ಪ್ರಕರಣಗಳು ಮಾತ್ರ ಭಿನ್ನರ ತಕರಾರುಗಳಲ್ಲಿ ಪ್ರಸ್ತಾಪವಾಗಿರುವುದು. ಹುಡ್ಕೋ ಹಗರಣದ ಅನಂತಕುಮಾರ್, ಗಣಿ ಅದಿರು ಲೂಟಿಕೋರ ರೆಡ್ಡಿ ಸಹೋದರರು. ಲಂಚಕೋರ ಸ್ವಜನಪಕ್ಷಪಾತಿ ಈಶ್ವರಪ್ಪ ಇವರೆಲ್ಲಾ ಸೇರಿ ಯಡಿಯೂರಪ್ಪನವರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಾರೆಂದರೆ... ಅವರಿಗೆ ಮಾತ್ರ ಮೇಯಲು ಅವಕಾಶ ಸಿಕ್ಕಿದೆ. ನಮಗೆ ಸರಿಯಾಗಿ ಮೇಯಲು ಸಿಗುತ್ತಿಲ್ಲ ಎಂಬುದಷ್ಟೇ ಭಿನ್ನಮತೀಯರ ವರಾತ.


ನಾವೀಗ ಊಟಕ್ಕೆ ಕೂತಿದ್ದೇನೆ. ಉಂಡೇಳುವವರೆಗೆ ಕಾಯಿರಿ ಎಂಬುದು ಯಡಿಯೂರಪ್ಪ ಕಂಪನಿಯ ರಾಗ. ಇವಿಷ್ಟರೊಳಗೆ ಜನರ ಹಿತವೇನಿದೆ? ಎಲ್ಲಿದೆ? ಏನೇ ಬೋರಿ ತಾರಾಟ ಅಂದ್ರೆ ಗೌಡರ ಮನೇಲಿ ದೇವರೂಟ ಅಂದಳಂತೆ. ಹಾಗೆ ಇವರ ಬೆಂಗಳೂರು - ದೆಹಲಿ ಹಾರಾಟ ತಾರಾಟಗಳ ಕತೆ.....

★

ಉಳ್ಳವರು ಶಿವಾಲಯವ ಮಾಡುವರು

ರಾಜ್ಯದ ಮುಖ್ಯಮಂತ್ರಿ ಡಾ. ಬಿ.ಎಸ್.ಯಡಿಯೂರಪ್ಪನವರಿಗೆ ಪ್ರತಿಮೆ ಸ್ಥಾಪನೆಯ ಹುಚ್ಚು ನೆತ್ತಿಗೇರಿದೆ. ಕನ್ನಡ ತಾಯಿ ಭುವನೇಶ್ವರಿ ಪ್ರತಿಮೆಗೆ 25 ಕೋಟಿ ರೂಪಾಯಿಯನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಘೋಷಣೆ ಮಾಡಿದ್ದಾಯ್ತು. ಈಗ 'ಬಸವೇಶ್ವರರ' ಪ್ರತಿಮೆ ಸರದಿ.

ತುಮಕೂರಿನ ಸಿದ್ಧಗಂಗಾಮಠದಲ್ಲಿ



ಕೃಪೆ: ಪ್ರಜಾವಾಣಿ

ಬಸವಣ್ಣನವರ ಪ್ರತಿಮೆ ಸ್ಥಾಪನೆಗೆ 5 ಕೋಟಿ ಸರ್ಕಾರಿ ಕೊಡುಗೆ ಕೊಡುವುದಾಗಿ ಅವರು ಘೋಷಿಸಿದ್ದಾರೆ. ಸರ್ಕಾರಿ ಖಜಾನೆಯ ಹಣ ಅಂದರೆ ಯಡಿಯೂರಪ್ಪನವರು ಪುಗಸಟ್ಟೆ ಹಂಚಲು ತಮ್ಮ ಜೇಬಿನಲ್ಲಿ ತುಂಬಿಟ್ಟುಕೊಂಡಿರುವ (ಕಡಲೆ) ಪುರಿ ಅಂದುಕೊಂಡಿದ್ದಾರೋ ಏನೋ... ಮನಸ್ಸಿಗೆ ತೋಚಿದಂತೆ ಕಂಡಕಂಡಲ್ಲೇ ಕೋಟಿ ಕೋಟಿ ರೂಪಾಯಿಗಳನ್ನು ಪ್ರತಿಮೆಗಳಿಗೂ, ಜಾತಿ ಸಂಘಗಳಿಗೂ ಅವರು ಘೋಷಣೆ ಮಾಡುತ್ತಿದ್ದಾರೆ.

ಇದು ಯಾಕೆ ಅಂತ ಹೆಚ್ಚು ವಿವರಿಸಬೇಕಾದ ಅಗತ್ಯವೇ ಇಲ್ಲ. ಅವರು ಘೋಷಣೆ ಮಾಡಿದ್ದು ಎಲ್ಲಿ ? ಯಾರ ಸಮಾರಂಭದಲ್ಲಿ ಅಂತ ನೋಡಿದರೂ ಸಾಕು ಕಾರಣ ಗೊತ್ತಾಗ್ತಿ ಹೋಗುತ್ತದೆ. ಬೆಂಗಳೂರು ಸಮೀಪ ಹೆಸರಘಟ್ಟದ ಬಳಿಯ ಎಂ.ಇ.ಐ. ಮೈದಾನದಲ್ಲಿ ಟಿ.ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ 'ವೀರಶೈವ' ವೇದಿಕೆಯ ಕಾರ್ಯಕ್ರಮದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ. ಸಂಕಟ ಬಂದಾಗ ವೆಂಕಟರಮಣ ಎಂಬಂತೆ, ಯಡಿಯೂರಪ್ಪನವರ ಖುರ್ಚಿ ಅಲುಗಾಡಿದಾಗಲೆಲ್ಲ ಅವರಿಗೆ 'ಬಸವಣ್ಣ' ನೆನಪಿಗೆ ಬರುತ್ತಾರೆ.

ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ.... ದೇಹವೇ ದೇಗುಲ.... ಎಂದ ಬಸವಣ್ಣನವರಿಗೆ ಯಡಿಯೂರಪ್ಪ ಕಟ್ಟಿಸುವ ದೇಗುಲ, ಪ್ರತಿಮೆ ಬೇಕೆ. ಲಿಂಗಾಯತರೇ, ನಾನು ನೂರಾರು ಕೋಟಿ ಭ್ರಷ್ಟಾಚಾರ ಹಗರಣ ಮಾಡಿದ್ದೇನೆ. ಬೇರೆ ಜಾತಿ ಮುಖಂಡರೂ ಮಾಡಿಕೊಂಡಿದ್ದಾರೆ. ಆದರೆ ಆ ಕಾರಣಕ್ಕೆ ನನ್ನ ಖುರ್ಚಿಯನ್ನು ಮಾತ್ರ ಎಳೆದಾಡಲಾಗುತ್ತಿದೆ. ಹಾಗಾಗಿ ನಿಮ್ಮ ಜಾತಿ ಬಾಂಧವನನ್ನು ಕಾಪಾಡಿ ಅಂತ ನೇರವಾಗಿ ಹೇಳಲಾಗದೇ ಈ ಪರಿಯಾಗಿ ಜಾತಿವಾದಿ ಮಠಗಳಿಗೆ ಉದಾರ ಕೊಡುಗೆ, ಪ್ರತಿಮೆ ಸ್ಥಾಪನೆಗೆ ಮುಂದಾಗಿರುವುದು.

★

ಪಂಚಾಯತ್‌ಗಳಿಗೆ ಅನುದಾನ ಕಡಿತ

ಅಧಿಕಾರ ವಿಕೇಂದ್ರೀಕರಣ ಪಂಚಾಯತ್ ವ್ಯವಸ್ಥೆ ಎಂಬುದು ಪ್ರಜಾಪ್ರಭುತ್ವವನ್ನು ಬಲಪಡಿಸುವ ಒಂದು ಅತ್ಯಂತ ಮಹತ್ವದ ಪರಿಕಲ್ಪನೆ. ಪಶ್ಚಿಮ ಬಂಗಾಳದಂತಹ ಎಡರಂಗ ಅಧಿಕಾರದಲ್ಲಿರುವ ರಾಜ್ಯದಲ್ಲಿ ರಾಜ್ಯದ ಬಜೆಟ್ ಕನಿಷ್ಠ ಶೇ.50 ಹಣವನ್ನು ಪಂಚಾಯತ್ ವ್ಯವಸ್ಥೆಯ ಮೂಲಕವೇ ವೆಚ್ಚ ಮಾಡಲಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯತ್‌ಗಳು ಹಲವಾರು ಬಾರಿ ತಮ್ಮ ಕಛೇರಿ ಹಾಗೂ ಸಾರ್ವಜನಿಕ ನೀರು ಪೂರೈಕೆ ಇತ್ಯಾದಿಗಳಿಗೆ ಬಳಕೆಯಾಗುವ ವಿದ್ಯುತ್ ಬಿಲ್ಲನ್ನೇ ತುಂಬಲಾರದ ಸ್ಥಿತಿಯಲ್ಲಿರುತ್ತವೆ. ಗ್ರಾಮ ಪಂಚಾಯತ್ ನೌಕರರಿಗೆ ಸಂಬಳವನ್ನೇ ಕೊಡಲಾರದ ದುರವಸ್ಥೆಯೂ ಇಲ್ಲಿ ಮಾಮೂಲು. ಇಂತಹ ಹೊತ್ತಿನಲ್ಲಿ ಪಂಚಾಯತ್‌ಗಳ ಅನುದಾನ ಗಣನೀಯವಾಗಿ ಹೆಚ್ಚಬೇಕಾದ ಅಗತ್ಯವಂತೂ ಇದ್ದೇ ಇದೆ. ಆದರೆ ರಾಜ್ಯದ ಬಿಜೆಪಿ ಸರ್ಕಾರ ಹೊರಟಿರುವ ದಾರಿ ಅದಕ್ಕೆ ತದ್ವಿರುದ್ಧವಾಗಿದೆ.

ಕಳೆದ ಹಣಕಾಸು ವರ್ಷದಲ್ಲಿ ಪಂಚಾಯತ್‌ಗಳಿಗೆ ನೀಡಲಾಗಿದ್ದ ಹಣಕಾಸು ಪ್ರಮಾಣದಲ್ಲಿ ಈಗ ದೊಡ್ಡ ಕಡಿತವನ್ನೇ ಮಾಡಲಾಗಿದೆ.

ಅಂದರೆ 2010 ಮತ್ತು 11 ರಲ್ಲಿ ಪಂಚಾಯತ್‌ಗಳಿಗೆ ನೀಡಲಾಗಿದ್ದ ಅನುದಾನದಲ್ಲಿ ಒಟ್ಟಾರೆ 5,822.52 ಕೋಟಿ ರೂಪಾಯಿಗಳ ಕಡಿತವಾಗಿದೆ.

ಯೋಜನೇತರ ಅನುದಾನದಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ 6904.06 ಕೋಟಿ ರೂಪಾಯಿಗಳು ಕಡಿತವಾಗಿದೆ. ಆದರೆ ಯೋಜನಾ ವೆಚ್ಚದಲ್ಲಿ 1,171.54 ಕೋಟಿ ಹೆಚ್ಚಳವಾಗಿರುವುದರಿಂದ ಒಟ್ಟು ಕಡಿತ ಪ್ರಮಾಣ ಸ್ವಲ್ಪ ತಗ್ಗಿದೆ.

ಉತ್ತರ ಕರ್ನಾಟಕ ಹಿಂದುಳಿಯುವಿಕೆ ನಿವಾರಣ; ಬಿಜೆಪಿ ಮಾದರಿ

ಸಂವಿಧಾನದ 371 ನೇ ವಿಧಿಗೆ ತಿದ್ದು… ತರಬೇಕು, ತೆಲಂಗಾಣದಂತೆ ಹೈದರಾಬಾ… ಕರ್ನಾಟಕ ಪ್ರದೇಶಕ್ಕೂ ವಿಶೇಷ ಸ್ಥಾನಮಾ… ನೀಡಬೇಕೆಂದು ರಾಜ್ಯದ ಮುಖ್ಯಮಂ… ಬಿ.ಎಸ್.ಯಡಿಯೂರಪ್ಪನವರ ನೇತೃತ್ವ… ನಿಯೋಗ ದೆಹಲಿಗೆ ಹೋಗಿ ಪ್ರಧಾನಿಗಳನ್ನು ಕಂ… ಒತ್ತಾಯಿಸಿತೆಂದು ಮೊದಲು ವರದಿಯಾಯಿತ… ಆ ನಂತರ ಯಡಿಯೂರಪ್ಪನವರು ವಿಶೇ… ಸ್ಥಾನಮಾನ ಸಿಗದೇ ಹೋದಲ್ಲಿ ಪಾರ್ಲಿಮೆಂಟ… ಎದುರು ಪ್ರತಿಭಟನೆ ಮಾಡುವುದಾ… ಗುಡುಗಿದರು. ಬೇಡಿಕೆ ಸರಿಯೋ, ತಪ್ಪ… ಎಂಬುದು ಇಲ್ಲಿನ ಚರ್ಚೆಯಲ್ಲ. ರಾಜ್ಯ ಬಿಜೆ… ಸರ್ಕಾರ ಈ ಬಗ್ಗೆ ಎಷ್ಟು ಗಂಭೀರವಾಗಿ… ಎಂಬುದು ಪ್ರಶ್ನೆ.

ಸುಮ್ಮನೆ ಈ ಮಾಹಿತಿಯನ್ನು ನೋ… ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ನಿವಾ… ಸಂಬಂಧ ಡಾ/ನಂಜುಂಡಪ್ಪ ವರದಿ… ಶಿಫಾರಸ್ಸುಗಳಿವೆ. ಆ ಬಗೆಗೆ ಹಾಗ… ಶಿಫಾರಸ್ಸಿನಂತೆ ಹಿಂದುಳಿದ ಪ್ರದೇಶಗಳ… ಅನುದಾನ ನೀಡುವ ಬಗೆಗೆ ನಮ್ಮ ಸರ್ಕಾರಗ… ಬಾರಿ ಬಾರಿ ಯೋಜನೆ ಪ್ರಕಟಿಸಿ ಘೋಷ… ಹೊರಡಿಸಿ ಸದ್ದು ಮಾಡುತ್ತವೆ.

ಪ್ರಸ್ತುತ ಆರ್ಥಿಕ ವರ್ಷದ ಅಂದರೆ 20… ಮತ್ತು 2011 ರ ಹಣಕಾಸು ವರ್ಷದ ಮೊದ… 9 ತಿಂಗಳ ಅವಧಿಯಲ್ಲಿ ಪ್ರಾದೇಶಿ… ಅಸಮಾನತೆಯ ನಿವಾರಣೆ ಸಂಬಂಧ… ಯೋಜನೆಗಳ ಜಾರಿಯಲ್ಲಿ ಆಗಿರುವ ಪ್ರಗತಿ ಪ… ಗೊತ್ತೇ? ಶೇ.20 ರಷ್ಟು ಕೂಡ ಜಾರಿಯಾಗಿಲ…

ಅಂದರೆ ಘೋಷಣೆ ಮಾಡುವಲ್ಲಿನ ಉತ್ಸಾ… ಜಾರಿಯಲ್ಲಿ ಇರುವುದಿಲ್ಲ. ವರ್ಷ… ಕೊನೆಯವರೆಗೆ ಚೂರುಪಾರು ಜಾರಿಯಾಗು… ಕೊನೆಗೂ ಪೂರ್ತಿ ಜಾರಿಯಾಗುವುದಿಲ್ಲ… ಕೊನೆಕೊನೆಯಲ್ಲಿ ಜಾರಿಯಾಗುವಾಗಲಂತ… 'ಸಿಕ್ಕಿದವರಿಗೆ ಸೀರುಂಡೆ' ಎಂಬಂ… ಜಾರಿಯಾಗುವುದೇ ಹೆಚ್ಚು.


ಹೀಗಾದರೆ ಉತ್ತರ ಕರ್ನಾಟ… ಹೈದರಾಬಾದ್ ಕರ್ನಾಟಕ ಅಭಿವೃ… ಆಗುವುದುಂಟೆ?

ರಾಜ್ಯದಲ್ಲಿ ಪಂಚಾಯ್ತಿಗಳಿಗೆ ಅನುದಾನ
ಕೋಟಿಗಳಲ್ಲಿ

ವರ್ಷ	ಯೋಜನೇತರ ವೆಚ್ಚ	ಯೋಜನಾ …
2010-11	17,055.25	4,870…
2011-12	10,061.19	6,041…

ಹಳ್ಳಿಗಳಲ್ಲಿ ರೈತರನ್ನು ಉದ್ಧಾರ ಮಾ… ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಪ್ರತ್ಯೇಕ ಕೃಷಿ ಬಜೆ… ಮಂಡಿಸಿದ್ದೇನೆ ಎನ್ನುವ ಯಡಿಯೂರಪ್ಪನವರ ಬಿ… ದರ್ಬಾರ್‌ನಲ್ಲಿ ಪಂಚಾಯತ್‌ಗಳಿಗೆ ಯಾವ ಪ… ಇದೆ ನೋಡಿ.

ಟಿಗಾಗಿ ನೋಟು ಹಗರಣ-ಮತ್ತದೇ ಾಕರಣೆಯ ತಿಣುಕಾಟ



■ ವೇದರಾಜ ಎನ್.ಕೆ.

ಡು ವರ್ಷಗಳ ಹಿಂದೆ ಹೇಗೋ ಮುಚ್ಚಿ ಗಿದ್ದ ಯುಪಿಎ-1ರ 'ಓಟಿಗಾಗಿ ನೋಟು' ಣ ವಿಕಿಲೀಕ್ಸ್ ಮೂಲಕ ಈಗ ಹಗರಣಗಳ ಮಾಲೆ ಹಾಕಿಕೊಂಡಿರುವ ಯುಪಿಎ-2 ನ್ನು ಸಲಾರಂಭಿಸಿದೆ. ಇದನ್ನು ಎದುರಿಸಲು ಪಿಎ-2 ಸರಕಾರದ ಅಧ್ವರ್ಯುಗಳು ಹಿಂದಿನ ರಣಗಳ ಸಂದರ್ಭದಲ್ಲಿ ಮಾಡಿದಂತೆಯೇ ಕಾಡುತ್ತಿದ್ದಾರೆ. ಯಥಾಪ್ರಕಾರ ಈಗಲೂ ಕರಣೆಯಿಂದ ಆರಂಭಿಸಿದ್ದಾರೆ. ಕಾಂಗ್ರೆಸಿನಿಂದ ವ ಸರಕಾರದಿಂದ ಯಾರೂ ಎಂಪಿಗಳ ಗಳನ್ನು ಖರೀದಿಸಿಲ್ಲ ಎಂದು ಪ್ರಧಾನ ಮಂತ್ರಿಗಳು ದ್ದಾರೆ. 'ನಾನು ಯಾರಿಗೂ ಮತ ಖರೀದಿಸಲು ಕಾರ ನೀಡಿರಲಿಲ್ಲ' ಎಂಬುದು ಪ್ರಧಾನಿಗಳ ಣೆಯ ಕಸರತ್ತಿನ ಮೊದಲ ಹೆಜ್ಜೆ. ಈ ಹಿಂದೆ ರು 2ಜಿ ಹಗರಣದಲ್ಲಿ 'ಸಮ್ಮಿಶ್ರ ಸರಕಾರದ ರ್ಮ'ವನ್ನು ದೂರಿ, ಎಸ್-ಬ್ಯಾಂಡ್ ಹಗರಣದಲ್ಲಿ ಕಚೇರಿಯ ಪಾತ್ರವೇನೂ ಇರಲಿಲ್ಲ ಎಂದು ಮತ್ತು ಮುಖ್ಯ ಜಾಗೃತಾ ಆಯುಕ್ತ(ಸಿವಿಸಿ)ರ ಕವನ್ನು ಸುಪ್ರಿಂ ಕೋರ್ಟ್ ರದ್ದು ಮಾಡಿದಾಗ, ಗೆ ಸಂಬಂಧಪಟ್ಟ ಮಂತ್ರಿಗಳಿಂದ ದೊರೆತ ಹಿತಿ ಸರಿಯಾಗಿರಲಿಲ್ಲ ಎಂದು ಳೆದುಕೊಳ್ಳಲು ಪ್ರಯತ್ನಿಸಿದರು ಎಂಬುದನ್ನು ಷಕರು ನೆನಪಿಸಿದ್ದಾರೆ.

ಈ ದಾರಿ ಫಲ ನೀಡಲಿಕ್ಕಿಲ್ಲ ಎಂದು ಈ ರಣದಲ್ಲಿ ಪ್ರಧಾನಿಗಳು ಒಂದು ಹೆಜ್ಜೆ ಮುಂದೆ ೀಗಿದ್ದಾರೆ. ಈ ಹಗರಣದ ನಂತರ ನಡೆದ ರ್ವತ್ರಿಕ ಚುನಾವಣೆಗಳಲ್ಲಿ, ಈ ಹಗರಣದ ೀಪ ಹಾಕಿದವರ ಸೀಟುಗಳ ಸಂಖ್ಯೆ ಇಳಿಯಿತು, ೀಪ ಹೊತ್ತ ಕಾಂಗ್ರೆಸಿನ ಸದಸ್ಯ ಬಲ ಏರಿತು; ದರೆ 'ಜನತಾ ನ್ಯಾಯಾಲಯ' ತಮ್ಮ ಪರವಾಗಿ ರ್ಪು ನೀಡಿರುವಾಗ ಮತ್ತೆ ಏಕೆ ಈ ಗದ್ದಲ ಬುದು ನಮ್ಮ ಮಹಾನ್ ದೇಶದ ಈ 'ನಿಷ್ಕಳಂಕ' ನಿಯ ತರ್ಕ. ಅಧಿಕಾರಕ್ಕಾಗಿ ನಾಡಿನ ಕಾನೂನು ರಿಯಲೂ ಹಿಂಜರಿಯದ ರಾಜಕಾರಣಿಗಳು ಮಾನ್ಯವಾಗಿ ಮುಂದಿಡುವ ತರ್ಕ ಇದು ಎನ್ನುತ್ತಾರೆ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಸಮಾಜಶಾಸ್ತ್ರಜ್ಞ ದೀಪಂಕರ್ ಗುಪ್ತ. 'ಕೇವಲ ಸಂಖ್ಯೆಯ ಮೇಲೆ ನಡೆಯುವಂತದ್ದು ಉತ್ತಮ ಪ್ರಜಾಪ್ರಭುತ್ವವಾಗಲಾರದು. ... ರಾಜಕೀಯ ಪಕ್ಷಗಳು ತಪ್ಪು ಮಾಡಿದಾಗ ಎರಡು ತರ್ಕಗಳನ್ನು ಮುಂದಿಡುತ್ತಾರೆ- ಒಂದು, ತಮ್ಮ ತಪ್ಪು ಸಾಬೀತಾಗಿಲ್ಲ ಎಂದು. ಎರಡು, ನಮ್ಮ ಸಂಖ್ಯೆ ಹೆಚ್ಚಿದೆ ಎಂದು. ನರೇಂದ್ರ ಮೋದಿ ತನ್ನ ಮೇಲಿನ ಆಪಾದನೆ ಸಾಬೀತಾಗಿಲ್ಲ ಎನ್ನುತ್ತಾರೆ. ಆದರೆ ಅವರ ಕಣ್ಣೆದುರು 2000ಕ್ಕೂ ಹೆಚ್ಚು ಜನ ಸತ್ತಿದ್ದಾರೆ ಎಂಬದು ವಾಸ್ತವ ಸಂಗತಿ. ಆನಂತರ ಅವರು ಪ್ರತಿ ಚುನಾವಣೆಯಲ್ಲಿ ತಮ್ಮ ಸಂಖ್ಯಾಬಲ ಹೆಚ್ಚಿಸಿಕೊಂಡಿದ್ದಾರೆ' ಎಂದು ನೆನಪಿಸುತ್ತಾರೆ ಈ ಸಮಾಜಶಾಸ್ತ್ರಜ್ಞ. ಬಹುಶಃ ಮೋದಿ ತಪ್ಪು ಮಾಡಿದ್ದರು ಎಂದು ತಾವೇನೂ ಹೇಳಿಲ್ಲವಲ್ಲ ಎಂದು ಯುಪಿಎ-2 ಮುಖಂಡರು ಹೇಳಬಹುದೇನೋ.

ವಿಕಿಲೀಕ್ಸ್ ದೃಢಪಡಿಸಿರುವ ಓಟಿಗಾಗಿ ನೋಟು ಪ್ರಸಂಗ ಭಾರತ-ಅಮೆರಿಕಾ ಪರಮಾಣು ವ್ಯವಹಾರದಲ್ಲಿ 'ಹೊಲಸು ಹಣ'ದ ಪಾತ್ರದ ಒಂದು ಸಣ್ಣ ಉದಾಹರಣೆಯಷ್ಟೇ. ದೇಶದ ಪ್ರಧಾನಿಗಳ ಮತ್ತು ಅವರು 'ಇಷ್ಟಪಡದ' ಚಮಚಾ ಬಂಡವಾಳಶಾಹಿಯ ಪಾತ್ರ ಈ ವ್ಯವಹಾರದಲ್ಲಿ 2ಜಿ ಮಾದರಿಯ ಇನ್ನೊಂದು ಹಗರಣಕ್ಕೆ ಜನ್ಮವಿತ್ತರೆ ಅದರಲ್ಲಿ ಆಶ್ಚರ್ಯವೇನಿಲ್ಲ ಎನ್ನುತ್ತಾರೆ ವಿಶೇಷಜ್ಞ ಬ್ರಹ್ಮ ಚೆಲಾನಿಯವರು. ಇಲ್ಲಿ ಇನ್ನೊಂದು ಆಯಾಮವಿದೆ, ಅದು ಈಗ ಜಪಾನಿನಲ್ಲಿ ಅನುಭವಕ್ಕೆ ಬಂದಿರುವ ದೀರ್ಘಕಾಲೀನ ಸುರಕ್ಷಿತತೆಯ ಪ್ರಶ್ನೆ ಎನ್ನುತ್ತಾರೆ ಅವರು. ಅಲ್ಲಿ ಸುನಾಮಿ ಹೊಡೆತದಿಂದ ಉಂಟಾದ ಪರಮಾಣು ಅನಾಹುತ 'ಮೇಡ್ ಇನ್ ಯುಎಸ್‌ಎ' ಎಂದು ಅವರು ವರ್ಣಿಸಿದ್ದಾರೆ. ಏಕೆಂದರೆ ಅಲ್ಲಿ ಅನಾಹುತಕ್ಕೀಡಾದ ಆರೂ ಸ್ಥಾವರಗಳನ್ನು ಒದಗಿಸಿದ್ದು ಅಮೆರಿಕಾದ ಜನರಲ್ ಇಲೆಕ್ಟ್ರಿಕ್ ಕಂಪನಿ- ಭಾರತ-ಅಮೆರಿಕಾ ಪರಮಾಣು ವ್ಯವಹಾರದಲ್ಲಿ ಸಕ್ರಿಯವಾಗಿದ್ದ ಒಂದು ಕಂಪನಿ. ಭಾರತದ ಮುಂಬೈ ಕಡಲತೀರದಲ್ಲಿರುವ ತಾರಾಪುರ ಅಣುಸ್ಥಾವರ ಕೂಡ ಇದೇ ಕಂಪನಿ ಕಟ್ಟಿದ ಅದೇ ತಂತ್ರಜ್ಞಾನದ್ದು ಎಂಬುದನ್ನು ಅವರು ನೆನಪಿಸಿದ್ದಾರೆ.

ವಿಕಿಲೀಕ್ಸ್‌ನ ಜೂಲಿಯನ್ ಅಸಾಂಜೆ ಭಾರತದ ಪ್ರಧಾನ ಮಂತ್ರಿಗಳು ಜನತೆಯನ್ನು ದಾರಿ ತಪ್ಪಿಸುವಂತೆ ಕಾಣುತ್ತಿದೆ ಎಂದಿದ್ದಾರೆ. ಈ ಕೇಬಲ್‌ಗಳು ಪ್ರಮಾಣಿತವಾದವುಗಳು, ಆದ್ದರಿಂದಲೇ ತಾನೇ ಅಮೆರಿಕಾದ ಸರಕಾರ 'ಹೌಹಾರಿರುವುದು ಎಂದಿರುವ ಅವರು, ಈ ಪ್ರಸಂಗವನ್ನು ಕುರಿತ ಕೇಬಲ್ ಅಮೆರಿಕನ್ ರಾಯಭಾರಿ ಕಳಿಸಿದ ಕೇಬಲ್ ಎಂಬುದರಲ್ಲಿ ಸಂದೇಹವಿಲ್ಲ, ಅಂದರೆ ಅದರಲ್ಲಿರುವ ಪ್ರತಿಯೊಂದು ಸಂಗತಿ ನಿಜವೆಂದೇನಲ್ಲ, ನೀವು ಅದರ ಮೂಲಗಳನ್ನು, ಅವಕ್ಕೆ ಅದೆಲ್ಲ ಹೇಗೆ ಸಿಕ್ಕಿತು ಎಂಬುದನ್ನು ನೋಡಬೇಕು' ಎಂದಿದ್ದಾರೆ.

ನಚಿಕೇತ ಕಪೂರ್- ಈ ಹೆಸರು ನೆನಪಿದೆಯೇ?

ಹೌದು, ವಿಕಿಲೀಕ್ಸ್ ದೃಢಪಡಿಸಿದ 'ಓಟಿಗಾಗಿ ನೋಟು' ಹಗರಣದಲ್ಲಿ ನೋಟುಗಳನ್ನು ಅಮೆರಿಕಾದ ರಾಯಭಾರಿ ಕಚೇರಿ ಪ್ರತಿನಿಧಿಗೆ ತೋರಿಸಿದ ಮಹಾನುಭಾವನ ಹೆಸರು. ಈತ ಕಾಂಗ್ರೆಸ್ ಸಂಸತ್ ಸದಸ್ಯ ಸತೀಶ್ ಶರ್ಮಾರ ನಿಕಟವರ್ತಿ, ಯುಪಿಎ ಅಧ್ಯಕ್ಷರ ಕುಟುಂಬಕ್ಕೂ. ಆದರೆ 2008ರಿಂದಲೇ ಈತನನ್ನು ಸೂಕ್ಷ್ಮ ಹುದ್ದೆಗಳಿಗೆ ಅನರ್ಹರಾದ ವ್ಯಕ್ತಿಗಳ ಪಟ್ಟಿಗೆ ನೇಮಕಗಳ ಸಂಪುಟ ಸಮಿತಿ ಸೇರಿಸಿತ್ತಂತೆ. ಆದರೂ ಕಾಮನ್ವೆಲ್ತ್ ಕ್ರೀಡಾಕೂಟದ ಸಂಘಟನಾ ಸಮಿತಿಯಲ್ಲಿ ಈತ ರಾಜತಾಂತ್ರಿಕ ವಿಧಿಗಳ ವಿಭಾಗದ ನಿರ್ದೇಶಕನಾಗಿ ನೇಮಿಸಲಾಯಿತು. ನಿಯಮಾವಳಿಗಳನ್ನು ಉಲ್ಲಂಘಿಸಿ ಈ ನೇಮಕ ಹೇಗೆ ನಡೆಯಿತು ಎಂದು ಸಿಎಜಿಯೂ ಪ್ರಶ್ನಿಸಿದೆಯಂತೆ.

ಕಪ್ಪು ಹಣಕ್ಕೆ ಎಸ್‌ಐಟಿ ರಚಿಸಬಾರದೇಕೆ?- ಸುಪ್ರಿಂ ಕೋರ್ಟ್

ವಿದೇಶಿ ಬ್ಯಾಂಕುಗಳಲ್ಲಿ ತುಂಬಿಸಿಟ್ಟ ಕಪ್ಪು ಹಣದ ಬಗ್ಗೆ 2002ರ ಗೋಧ್ರಾ ನಂತರದ ಕೋಮು ದಂಗೆಗಳ ತನಿಖೆಯ ಮಾದರಿಯಲ್ಲಿ ಒಂದು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸುವ ಬಗ್ಗೆ ಯೋಚಿಸಿ ಎಂದು ಸರ್ವೋಚ್ಚ ನ್ಯಾಯಾಲಯ ಯುಪಿಎ-2 ಸರಕಾರಕ್ಕೆ ಹೇಳಿದೆ. ಏಕೆಂದರೆ ಈ ಕಪ್ಪು ಹಣದ ಪ್ರಶ್ನೆಯಲ್ಲಿ ಹಲವು ಆಯಾಮಗಳಿವೆ. ಸಿಬಿಐ, ಜಾರಿ ನಿರ್ದೇಶನಾಲಯ(ಇಡಿ), ಆದಾಯ ತೆರಿಗೆ ಮುಂತಾದ ಇಲಾಖೆಗಳ ಅತ್ಯುತ್ತಮ ಅಧಿಕಾರಿಗಳಿರುವ ಒಂದು ಎಸ್‌ಐಟಿ ರಚಿಸುವ ಬಗ್ಗೆ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಈ ನಡುವೆ ಸುಪ್ರಿಂ ಕೋರ್ಟಿನ ತಾಕೀತಿನಿಂದಾಗಿ ಬಂಧನದಲ್ಲಿರುವ ಪುಣೆಯ ಕುದುರೆ ಲಾಯ ಮಾಲಕ ಹಸನ್ ಅಲಿಯ ಆಸ್ತಿ ಕಳೆದ ಆರು ವರ್ಷಗಳಲ್ಲಿ 529 ಕೋಟಿರೂ.ನಿಂದ 54,268 ಕೋಟಿ ರೂ. ಆಗಿದೆ, ಅಂದರೆ 100 ಪಟ್ಟು ಹೆಚ್ಚಿದೆ ಎಂದು ಸಂಸತ್ತಿನಲ್ಲಿ ಮಂಡಿಸಿದ ಸಿಎಜಿ ವರದಿ ಹೇಳಿದೆ. ಈ ವ್ಯಕ್ತಿ ಮಹಾರಾಷ್ಟ್ರದ ಮೂರು ಮುಖ್ಯಮಂತ್ರಿಗಳ ಕಪ್ಪು ಹಣವನ್ನು ಬಿಳಿಮಾಡಲು ನೆರವಾಗಿದ್ದಾನೆ ಎಂದು ಒಂದು ಪತ್ರಿಕೆ ವರದಿ ಮಾಡಿದ್ದು ಈ ಬಗ್ಗೆ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಗದ್ದಲ ಉಂಟಾಗಿದೆ.

ಅತ್ತ ನಮ್ಮ 'ನಿಷ್ಕಳಂಕ' ಪ್ರಧಾನ ಮಂತ್ರಿಗಳು ರಿಯಲ್ ಎಸ್ಟೇಟಿನಲ್ಲಿ ಕಪ್ಪು ಹಣ ಉತ್ಪಾದನೆಯಾಗುತ್ತಿರುವುದು ಒಂದು 'ದುರದೃಷ್ಟಕರ ವಾಸ್ತವತೆ' ಎಂದು ಒಪ್ಪಿಕೊಂಡಿದ್ದಾರೆ. ಅದಕ್ಕೆ ಅವರು ಸೂಚಿಸಿರುವ ಒಂದು ಪರಿಹಾರ ಸ್ಟಾಂಪ್ ಶುಲ್ಕವನ್ನು ಕಡಿಮೆ ಮಾಡುವುದು, ಅಷ್ಟೇ!

ರಾಜಾ ಸಹಚರನ ಆತ್ಮಹತ್ಯೆ

ಸಾದಿಕ್ ಬಶ್ಶಾ ಈಗ 2-ಜಿ ಹಗರಣದ ತನಿಖೆ ಎದುರಿಸಿ ಜೈಲಿನಲ್ಲಿರುವ ಮಾಜಿ ಯುಪಿಎ-2 ಮಂತ್ರಿ ರಾಜಾ ಅವರ ನಿಕಟ ಸಹವರ್ತಿ. ಕಳೆದ ವಾರ ಆತ್ಮಹತ್ಯೆ ಮಾಡಿಕೊಂಡನಂತೆ. ತನ್ನ ಮೇಲೆ, ರಾಜಾ ಮೇಲೆ ಹಗರಣದ ಆಪಾದನೆಯಿಂದ ಮನನೊಂದು ಆತ್ಮಹತ್ಯೆಗಿಳಿದಿದ್ದೇನೆ, ರಾಜಾ ನಿರಪರಾಧಿ ಎಂದು ಆತ ಬರೆದಿಟ್ಟ ಪತ್ರದಲ್ಲಿ ಇದೆಯಂತೆ. ಆ ಪತ್ರವನ್ನು ಫೊರೆನ್ಸಿಕ್ ಪರೀಕ್ಷೆಗೆ ಕಳಿಸಲಾಗಿದೆ.

ತಮಿಳುನಾಡಿನಲ್ಲಿ ಕಳೆದ ಎರಡು ದಶಕಗಳಲ್ಲಿ ಇದು ಇಂತಹ ಮೂರನೇ ಆತ್ಮಹತ್ಯೆ ಎನ್ನಲಾಗಿದೆ. ಈ ಮೂವರೂ ಡಿಎಂಕೆಯ ಉನ್ನತ ಮುಖಂಡರ ನಿಕಟವರ್ತಿಗಳಾಗಿದ್ದವರು ಎಂಬುದು ಕೇವಲ ಕಾಕಾತಾಳೀಯವಿರಬಹುದೇ? 1991ರಲ್ಲಿ ತಮಿಳುನಾಡಿನ ಮಾಜಿ ಡಿಜಿಪಿ ಅಲ್ಲಿ ಡಿಎಂಕೆ ಸೋತು ಅಧಿಕಾರ ಕಳಕೊಂಡ ಸಮಯದಲ್ಲೇ ಸತ್ತರು. ಅದು ಆತ್ಮಹತ್ಯೆ ಎಂಬ ಗುಮಾನಿ ಇತ್ತು. ಡಿಎಂಕೆ ಅಧಿಕಾರದಲ್ಲಿದ್ದಾಗ ನಡೆದ ಕೆಲವು ಭೂ ಅಕ್ರಮಗಳ ತನಿಖಾ ಸಮಿತಿಯ ಸಮನ್ಸ್ ಹಿನ್ನೆಲೆಯಲ್ಲಿ ಇದು ನಡೆಯಿತು.

2001ರಲ್ಲಿ ಅಣ್ಣಾನಗರ ರಮೇಶ ಎಂಬಾತ ಕೂಡ 'ಲಂಚದ ಆರೋಪದಿಂದ ಮನನೊಂದು' ಆತ್ಮಹತ್ಯೆ ಮಾಡಿಕೊಂಡ. ಒಬ್ಬ ಕಾಂಟ್ರಾಕ್ಟರ್ ಈತನ ಮೂಲಕ ಒಂದು ರಸ್ತೆ ಉಸ್ತುವಾರಿ ಕಾಂಟ್ರಾಕ್ಟ್ ಪಡೆಯಲು ಆಗಿನ ಚೆನ್ನೈ ಮೇಯರ್ ಎಂಕೆ ಸ್ಟಾಲಿನ್ ಹಾಗು ಹೆದ್ದಾರಿ ಮಂತ್ರಿ ಕಿರುತಿನನ್‌ಗೆ 6 ಕೋಟಿ ರೂ. ಲಂಚದ ದೂರು ಕೊಟ್ಟಿದ್ದ ಹಿನ್ನೆಲೆಯಲ್ಲಿ ಇದು ನಡೆಯಿತು.

ಹಿಂದಿನ ಎರಡೂ ಪ್ರಕರಣಗಳ ತನಿಖೆಗಳು ಮುಂದುವರೆಯಲಿಲ್ಲ. ಆದರೆ ಸುಪ್ರಿಂಕೋರ್ಟ್ ಉಸ್ತುವಾರಿಯಿಂದಾಗಿ 2011 ರಲ್ಲಿ 1991 ಮತ್ತು 2001ರ ಪುನರಾವರ್ತನೆಯಾಗಲಿಕ್ಕಿಲ್ಲ ಎಂದು ಹೇಳಲಾಗುತ್ತಿದೆ.

ಈ ನಡುವೆ ವಿಧಾನಸಭಾ ಚುನಾವಣೆಯ ನಾಮಪತ್ರದಲ್ಲಿ ಒದಗಿಸಿದ ಮಾಹಿತಿಯ ಪ್ರಕಾರ ಯುಪಿಎ ಅಂಗಪಕ್ಷ ಡಿಎಂಕೆಯ ಒಬ್ಬ ಮಂತ್ರಿಯ ಆಸ್ತಿ ಕಳೆದ ಐದು ವರ್ಷಗಳಲ್ಲಿ 780 ಪಟ್ಟು ಹೆಚ್ಚಿದೆ. ತಿರುವಣ್ಣಾಮಲೈನಿಂದ ಸ್ಪರ್ಧಿಸುತ್ತಿರುವ ಆಹಾರ ಮಂತ್ರಿ ವೇಲುರವರು 2006ರಲ್ಲಿ ಘೋಷಿಸಿದ ಆಸ್ತಿ 1 ಲಕ್ಷರೂ. ಈ ಬಾರಿ ಘೋಷಿಸಿದ ಆಸ್ತಿಗಳ ಮೊತ್ತ 7.8 ಕೋಟಿ ರೂ.!

ಓಟಿಗಾಗಿ ನೋಟು ಮತ್ತು 'ಘನತೆ ಇಲ್ಲದ ಮೈತ್ರಿ'

ವಿಕಿಲೀಕ್ಸ್ ಬಯಲುಗೊಳಿಸಿರುವ ಈ ಪ್ರಸಂಗ ಯುಪಿಎ-2 ನೇತೃತ್ವದಲ್ಲಿರುವ ಕಾಂಗ್ರೆಸಿಗೆ ುಂಬರುವ ವಿಧಾನಸಭಾ ಚುನಾವಣೆಗಳ ಂದರ್ಭದಲ್ಲಿ ಒಂದು ಶಾಪವಾಗಿ ಕಾಡುವ ಭಯ ಂಟಾಗಿದೆಯಂತೆ. ಸಂಸತ್ತಿನಲ್ಲಿ ಹೇಗೋ 2ಜಿ ದ್ದಲವನ್ನು ತಡೆದದ್ದಾಯಿತು, ಈಗ ಈ ಗದ್ದಲ. ಮಗೆ ಸಂಸತ್ತಿನಲ್ಲಿ ಏನಾಗಬಹುದು ಎನ್ನುವುದಕ್ಕಿಂತ ುಂಬರುವ 5 ರಾಜ್ಯಗಳ ವಿಧಾನ ಸಭಾ ನಾವಣೆಗಳಲ್ಲಿ ಇದರ ಪರಿಣಾಮ ಏನಾಗಬಹುದು ಂಬುದೇ ಅವರ ಭಯವಂತೆ. ಏನಾದರೂ ಕ್ಷಣೆಯ ತಂತ್ರ ಹೂಡಲೇಬೇಕಾಗುತ್ತದೆ ಎಂಬ ತಾಶೆ.


ಈ ನಡುವೆ ಪಶ್ಚಿಮ ಬಂಗಾಲದಲ್ಲಿ ಮಮತಾ ಬ್ಯಾನರ್ಜಿಯ ಸೀಟು ಹಂಚಿಕೆಯ ರೀತಿ ಅವರ ಹತಾಶೆಯನ್ನು ಇನ್ನಷ್ಟು ಹೆಚ್ಚಿಸಿದೆಯಂತೆ. 90 ಸೀಟು ಕೇಳುತ್ತಿದ್ದ ಕಾಂಗ್ರೆಸಿಗೆ 64 ಕೊಟ್ಟು, ಇದೇ ಹೆಚ್ಚು ಎನ್ನುವಂತೆ ವರ್ತಿಸಿದರೂ, ಮಾತುಕತೆಗಳು ಪೂರ್ಣಗೊಂಡಿಲ್ಲ, ತಮಗೆ 'ಘನತೆಯೊಂದಿಗೆ ಮೈತ್ರಿ' ಬೇಕು ಎಂದು ಕಾಂಗ್ರೆಸ್ ಮುಖಂಡರು ಹೇಳುತ್ತಿದ್ದಂತೆಯೇ, ತೃಣಮೂಲ ಕಾಂಗ್ರೆಸ್ ಮುಖಂಡರು ಸೋಮವಾರ(ಮಾರ್ಚ21)ದ ಒಳಗೆ ಅವನ್ನು ಸ್ವೀಕರಿಸದಿದ್ದರೆ ಅಲ್ಲೂ ತಮ್ಮ ಅಭ್ಯರ್ಥಿಗಳನ್ನು ಘೋಷಿಸುವುದಾಗಿ ಬೆದರಿಕೆಯ ಹೇಳಿಕೆ ಪ್ರಕಟಿಸಿದರು. ಸೋಮವಾರದ ಗಡುವು ಕಳೆಯುತ್ತಿದ್ದಂತೆಯೇ 65 ಸೀಟುಗಳಿಗೆ ಒಪ್ಪಿಕೊಂಡು 'ಘನತೆಯಿಲ್ಲದ' ಮೈತ್ರಿಗೆ ಯುಪಿಎ-2 ರ ನೇತೃತ್ವ ವಹಿಸಿರುವ ಪಕ್ಷ ತಲೆಬಾಗಿದೆ.

ಜಗದಗಲ

ಶರತ್‌ಚಂದ್ರ

ಅಣು ಶಕ್ತಿ ವಿಶ್ವಾಸಾರ್ಹತೆಗೆ ತೀವ್ರ ಸವಾಲು ಒಡ್ಡಿದ ಫುಕುಶಿಮಾ ಸುನಾಮಿ

ಜಪಾನಿನ ಫುಕುಶಿಮಾದಲ್ಲಿ ಇತ್ತೀಚೆಗೆ ಅಪ್ಪಳಿಸಿದ ಸುನಾಮಿ ಜಪಾನಿನ ಆರ್ಥಿಕ ಮತ್ತು ಅಣು ಶಕ್ತಿಯ ವಿಶ್ವಾಸಾರ್ಹತೆಗೆ ತೀವ್ರ ಸವಾಲು ಒಡ್ಡಿದೆ. ಚಾರಿತ್ರಿಕವಾಗಿ ಈ ವರೆಗಿನ ಎಲ್ಲಾ ಸುನಾಮಿಗಳ ತೀವ್ರತೆಯನ್ನು ಮೀರಿಸಿದ ಈ ಸುನಾಮಿ ಎರಡು ಪಟ್ಟಣಗಳನ್ನು ನೆಲಸಮ ಮಾಡಿದೆ. ಸಾವಿರಾರು ಸಾವು-ನೋವು ಲಕ್ಷಾಂತರ ಜನರನ್ನು ನಿರಾಶ್ರಿತರನ್ನಾಗಿ ಮಾಡಿದ ಈ ಪ್ರಾಕೃತಿಕ ವಿಕೋಪದ ಇತರ ಕೆಲವು ಪರಿಣಾಮಗಳು ಜಾಗತಿಕವಾಗಿ ಎಲ್ಲಾ ದೇಶಗಳ ಜನತೆಯನ್ನು ಬಾಧಿಸುವಂತಹದ್ದು. ಈಗಾಗಲೇ ಬಿಕ್ಕಟ್ಟಿನಲ್ಲಿದ್ದ ಜಗತ್ತಿನ ಮೂರನೇ ದೊಡ್ಡ ಆರ್ಥಿಕವಾದ (ಇತ್ತೀಚೆಗಷ್ಟೇ ಚೀನಾ ಅದನ್ನು ಎರಡನೇ ಸ್ಥಾನದಿಂದ ಕೆಳಕ್ಕೆ ತಳ್ಳಿತ್ತು) ಜಪಾನಿನ ಆರ್ಥಿಕಕ್ಕೆ ತೀವ್ರ ಹೊಡೆತ ಮತ್ತು ಅದರ ಪರಿಣಾಮವಾಗಿ ಜಾಗತಿಕ



ಆರ್ಥಿಕದಲ್ಲೂ ಅಲ್ಲೋಲ ಕಲ್ಲೋಲ ಕಂಡಿ
ಸುನಾಮಿಯ ಪರಿಣಾಮವಾಗಿ ಎರಡು ಪಟ್ಟಣಗ
ಇದ್ದ ನಾಲ್ಕು ಅಣು ಶಕ್ತಿ ಸ್ಥಾವರಗಳಲ್ಲಿ ಆದ ಸ್ಫೋ
ಅದರಿಂದ ಹರಡುತ್ತಿರುವ ತೀವ್ರ ವಿಕಿರಣ ಇ
ಜಪಾನಿಗೆ ಅಪಾಯ ಒಡ್ಡಿದೆ. ಜಾಗತಿಕವ
ಹರಡುವ ಅಪಾಯ ಸಹ ತಲೆದೋರಿದೆ.

ಜಪಾನಿನಲ್ಲಿ ಭೂಕಂಪಗಳು ಮತ್ತು ಕರಾ
ತೀರದಲ್ಲಿ ಸುನಾಮಿ ನಿತ್ಯ ಜೀವನದ ಭಾಗ. ಜಪ
ಜನ ಈ ಪ್ರಾಕೃತಿಕ ಪ್ರಕೋಪಗಳು, ಸಂಪನ್ಮೂ
ಅಭಾವ ಎಲ್ಲವನ್ನೂ ಎದುರಿಸಿ, ಕಷ್ಟ ಸಹಿ
ಪರಿಶ್ರಮಗಳಿಂದ ಜಗತ್ತಿನ ಎರಡನೇ ಅತಿ ದೊ
ಆರ್ಥಿಕ ಕಟ್ಟಿಕೊಂಡಿದ್ದವರು. ಜಪಾನಿನ ಮನೆ
,ಕಟ್ಟಡಗಳು, ಕೈಗಾರಿಕಾ ಸ್ಥಾವರಗಳ ವಿನ್ಯಾಸ ಆ
ಅನುಗುಣವಾಗಿರುತ್ತದೆ. ಆದರೆ
ಭೂಕಂಪ-ಸುನಾಮಿ ಒಡ್ಡಿದ ಸವಾಲನ್ನು ಎದುರಿ
ಸಾಧ್ಯವಾಗಿಲ್ಲ. ಮುಖ್ಯ ಅಣು ಸ್ಥಾವರ ವಿನ್ಯಾ
ಅನುಗುಣವಾಗಿ ಬಂದ್ ಆಯಿತು. ಆ
ಈಗಾಗಲೇ ಬಿಸಿಯಾಗಿರುವ ಅಣು ಇಂಧನಗ
ತಂಪುಗೊಳಿಸುವುದು ಸಾಧ್ಯವಾಗದೆ ಸ್ಥಾವರ
ಹಲವು ಸ್ಫೋಟಗಳು ಆಗಿವೆ. ಸುನಾಮಿಯಿ
ವಿದ್ಯುತ್ ಮತ್ತು ನೀರು ಪೂರೈಕೆಯಲ್ಲಿ ಆ
ವ್ಯತ್ಯಯವಾಗಿದ್ದು ಇದಕ್ಕೆ ಕಾರಣವಾಗಿದೆ. ಇದ
ಆಕಸ್ಮಿಕಗಳಿಗೆ ಬೇಕಾದ ತಯಾರಿ, ನಿರ್ವಹಣ
ತುರ್ತುಗಳ ತೀವ್ರ ಅಭಾವ ಸಹ ಕಂಡು ಬಂ
ಇದು ಇಡೀ ಸ್ಥಾವರದ ವಿನ್ಯಾಸ ವ
ನಿರ್ವಹಣೆಯಲ್ಲಿ ತೀವ್ರ ಲೋಪ ದೋಷಗಳತ್ತ ಬ
ಮಾಡಿದೆ. ಈ ತುರ್ತಿನಲ್ಲಿ ಮಾಹಿತಿಯ
ಹಂಚಿಕೊಂಡು ಅಂತರ್ರಾಷ್ಟ್ರೀಯ ತಾಂತ್ರಿಕ ನೆ
ಕೋರುವುದರಲ್ಲಿ ಕಂಡು ಬಂದ ಅಪಾರದರ್ಶ
ಸಹ ಜಾಗತಿಕ ಆತಂಕಕ್ಕೆ ಕಾರಣವಾಗಿದೆ. ಸುನಾ
ಪೀಡಿತ ಕರಾವಳಿಯಲ್ಲಿ ಸಾಗರದ ಅಷ್ಟು ಹ
ಅಣು ಸ್ಥಾವರದ ಸ್ಥಾಪನೆಯ ಔಚಿತ್ಯವ
ಪ್ರಶ್ನಿಸಲಾಗಿದೆ.

ಅಮೆರಿಕದ ತ್ರೀ-ಮೈಲ್ ಐಲೆಂಡ್, ದ
ಚೆರ್ನೋಬಿಲ್ ನಂತರ ಮೂರನೇ ಅತಿ ದೊಡ್ಡ
ದುರಂತ ಆದ ಫುಕುಶಿಮಾದಲ್ಲಿ ಕಂಡು ಬಂದ ವಿ
ನಿರ್ವಹಣೆಯ ಸಮಸ್ಯೆಗಳು, 55ಕ್ಕೂ ವ
ಸ್ಥಾವರಗಳನ್ನು 50 ವರ್ಷಕ್ಕೂ ಹೆಚ್ಚಿನ
ಅಚ್ಚುಕಟ್ಟಾಗಿ ನಿರ್ವಹಿಸಿ ಜಪಾನ್ ಅಣುಶ
ವಿಶ್ವಾಸಾರ್ಹತೆಗೆ ಒಂದು ಕಾರಣವಾಗಿತ್ತು. ಅ
ಜಪಾನಿನಲ್ಲೇ ಈ ದುರಂತ ಸಂಭವಿಸಿದ್ದು
ವಿಶ್ವಾಸಾರ್ಹತೆಗೆ ತೀವ್ರ ಹೊಡೆತ ಕೊಟ್ಟಿದೆ. ಬ
ಸರ್ಕಾರ ಈಗಾಗಲೇ ಎಲ್ಲಾ ಹೊಸ ಅಣು
ಸ್ಥಾವರಗಳ ಪುನರ್ವಿಮರ್ಶೆ, ಪ್ರಸ್ತುತ ಸ್ಥಾವ
ಸುರಕ್ಷಿತತೆ ಅಧ್ಯಯನಕ್ಕೆ ಆಜ್ಞೆ ಮಾಡಿದೆ. ಭ
ಸೇರಿದಂತೆ ಹಲವು ದೇಶಗಳಲ್ಲಿ ಪ್ರಸ್ತುತ ಸ್ಥಾವ
ಸುರಕ್ಷಿತತೆ ಅಧ್ಯಯನಕ್ಕೆ ಸರ್ಕಾರಗಳು ಮುಂದಾ

ಲಿಬಿಯಾ ಪರಿಸ್ಥಿತಿ ನಾವಂದುಕೊಂಡಂತಿಲ್ಲ.....

ಪುಟ 9 ರಿಂದ

ಮಾಡದೇ ವಾಪಸ್ ಮಾಡಿದ ಉದಾಹರಣೆ ಇದೆಯೇ ಹೊರತು ಹಣಕ್ಕಾಗಿ ವಿವಿ ಕೈಚಾಚುವುದಿಲ್ಲ.'

ಮೂಲಭೂತವಾದಿಗಳಲ್ಲ;

ಲಿಬಿಯಾ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ದೇಶವಾದರೂ ಅಲ್ಲಿ ಮುಸ್ಲಿಂ ಮೂಲಭೂತವಾದ ಎಂಬುದಿಲ್ಲ. ಅಲ್ಲಿನವರು ಸಾಂಪ್ರದಾಯಿಕ ಮುಸ್ಲಿಮರಂತೆ ಗಡ್ಡ ಬಿಡುವುದಿಲ್ಲ. ಜನತೆ ಇತರರ ಬಗ್ಗೆ ಕಾಳಜಿಯುಳ್ಳವರು. ಅಲ್ಲಿನ ಪೊಲೀಸರೂ ಸಹ ದಾರಿಹೋಕರಿಗೆ ಮಾರ್ಗದರ್ಶನ ನೀಡುತ್ತಾರೆಯೇ ಹೊರತು ಅಡ್ಡಿ ಮಾಡುವುದಿಲ್ಲ.'

'ಮು ಅಮ್ಮರ್ ಪರ ವಿರೋಧಿ ಗುಂಪುಗಳು ಮತ ಪ್ರದರ್ಶನದಲ್ಲಿ ತೊಡಗಿದ್ದನ್ನು ನಾನು ಕಂಡಿದ್ದೇನೆ. ಒಮ್ಮೆ ಟ್ರಿಪೋಲಿಯಲ್ಲಿ ಗಡಾಫಿ ತೆರೆದ ಜೀಪಿನಲ್ಲಿ ಬೀದಿಯಲ್ಲಿ ಸಾಗುತ್ತಿದ್ದಾಗ ಮಹಿಳೆಯರು, ಪುರುಷರು ಮನೆ ಮಹಡಿಯ ಮೇಲೆ ನಿಂತು ಕೈ ಬೀಸುತ್ತಿದ್ದರು. ಮುಸ್ಲಿಂ ಮೂಲಭೂತವಾದವನ್ನು ವಿರೋಧಿಸುತ್ತಿದ್ದ ಅವರು, ಮುಸ್ಲಿಂ ರಾಷ್ಟ್ರಗಳು ವಿಜ್ಞಾನಕ್ಕೆ ಹೆಚ್ಚು ಒತ್ತು ಕೊಡಬೇಕು. ಈ ಬಗ್ಗೆ ತಮಗಿರುವ ಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳಬೇಕು ಎಂದು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದ್ದರು.'

ಮದ್ಯಪಾನ ನಿಷೇಧ :

ಲಿಬಿಯಾದಲ್ಲಿ ಮದ್ಯಪಾನವನ್ನು ಸಂಪೂರ್ಣ ನಿಷೇಧಿಸಿದೆ. ಆದರೆ ಪಕ್ಕದ ರಾಷ್ಟ್ರ ಟ್ಯುನೀಷಿಯಾದಿಂದ ಮದ್ಯವನ್ನು ಕಳ್ಳಸಾಗಣೆ ಮಾಡಲಾಗುತ್ತಿದ್ದು, ಅದನ್ನು ತಡೆಯುವ ಉದ್ದೇಶದಿಂದ ಗಡಿಯಲ್ಲಿ ತೀವ್ರ ಭದ್ರತೆ ಕಲ್ಪಿಸಲಾಗಿದೆ.'

ಭಾರತೀಯರಿಗೆ ವಿಶೇಷ ಗೌರವ :

ಲಿಬಿಯಾದಲ್ಲಿ ಭಾರತೀಯ ಮೂಲದವರಿಗೆ ವಿಶೇಷ ಗೌರವವಿದೆ. ಒಮ್ಮೆ ಟ್ಯುನೀಷಿಯಾ ಗಡಿಗೆ ಹೊಂದಿಕೊಂಡಂತಿದ್ದ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿನ ಭದ್ರತಾ ಸಿಬ್ಬಂದಿ ತಪಾಸಣೆಗೆ ಬಂದರು. ಆಟೊ ಡ್ರೈವರ್ ನನ್ನನ್ನು ತೋರಿಸಿ 'ಹಿಂದ್' (ಭಾರತೀಯ) ಎಂದು ಸನ್ನೆ ಮಾಡಿದ ನಂತರ ಸಿಬ್ಬಂದಿ ಮುಂದೆ ಹೋಗಲು ಮುಕ್ತ ಪರವಾನಗಿ ನೀಡಿದರು. ಆದರೆ ಪಾಕಿಸ್ತಾನೀಯರು ಎಂದು ಗೊತ್ತಾದರೆ ಅವರ ಪಾಸ್‌ಪೋರ್ಟನ್ನೂ ತಪಾಸಣೆ ಮಾಡುತ್ತಾರೆ.'

ವಿದೇಶಿಯರು ತಮ್ಮ ದೇಶಕ್ಕೆ ವಾಪಸಾಗುವಾಗ ಕೆಲವರ ಮೊಬೈಲ್, ಲ್ಯಾಪ್‌ಟಾಪ್‌ಗಳನ್ನು ಪೊಲೀಸರು ವಾಪಸ್ ಪಡೆದರು. ಇಲ್ಲಿ ತೆಗೆದ ಗಲಭೆಯ ದೃಶ್ಯಗಳ ಚಿತ್ರಗಳನ್ನು ಕೊಂಡೊಯ್ಯುತ್ತಾರೆಂಬು ಹೀಗೆ ಮಾಡಿದ್ದಾರೆ. ಆದರೆ ಹಣ ಮತ್ತು ಇತರ ವಸ್ತುಗಳಿಗೆ ಏನೂ ಧಕ್ಕೆ ತರಲಿಲ್ಲ. ಭಾರತಕ್ಕೆ ವಾಪಸಾಗಲು ಯಾವುದೇ ತೊಂದರೆಯಾಗಲಿಲ್ಲ' ಎಂದರು.

'ಗಡಾಫಿ ಎಲ್ಲವನ್ನೂ ಸರಿ ಮಾಡಿದ್ದಾನೆ. ಅಲ್ಲಿ ಎಲ್ಲವೂ ಸರಿಯಿದೆ ಎನ್ನುವುದು ಇದರರ್ಥವಲ್ಲ. ಅಲ್ಲಿಯೂ ಸಮಸ್ಯೆಗಳಿವೆ. ವಿವಿಧ ದೇಶಗಳಲ್ಲಾದ ದಂಗೆಗಳಿಂದ ಪ್ರಭಾವಿತರಾದ ಗಡಾಫಿ ವಿರೋಧಿ ಪಡೆ ಅಲ್ಲಿನ ಜನರನ್ನು ಎತ್ತಿ ಕಟ್ಟುತ್ತಿದೆ. ಆದರೆ ವಿರೊಧಿ ಬಣದಲ್ಲಿ ಕಾಣಿಸಿಕೊಳ್ಳುತ್ತಿರುವವರ ಸಂಖ್ಯೆ ಕಡಿಮೆ ಇತ್ತು' ಎಂದು ಅವರು ಮಾತು ಮುಗಿಸಿದರು. ○

ಲಿಬ್ಯಾದ ಮೇಲೆ ದಾಳಿ

ಪುಟ 9 ರಿಂದ

ಲಿಬ್ಯಾದಲ್ಲಿ ಇವೆ. (ಲಿಬ್ಯಾದಿಂದ ಇತ್ತೀಚೆಗೆ ವಾಪಸು ಬಂದ ಕೆಲವು ಕರ್ನಾಟಕದ ನಾಗರಿಕರ ಹೇಳಿಕೆಗಳನ್ನು ಇದೇ ಸಂಚಿಕೆಯಲ್ಲಿ (ನೋಡಿ) ಅಲ್ಲಿನ ಯುವಕರ ದಂಗೆ ಬಹುಶಃ ರಾಜಕೀಯವಾದ್ದು. ಹೆಚ್ಚಿನ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳಿಗೆ. ಆದರೆ ಅದು ಲಿಬ್ಯಾದ ಆಂತರಿಕ ರಾಜಕೀಯ ಬದಲಾವಣೆಯ ವಿಷಯ. ಅದರ ಸುತ್ತ ಆಂತರಿಕ ಯುದ್ಧ ನಡೆದರೂ, ಅದು ಅವರ ಆಂತರಿಕ ವಿಷಯ. ಯಾವುದೇ ದೇಶಕ್ಕೆ ಅದರಲ್ಲಿ ಮಿಲಿಟರಿ ಮಧ್ಯಪ್ರವೇಶ ಮಾಡಲು ಹಕ್ಕಿಲ್ಲ.

ಈ ನಡುವೆ ಗದ್ದಾಫಿ ಸರ್ಕಾರ ಮತ್ತು ವಿರೋಧಿ ಪಡೆಗಳ ನಡುವೆ ಯುದ್ಧ ತೀವ್ರಗೊಂಡಿದೆ. ಲಿಬ್ಯಕ್ಕೆ ವಾಯು ರಕ್ಷಣಾ ಸಾಮರ್ಥ್ಯ ಕೊಡುವ ರಾಡಾರ್, ವಿಮಾನ ಉರುಳಿಸುವ ಗನ್, ಭಾರೀ ತೋಪುಗಳನ್ನು ನಾಟೋ ವಿಮಾನ ದಾಳಿ ನಾಶ ಮಾಡಿದ್ದರೂ, ವಿರೋಧಿ ಪಡೆಗಳ ಮುನ್ನಡೆ ಸಾಧ್ಯವಾಗಿಲ್ಲ. ನಾಟೋ ವಿಮಾನ ದಾಳಿಯ ಮೊದಲು ಸರ್ಕಾರಿ ಪಡೆಗಳಿಗೆ ಇದ್ದ ಮುನ್ನಡೆ ಇಲ್ಲವಾಗಿದೆ. ವಿರೋಧಿ ಪಡೆಗಳ ವಶದಲ್ಲಿದ್ದ ಮಿಸ್ರಾಟಾ ಮತ್ತು ಬೆಂಗಾಜಿಗಳನ್ನು ಸುತ್ತುವರೆದು ಮರುವಶ ಪಡೆಯುವುದಕ್ಕೆ ಹತ್ತಿರವಾಗಿದ್ದ ಸರ್ಕಾರಿ ಪಡೆಗಳಿಗೆ ತಡೆ ಆಗಿದೆ.

ನಾಟೋ ಮಿಲಿಟರಿ ದಾಳಿಗೆ ಮಣಿಯುವುದಿಲ್ಲ. ಶರಣಾಗತ ಆಗುವುದಿಲ್ಲ. ಪ್ರಾಣ ಇರುವ ವರೆಗೆ ಹೋರಾಡುತ್ತೇವೆ. ಯುದ್ಧವನ್ನು ಯುರೋಪಿಗೆ ಒಯ್ಯುತ್ತೇವೆ ಎಂದು ಲಿಬ್ಯಾದ ಗದ್ದಾಫಿ ಸರ್ಕಾರ ಹೇಳಿದೆ. ಆದ್ದರಿಂದ ಲಿಬ್ಯಾದಲ್ಲೂ ಇರಾಕ್, ಅಫ್ಘಾನಿಸ್ತಾನ, ಯುಗೋಸ್ಲಾವಿಯಾಗಳಂತೆ ದೀರ್ಘ ಸಂಘರ್ಷ, ಜನತೆಗೆ ತೀವ್ರ ಸಾವು-ನೋವು ಕಾದಿದೆ. ○

ಘೋರ ಭ್ರಷ್ಟ ಬಿಜೆಪಿ....

ಪುಟ 15 ರಿಂದ

■ ವಯಾಲಿಕಾವಲ್, ಹೆಚ್‌ಬಿಸಿಎಸ್ ನಾಗವಾರದಲ್ಲಿ 47,972 ಚದುರ ಅಡಿ ಅಳತೆಯ ರಸ್ತೆಯನ್ನು ಅಕ್ರಮವಾಗಿ ವಶಕ್ಕೆ ತೆಗೆದುಕೊಂಡು ಮೆ: ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿ ಕಂಪನಿಯು ರೂ. 16.26 ಕೋಟಿ ಲಾಭ ಮಾಡಿಕೊಂಡಿದೆ.

■ ಕೆಆರ್ ಪುರಂನಲ್ಲಿ ಸರ್ವೆ ನಂ. 55/2 ನ ಒಂದು ಎಕರೆ 2 ಗುಂಟೆ ಭೂಮಿಯನ್ನು ಡಿನೋಟಿಫೈ ಮಾಡಿ ರೂ. 19.6 ಕೋಟಿ ಗಳಿಸಿದ್ದಾರೆ.

■ ಅರಕೆರೆ ಗ್ರಾಮದಲ್ಲಿ ಎರಡು ಎಕರೆ 5 ಗುಂಟೆ ಭೂಮಿಯನ್ನು ಡಿನೋಟಿಫೈ ಮಾಡಿ, 1.75 ಎಕರೆಗಳನ್ನು ಮುಖ್ಯಮಂತ್ರಿಯ ಹತ್ತಿರದ ಸಂಬಂಧಿಗೆ ಮಾರಲಾಯಿತು. ಇದರಿಂದ ಅವರಿಗೆ ರೂ. 25.39 ಕೋಟಿ ಲಾಭ ಸಿಕ್ಕಿದೆ.

■ ಬೆಂಗಳೂರಿನ ಲೊಟ್ಟೆಗೊಲ್ಲನಹಳ್ಳಿಯ ಸರ್ವೆ ನಂ. 10/1ರಲ್ಲಿ 9 ಗುಂಟೆ ಹಾಗೂ ಸರ್ವೆ ನಂ. 10/11ಎಫ್ ನಲ್ಲಿ 14 ಗುಂಟೆ ಭೂಮಿಯನ್ನು ಡಿನೋಟಿಫೈ ಮಾಡಲಾಗಿದೆ. ಇದರಲ್ಲಿ ಸರ್ವೆ ನಂ. 10/11ಎಫ್ ಭೂಮಿಯನ್ನು ಗೃಹಮಂತ್ರಿ ಅಶೋಕ ರವರಿಗಾಗಿ ಡಿನೋಟಿಫೈ ಮಾಡಲಾಗಿದೆ.

■ ಆನೇಕಲ್ ತಾಲ್ಲೂಕಿನಲ್ಲಿ ಕೃಷಿ ಭೂಮಿಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಮಾರ್ಪಾಟು ಮಾಡಿ ವಲಯ ನಿಬಂಧನೆಗಳನ್ನು ಮಾರ್ಪಾಟು ಮಾಡಿಕೊಟ್ಟಿರುವುದು ಭಗತ್ ಹೋಮ್ಸ್ ಮತ್ತು ಮೆ: ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿ ಕಂಪನಿಗಳಿಗೆ ಲಾಭವಾಗಿದೆ. ಇವೆರಡೂ ಕಂಪನಿಗಳು ಮುಖ್ಯಮಂತ್ರಿಯವರ ಕುಟುಂಬದವರ ಮಾಲೀಕತ್ವದಲ್ಲಿದ್ದು, ಇದರಿಂದ ರೂ 3ಕೋಟಿ ಮತ್ತು 2.5 ಕೋಟಿ ಲಾಭವಾಗಿದೆ.

■ ಅಗರ ಗ್ರಾಮದ ಸರ್ವೆ ನಂ. 149ನಲ್ಲಿ 2 ಎಕರೆ ಮತ್ತು 5 ಗುಂಟೆ ಭೂಮಿಯನ್ನು ಜನವರಿಯಲ್ಲಿ ಡಿನೋಟಿಫೈ ಮಾಡಲಾಗಿದೆ. 16,000 ಚದುರ ಅಡಿ ಮತ್ತು 5,000 ಚದುರ ಅಡಿ ನಿವೇಶನಗಳನ್ನು ಎಸ್ ಎಸ್ ಉಗಾರ್ ಮಾಲೀಕತ್ವದ ಮೆ: ಎಲೈನ್ ಡೆವಲಪರ್ಸ್ ಪ್ರೈ ಲಿ. ಕಂಪನಿಗೆ ರೂ. 1.76 ಕೋಟಿ ಮತ್ತು ರೂ. 44 ಲಕ್ಷಕ್ಕೆ ಮಾರಲಾಗಿದೆ. ಇದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ. 74.05 ಕೋಟಿ ನಷ್ಟವಾಗಿದೆ.

■ ಶಿವಮೊಗ್ಗದ ಮಾಚೇನಹಳ್ಳಿ-ಹೊನ್ನಾವಿಳೆ ಕೈಗಾರಿಕಾ ಪ್ರದೇಶದಲ್ಲಿ 100 ಎಕರೆ ಭೂಮಿಯನ್ನು ಪ್ರವೀಣ್ ಚಂದ್ರ ಮಾಲೀಕತ್ವದ ಇ ರಾಮ ಮೂರ್ತಿ ಪವರ್ ಪ್ರೈ ಲಿ. ಕಂಪನಿಗೆ ಹಂಚಿಕೆ ಮಾಡಲಾಗಿದೆ. ಅವನಿಗೆ ಹೊಸದುರ್ಗ ತಾಲ್ಲೂಕಿನ ರಾಮಜ್ಜನಹಳ್ಳಿ ಕಾವಲ್ ಮತ್ತು ಮಲ್ಲಪುರ ಗ್ರಾಮಗಳಲ್ಲಿ ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಅದಿರಿಗಾಗಿ 330 ಎಕರೆಗಳಷ್ಟು ಗಣಿಗಾರಿಕೆಯ ಲೈಸೆನ್ಸ್ ಕೂಡ ನೀಡಲಾಗಿದೆ.

■ ರಾಚೇನಹಳ್ಳಿಯಲ್ಲಿ 9 ಎಕರೆ ಯನ್ನು ಡಿನೋಟಿಫೈ ಮಾಡಲಾಗಿದೆ. ಈ ಭೂಮಿಯ ಮಾಲೀಕರು ಮೆ: ಹೆಲ್ತ್ ಜೋನ್ ಅಡ್ವೈಸರ್ಸ್ (ಇಂಡಿಯಾ) ಪ್ರೈ ಲಿ ಕಂಪನಿಗೆ 1 ಎಕರೆ 23.2 ಗುಂಟೆ ಭೂಮಿಯನ್ನು ಮಾರಿ ರೂ. 34.41 ಕೋಟಿ ಲಾಭ ಗಳಿಸಿದ್ದಾರೆ.

■ ಕೆಂಪಾಪುರ ಗ್ರಾಮದ ಸರ್ವೆ ನಂ. 21/3ರಲ್ಲಿ 33 ಗುಂಟೆ ಮತ್ತು ಹೆಬ್ಬಾಳ ಅಮ್ಮಣಿಕೆರೆಯ ಸರ್ವೆ ನಂ. 6/2ಎನಲ್ಲಿ 36 ಗುಂಟೆ, ಸರ್ವೆ ನಂ. 6/2ಸಿ ನಲ್ಲಿ 23 ಗುಂಟೆ, ಮತ್ತು ಸರ್ವೆ ನಂ. 6/2ಬಿ ನಲ್ಲಿ 23 ಗುಂಟೆ ಭೂಮಿಯನ್ನು ಪ್ರಕಾಶ್ ಶೆಟ್ಟಿ ಮಾಲೀಕತ್ವದ ಮೆ: ತ್ರಿಶೂಲ್ ಡೆವಲಪರ್ಸ್ ಕಂಪನಿಗೆ ಲಾಭಕರವಾಗುವಂತೆ ಡಿನೋಟಿಫೈ ಮಾಡಲಾಗಿದೆ.

■ ಮುಖ್ಯ ಮಂತ್ರಿಗಳ ಕುಟುಂಬದವರ ಜೊತೆ ಮೆ: ದವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿ ಕಂಪನಿಯಲ್ಲಿ ಪಾಲುದಾರಿಕೆ ಹೊಂದಿರುವ ಪಾಲುದಾರನ ಮತ್ತೊಂದು ಕಂಪನಿ ಬೆಸ್ಟೊ ಇನ್‌ಪ್ರಾಸ್ಟ್ರಕ್ಚರ್ ಗಾಗಿ ಶ್ರೀರಾಮಪುರ ಗ್ರಾಮದ ಸರ್ವೆ ನಂ. 15/1 ಮತ್ತು 15/2ರಲ್ಲಿ 11 ಎಕರೆ 25 ಗುಂಟೆ ಜಮೀನನ್ನು ಡಿನೋಟಿಫೈ ಮಾಡಿಕೊಡಲಾಗಿದೆ. ಈ ಭೂಮಿಯನ್ನು ಡಾ: ಬಿಆರ್ ಶೆಟ್ಟಿಯ ಹೆಸರಿನಲ್ಲಿ ಡಿನೋಟಿಫೈ ಮಾಡಲಾಗಿದ್ದು, ಅವನು ಅದರಲ್ಲಿ ಎರಡು ಎಕರೆ 20 ಗುಂಟೆಯನ್ನು ಬೆಸ್ಟೊ ಇನ್‌ಪ್ರಾಸ್ಟ್ರಕ್ಚರ್‌ಗೆ ರೂ. 3.75 ಕೋಟಿಗೆ ಮಾರಿದ್ದಾನೆ. ಆ ಸಂದರ್ಭದಲ್ಲಿ ಮಾರುಕಟ್ಟೆ ದರ ರೂ. 54.5 ಕೋಟಿಯಿತ್ತು.

■ ಬಿಜೆಪಿ ಎಂಎಲ್‌ಎ ಡಾ: ಹೇಮಚಂದ್ರ ಸಾಗರ್ ಕೋರಿಕೆಯ ಮೇರೆಗೆ ಉತ್ತರಹಳ್ಳಿ ಗ್ರಾಮದ ಸರ್ವೆ ನಂ. 121ರಲ್ಲಿ 10 ಎಕರೆ ಜಮೀನನ್ನು ಡಿನೋಟಿಫೈ ಮಾಡಲಾಗಿದೆ.

■ ನಾಗರಭಾವಿಯ ಸರ್ವೆ ನಂ. 78ರಲ್ಲಿ 5 ಎಕರೆ 13 ಗುಂಟೆ ಭೂಮಿಯನ್ನು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ತೀರ್ಪನ್ನು ಉಲ್ಲಂಘಿಸಿ ಡಿನೋಟಿಫೈ ಮಾಡಲಾಗಿದ್ದು ಬಿಡಿಎ ಸಂಸ್ಥೆಗೆ ರೂ. 115 ಕೋಟಿ ನಷ್ಟವುಂಟು ಮಾಡಲಾಗಿದೆ.


■ ಮುಖ್ಯಮಂತ್ರಿಯ ಮಗ ಬಿವೈ ರಾಘವೇಂದ್ರನಿಗೆ ಬೆಂಗಳೂರಿನ ಆರ್‌ಎಂವಿ 2ನೇ ಹಂತದಲ್ಲಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ್ದು ಭ್ರಷ್ಟಾಚಾರಗಳ ಕುರಿತು ಹುಯಿಲೆದ್ದಾಗಲಷ್ಟೆ ಅದನ್ನು ಹಿಂತಿರುಗಿಸಲಾಗಿದೆ.

■ ಆದರ್ಶ ಡೆವಲಪರ್ಸ್ ಕಂಪನಿಯು ಮುಖ್ಯಮಂತ್ರಿಗಳಿಂದ ಸಹಾಯ ಪಡೆದು ರೂ. 5ಕೋಟಿ ನೀಡಿದೆ ಎಂದು ಆರೋಪಿಸಲಾಗಿದೆ.

ಇದರ ನಡುವೆಯೇ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಅವನ ಮಗ ಹಾಗೂ ಇನ್ನಿತರ ಭೂ ಹಗರಣಗಳ ಕುರಿತು ಲೋಕಾಯುಕ್ತರ ತನಿಖೆಯ ದಿಕ್ಕು ತಪ್ಪಿಸಲು ಇದೇ ಹಗರಣಗಳ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಾದೀಶ ಪದ್ಮರಾಜ್ ನೇತೃತ್ವದಲ್ಲಿ ಆಯೋಗವೊಂದನ್ನು ಸರ್ಕಾರ ರಚಿಸಿ ಜನತೆಯ ಕಣ್ಣಿಗೆ ಮಣ್ಣೆರಚಲು ಯತ್ನಿಸಿದೆ. ಈ ಹಗರಣದಲ್ಲಿ ಭಾರಿ ಮೊತ್ತದ ಹಣವನ್ನು ಭೂಮಿ ಕಳೆದುಕೊಂಡವರ ಹೆಸರಿನಲ್ಲಿ ಕಟ್ಟಾ ಮಗ ಮತ್ತು ಕುಟುಂಬದ ಸದಸ್ಯರು ಪಡೆದಿದ್ದಾರೆಂದು ಮೇಲ್ನೋಟಕ್ಕೆ ಸಾಬೀತಾಗಿ ಕಟ್ಟಾ ತನ್ನ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಇದರಿಂದ ಲೋಕಾಯುಕ್ತರೂ ಕೂಡ ಸರ್ಕಾರದ ವಿರುದ್ಧ ಗುಡುಗು ಹಾಕಿದ್ದರು.

ಮಾಜಿ ಮುಜರಾಯಿ ಖಾತೆ ಸಚಿವ ಕೃಷ್ಣಯ್ಯ ಶೆಟ್ಟಿ ಚಿಕ್ಕಬಳ್ಳಾಪುರದ ಶಿಡ್ಲಘಟ್ಟ ಬಳಿ ಸುಮಾರು ರೂ. 400 ಕೋಟಿ ಭೂಹಗರಣದಲ್ಲಿ ಸಿಕ್ಕಿಬಿದ್ದು ಸಚಿವ ಸ್ಥಾನ ಕಳೆದುಕೊಂಡರೂ; ಇನ್ನೂ ಅವರು ಕರ್ನಾಟಕ ಗೃಹಮಂಡಳಿ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಹಾಗೆಯೇ ಇನ್ನೂ ಹತ್ತು ಹಲವು ಕರ್ಮಕಾಂಡಗಳಲ್ಲಿ ಮುಳುಗಿರುವುದು ಪತ್ರಿಕೆಗಳಲ್ಲಿ ಬಂದಿದೆ.

ಅರಣ್ಯ ಭೂಮಿಯನ್ನು ರೈತರ ಮೂಲಕ ಕೈಗಾರಿಕೆಗಳಿಗೆ ಪರಭಾರೆ:



ಬಿಜೆಪಿ ಸರ್ಕಾರ ಸಾರ್ವಜನಿಕ ಸಂಪತ್ತಿನ ಲೂಟಿಗಾಗಿ ನವನಾವೀನ್ಯದ ಅಕ್ರಮ ದಾರಿಗಳನ್ನು ಸೃಷ್ಟಿಸುವುದರಲ್ಲಿ ಸದಾ ಮುಂಚೂಣಿಯಲ್ಲಿದೆ ಎಂಬುದಕ್ಕೆ ಮತ್ತೊಂದು ಸಾಕ್ಷಿಯಾಗಿ ಅರಣ್ಯ ಭೂಮಿಯನ್ನು ಕೈಗಾರಿಕೆಗಳಿಗೆ ಪರಭಾರೆ ಮಾಡಿರುವುದು. ಕೊಪ್ಪಳ ಜಿಲ್ಲೆಯ ಕುಣಿಕೇರಿ ಗ್ರಾಮದ ಸರ್ವೆ ನಂ. 84/ಅ ನಡಿ 19 ಎಕರೆ 8 ಗುಂಟೆ ಹಾಗೂ 42/ಅ ನಂತೆ 35.23 ಎಕರೆ ಅರಣ್ಯ ಭೂಮಿಯನ್ನು ಅಕ್ರಮ-ಸಕ್ರಮ ಯೋಜನೆಯಡಿ ತಮಗೆ ಬೇಕಾದ ರೈತರಿಗೆ ನೀಡಿ ಕಾನೂನುಬಾಹಿರ ವಾಗಿ ಅದನ್ನು ಖಾಸಗಿ ಕಂಪನಿಗೆ ಪರಭಾರೆ ಮಾಡಿದೆ. ಅಕ್ರಮ-ಸಕ್ರಮ ಯೋಜನೆಯಡಿ ಪಡೆದ ಜಮೀನನ್ನು 15 ವರ್ಷಗಳ ಕಾಲ ಯಾರಿಗೂ ಪರಭಾರೆ ಮಾಡಬಾರದೆಂದಿದ್ದರೂ, ಅದೇ ಜಮೀನನ್ನು ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ.

ನೀರಾವರಿ ಕಾಮಗಾರಿಯ ತುಂಡುಗುತ್ತಿಗೆಯಲ್ಲಿ ದೊಡ್ಡ ಅವ್ಯವಹಾರ:

ಭದ್ರಾ ಮೇಲ್ದಂಡೆ ಏತ ನೀರಾವರಿ ಯೋಜನೆ(ಎರಡನೇ ಪ್ಯಾಕೇಜ್) ಗುತ್ತಿಗೆ ನೀಡುವಲ್ಲಿ ಮುಖ್ಯಮಂತ್ರಿ ಅಧಿಕಾರ ದುರುಪಯೋಗದಿಂದ ಮುಖ್ಯಮಂತ್ರಿ ಮಕ್ಕಳ ಕಂಪನಿಗಳು ಲಾಭ ಪಡೆದುಕೊಂಡಿವೆ. ಯಡಿಯೂರಪ್ಪ ಅವರು ಅಧ್ಯಕ್ಷರಾಗಿರುವ ಕರ್ನಾಟಕ ನೀರಾವರಿ ನಿಗಮವು ಆರ್ ಎನ್ ಎಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಮತ್ತು ಜ್ಯೋತಿ ಲಿಮಿಟೆಡ್ ಜಂಟಿ ಸಹಭಾಗಿತ್ವದ ಕಂಪನಿಗಳಿಗೆ ಭದ್ರಾ ಮೇಲ್ದಂಡೆ ಏತ ನೀರಾವರಿ ಯೋಜನೆಯಲ್ಲಿ ಗುತ್ತಿಗೆ ನೀಡುವಲ್ಲಿ ಅವ್ಯವಹಾರ ನಡೆಸಲಾಗಿದೆ. 2003-04ರಲ್ಲಿ ಈ ಯೋಜನೆಯ ಅಂದಾಜು ರೂ. 550 ಕೋಟಿ ಇದ್ದು 2008-09ರಲ್ಲಿ ಗುತ್ತಿಗೆ ನೀಡುವಾಗ ಈ ಯೋಜನೆಯ ಅಂದಾಜು ವೆಚ್ಚವನ್ನು ರೂ. 1,032 ಕೋಟಿಗೆ ಏರಿಸಲಾಗಿದೆ. ಇದಕ್ಕೆ ಪ್ರತಿಯಾಗಿ ಆರ್ ಎನ್ ಎಸ್ ಸಂಸ್ಥೆಗೆ ಸೇರಿದ ಮುರ್ಡೇಶ್ವರ ಪವರ್ ಕಾರ್ಪೋರೇಷನ್ ಲಿಮಿಟೆಡ್ (ಎಂಪಿಸಿಎಲ್) ಸಂಸ್ಥೆಯು ಮುಖ್ಯಮಂತ್ರಿಗಳ ಮಕ್ಕಳು ನಡೆಸುತ್ತಿರುವ ಧವಳಗಿರಿ ಪ್ರಾಪರ್ಟಿ ಡೆವಲಪರ್ಸ್ ಮತ್ತು ಸಹ್ಯಾದ್ರಿ ಹೆಲ್ತ್‌ಕೇರ್ ಅಂಡ್ ಡಯಾಗ್ನಾಸ್ಟಿಕ್ ಕಂಪನಿಗಳಿಗೆ ರೂ. 13 ಕೋಟಿ ನೀಡಿದೆ.

ಔಷಧ ಖರೀದಿಯಲ್ಲಿ ಅವ್ಯವಹಾರ:

ಕರ್ನಾಟಕ ರಾಜ್ಯ ಔಷಧ ಉಗ್ರಾಣ ಸೊಸೈಟಿಯಲ್ಲಿ 2009-10ರಲ್ಲಿ ಕೊನೆಯ 3 ತಿಂಗಳಲ್ಲಿ ಅವಶ್ಯಕತೆಗಿಂತ ಎರಡು ಪಟ್ಟು ಔಷಧವನ್ನು ಅವಶ್ಯವೇ ಇಲ್ಲದಿದ್ದ ಔಷಧವನ್ನು ಖರೀದಿಸಲಾಗಿದ್ದು, ಇದರಿಂದ ಸಂಸ್ಥೆಗೆ ರೂ. 50ಕೋಟಿ ನಷ್ಟವಾಗಿದೆ. ಇದರಲ್ಲಿ ಆರೋಗ್ಯ ಸಚಿವ ಶ್ರೀ ರಾಮುಲು ಭಾಗಿಯಾಗಿದ್ದಾರೆ ಎನ್ನಲಾಗಿದೆ.

ಭ್ರಷ್ಟಾಚಾರದ ಸೃಷ್ಟಿಕರ್ತ ಬಿಜೆಪಿಗೆ ತನಿಖೆಯೆಂದರೆ ಅಲರ್ಜಿ:

ರೂ. 50,000 ಕೋಟಿ ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರ ತನಿಖಾ ವರದಿ ಇನ್ನೇನೂ ಹೊರಬೀಳುವುದರಲ್ಲಿದೆ. ಬಿಬಿಎಂಪಿಯಲ್ಲಿ ಜರುಗಿರುವ 2000 ಕೋಟಿ ರೂಪಾಯಿಗಳ ಕಾಮಗಾರಿ ಸಂಕೇತ (ವರ್ಕ್‌ಕೋಡ್) ಹಗರಣದ ಕುರಿತು ಯಾವುದೇ ತನಿಖೆಗೂ ಸರ್ಕಾರ ಮುಂದಾಗಿಲ್ಲ. ಹೀಗೆ ಸೀರಿಯಲ್ ಕಿಲ್ಲರ್ ಮಾದರಿಯ ಸರಣಿಯೋಪಾದಿಯ ಹಗರಣಗಳಿಗೆ ಕಾರಣಕರ್ತವಾಗಿರುವ ಬಿಜೆಪಿ ಸರ್ಕಾರಕ್ಕೆ ತನಿಖೆಯೆಂದರೆ ಅಲರ್ಜಿ ಎನಿಸಿರುವುದು ಸಹಜವೇ ಆಗಿದೆ.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಬಹಿರಂಗ ಪಡಿಸುತ್ತಿರುವ ತಮ್ಮ ಮೇಲಿನ ಎಲ್ಲ ಆರೋಪಗಳಿಗೆ ಯಡಿಯೂರಪ್ಪನವರ ಉತ್ತರ ನಿಜಕ್ಕೂ ಎಂತಹವರನ್ನೂ ಬೇಸ್ತುಬೀಳಿಸುವಂತದ್ದು. ಎಚ್.ಡಿ. ಕುಮಾರಸ್ವಾಮಿಯವರೂ ಕೂಡ ಸ್ವಜನಪಕ್ಷಪಾತಿ ಹಾಗೂ ಲಂಚಕೋರ ಎಂಬುದಷ್ಟೆ ಯಡಿಯೂರಪ್ಪನ ಉತ್ತರವಾಗಿದೆ.

ನಿಷ್ಪಕ್ಷಪಾತ ತನಿಖೆಗೆ ಅಡ್ಡಗಾಲು ಹಾಕಿ ದಾರಿ ತಪ್ಪಿಸಲು ತಾವೇ ತಮಗೆ ಬೇಕಾದ ನಿವೃತ್ತ ನ್ಯಾಯಾಧೀಶರನ್ನು ನೇಮಿಸಿಕೊಂಡು ಆಯೋಗ ರಚಿಸಿಕೊಂಡು ತನಿಖೆಯ ನಾಟಕವಾಡು ಕಲೆ ಬಿಜೆಪಿ ಮತ್ತು ಯಡಿಯೂರಪ್ಪನವರಿಗೆ ಚೆನ್ನಾಗಿ ಕರಗತವಾಗಿದೆ. ಅವರು ಅಧಿಕಾರಕ್ಕೆ ಬಂದಾಗಿನಿಂದ ಅವರು ರಚಿಸಿದ ಆಯೋಗಗಳೆಷ್ಟು? ಅವುಗಳು ಸಲ್ಲಿಸಿದ ಅಂತಿಮ ವರದಿಯೇನು ಎಂಬುದು ಜನತೆಗೆ ಚೆನ್ನಾಗಿ ಮನವರಿಕೆಯಾಗುತ್ತಿದೆ.

JANASHAKTHI KANNADA VARA PATRIKE APRIL 03, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2010-12
Posted at MBC Bangalore GPO

ಅಮರರಾದ ಹುತಾತ್ಮ ಭಗತ್‌ಸಿಂಗ್ ಮತ್ತು ಸಂಗಾತಿಗಳು

ಮಾರ್ಚ್ 23, ಭಗತ್‌ಸಿಂಗ್, ಸುಖ್‌ದೇವ್, ರಾಜಗುರು ಅಮರರಾದ ದಿನ. ಬ್ರಿಟೀಷ್ ಸಾಮ್ರಾಜ್ಯಶಾಹಿ ವಿರುದ್ಧ ಮಾತ್ರವಲ್ಲದೇ, ಶೋಷಕ ಅಸಮಾನ ವ್ಯವಸ್ಥೆಯ ಬದಲಾವಣೆಯ ಕಣ್ಣೋಟವನ್ನು ಹರಡಲು ತಮ್ಮ ಬದುಕನ್ನೇ ಬಲಿದಾನಗೈದ ಈ ಸಂಗಾತಿಗಳು ಹುತಾತ್ಮರಾದ ಸನ್ನಿವೇಶದಲ್ಲೂ ತೋರಿದ ಧೀಮಂತಿಕೆ ಮನಸ್ಸು ಕಲಕುವಂತದ್ದು. ಕುಲದೀಪ್‌ನಯ್ಯರ್‌ರವರ 'ಹುತಾತ್ಮ ಭಗತ್‌ಸಿಂಗ್' ಪುಸ್ತಕ ಆಯ್ದ ಭಾಗವಿದು.



ಮಾರ್ಚ್ 23 : ಎಂದಿನಂತೆ ಅದೂ ಒಂದು ದಿನ. ರಾಜಕೀಯ ಕೈದಿಗಳು ಬೆಳಿಗ್ಗೆಯೇ ತಮ್ಮ ಸೆಲ್‌ಗಳಿಂದ ಹೊರಬಂದಿದ್ದರು. ಕತ್ತಲಾಗುವವರೆಗೂ ಅವರು ಸೆಲ್‌ಗಳಿಂದ ಹೊರಗಿರುತ್ತಿದ್ದರು. ಇವತ್ತು ಮಾತ್ರ ಸಂಜೆ 4 ರ ಹೊತ್ತಿಗೇ ವಾರ್ಡನ್ ಚರತ್‌ಸಿಂಗ್ ಕಾಣಿಸಿಕೊಂಡ ; ಎಲ್ಲರೂ ತಮ್ಮ ತಮ್ಮ ಸೆಲ್‌ಗಳನ್ನು ಸೇರಿಕೊಳ್ಳಬೇಕೆಂದು ಸೂಚಿಸಿದ. ಇದು ಎಲ್ಲರಲ್ಲಿ ಆಶ್ಚರ್ಯ ಹುಟ್ಟಿಸಿತು.

ಸೆಲ್ ಸೇರಲು ಇದು ಹೊತ್ತಲ್ಲ; ಬಹಳ ಬೇಗ ಆಯ್ತು. ಎಷ್ಟೋ ಸಲ ಅವರು ಸೂರ್ಯ ಮುಳುಗಿ ಎಷ್ಟೋ ಹೊತ್ತಾದರೂ ತಮ್ಮ ಸೆಲ್‌ಗಳನ್ನು ಸೇರುತ್ತಿರಲಿಲ್ಲ. ವಾರ್ಡನ್ ಆಕ್ಷೇಪಣೆ ಮಾಡಿದರೂ ಅವರು ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಈ ಬಾರಿ ಮಾತ್ರ ವಾರ್ಡನ್ ಬಹಳ ಕಟ್ಟುನಿಟ್ಟಾಗಿದ್ದ, ಯಾಕೆಂಬುದನ್ನು ಆತ ಹೇಳಲಿಲ್ಲ. ಮೇಲಿನಿಂದ ಆರ್ಡರ್ ಎಂದೇನೋ ಅಸಂಬದ್ಧವಾಗಿ ಗೊಣಗಿದ.

ಅವನು ಕೈದಿಗಳ ಪ್ರೀತಿಪಾತ್ರ ವ್ಯಕ್ತಿ. ಕೈದಿಗಳು ತಮ್ಮ ಪಾಡಿಗೆ ತಾವಿರಲು ಆತ ಬಿಡುತ್ತಿದ್ದ. ಅವರು ಓದುತ್ತಿರುವುದೇನು ಎಂಬುದನ್ನೂ ಆತ ಎಂದೂ ಚೆಕ್ ಮಾಡುತ್ತಿರಲಿಲ್ಲ. ಆಂಗ್ಲರ ವಿರುದ್ಧದ ಕೆಲವು ಪುಸ್ತಕಗಳನ್ನು ಜೈಲಿನೊಳಕ್ಕೆ ಕದ್ದು ತರಲಾಗುತ್ತಿತ್ತು. ಆತ ಆ ಪುಸ್ತಕಗಳನ್ನು ಕಸಿದು ಇಟ್ಟುಕೊಳ್ಳಬಹುದಾಗಿತ್ತು. ಆದರೆ ಎಂದೂ ಆತ ಹಾಗೆ ಮಾಡಿದವನಲ್ಲ. ಕೈದಿಗಳು ಎಳೆಯ ಮಕ್ಕಳಲ್ಲ. ಗಾಢವಾದ ರಾಜಕೀಯ ತಿಳುವಳಿಕೆಯನ್ನು ಪಡೆದವರು ಎಂಬ ಅರಿವು ಆತನಿಗಿತ್ತು. ಆ ಪುಸ್ತಕಗಳು ಜೈಲಿನಲ್ಲಿ ತೊಂದರೆಯನ್ನು ಹುಟ್ಟುಹಾಕುವಂಥ ಕೆಲಸವನ್ನು ಕೈದಿಗಳಿಂದ ಮಾಡಿಸಲಾರವು.

ತಂದೆತಾಯಿಗಳು ನೋಡಿಕೊಳ್ಳುವ ರೀತಿಯಲ್ಲಿ ತಮ್ಮನ್ನು ಈ ಚರತ್‌ಸಿಂಗ್ ನೋಡಿಕೊಳ್ಳುತ್ತಿದ್ದ: ಇದು ಅವರನ್ನು ಕಲಕಿತ್ತು. ಆತನನ್ನು ಅವರು ಗೌರವದಿಂದ ಕಾಣುತ್ತಿದ್ದರು; ಚರತ್‌ಸಿಂಗ್‌ಜೀ ಎಂದು ಕರೆಯುತ್ತಿದ್ದರು. ಸೆಲ್‌ಗಳಿಗೆ ಹಿಂತಿರುಗಬೇಕೆಂದು ಚರತ್‌ಸಿಂಗ್ ಹೇಳಿದಾಗ ಏನೋ ಪ್ರಬಲವಾದ ಕಾರಣವೇ ಇರಬೇಕೆಂದು ಅವರು ಊಹಿಸಿದ್ದರು. ಎಲ್ಲರೂ ತಂತಮ್ಮ ಸೆಲ್‌ಗಳನ್ನು ಸೇರಿಕೊಂಡರು. ಅವರೆಲ್ಲ ಸೆಲ್‌ಗಳನ್ನು ಸೇರಿಕೊಂಡ ಮೇಲೆ ಸೆಲ್‌ಗಳಿಗೆ ಬೀಗ ಹಾಕುತ್ತಿದ್ದುದು ಸಂಜೆ ಏಳು ಗಂಟೆಗೇ. ಇವತ್ತು ಮೂರು ಗಂಟೆ ಮೊದಲೇ ಅವರೆಲ್ಲ ತಮ್ಮ ಸೆಲ್‌ಗಳಲ್ಲಿದ್ದರು. ಇವತ್ತು ಯಾಕೆ ಹೀಗೆ? ಕುತೂಹಲ ತಡೆಯದೆ ಸರಳುಗಳ ಹಿಂದಿನಿಂದ ಇಣುಕಿ ನೋಡಿದರು. ಕ್ಷೌರಿಕ ಬರ್ಕತ್ ಒಂದಾದ ನಂತರ ಒಂದು ಸೆಲ್‌ಗಳಿಗೆ ಹೋಗಿ ಬರುವುದನ್ನು ಅವರು ಕಂಡರು. ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳನ್ನು ಇವತ್ತು ರಾತ್ರಿ ಗಲ್ಲಿಗೇರಿಸಲಾಗುವುದೆಂಬ ಸುದ್ದಿಯನ್ನು ಆತ ಪಿಸುದನಿಯಲ್ಲಿ ಬಿತ್ತರಿಸುತ್ತಿದ್ದ. ಭಗತ್‌ಸಿಂಗ್‌ನ ಬಾಚಣಿಗೆ, ಪೆನ್ನು, ಗಡಿಯಾರ ಅಥವಾ ಇನ್ನಾವುದೇ ವಸ್ತುವನ್ನು ಬರ್ಕತ್ ತಮಗೆ ತಂದುಕೊಡುತ್ತಾನೆಯಾ? ಅದನ್ನು ತಾವು ಇಟ್ಟುಕೊಳ್ಳಬಹುದು.



ಯಾವಾಗಲೂ ನಗೆ ಮುಖದಿಂದಿರುತ್ತಿದ್ದ ಬರ್ಕತ್ ತೀರ ದು:ಖಿತನಾಗಿರುವುದು ಎದ್ದು ಕಾಣಿಸುತ್ತಿತ್ತು. ಆತ ಭಗತ್‌ಸಿಂಗ್‌ನ ಸೆಲ್‌ಗೆ ಹೋಗಿ ಬಂದ. ಒಂದು ಪೆನ್ನು, ಒಂದು ಬಾಚಣಿಕೆಯನ್ನು ಅಲ್ಲಿಂದ ತಂದ. ಈ ವಸ್ತುಗಳು ತನಗೆ ಬೇಕೆಂದು ಎಲ್ಲರೂ ಬೇಡಿಕೆಯನ್ನು ಮುಂದಿಟ್ಟರು. ಕೊನೆಗೆ ಲಾಟರಿ ಎತ್ತಲಾಯಿತು. ಹದಿನೇಳರಲ್ಲಿ ಇಬ್ಬರು ಮಾತ್ರ ಭಾಗ್ಯವಂತರು. ತಲಾ ಒಂದೊಂದು ವಸ್ತುಗಳನ್ನು ಪಡೆದುಕೊಂಡರು.

ಯಾರೊಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ. ಮೌನ ಕವಿದಿತ್ತು. ತಮ್ಮ ಸೆಲ್‌ಗಳ ಹೊರಗಿನ ದಾರಿಯ ಕಡೆಗೇ ಎಲ್ಲರ ದೃಷ್ಟಿ ನೆಟ್ಟವು: ಈ ದಾರಿಯಲ್ಲಿ ಭಗತ್‌ಸಿಂಗ್ ಬರಬಹುದೆಂಬ ಆಶೆಯಿಂದ. ಒಂದು ದಿನ ಈ ಮಾರ್ಗದಲ್ಲಿ ಭಗತ್‌ಸಿಂಗ್ ನಡೆದು ಬಂದದ್ದು ಅವರ ಸ್ಮೃತಿಪಟಲದಲ್ಲಿ ಹಾದುಹೋಯಿತು. ಒಬ್ಬ ರಾಜಕೀಯ ಕೈದಿ ಕೇಳಿಯೇಬಿಟ್ಟ: 'ಕೋರ್ಟಿನಲ್ಲಿ ನೀವು ಯಾಕೆ ನಿಮ್ಮನ್ನು ರಕ್ಷಿಸಿಕೊಳ್ಳಲಿಲ್ಲ?' 'ನಾವು ಒಂದು ಧ್ಯೇಯವನ್ನು ಪ್ರತಿನಿಧಿಸುತ್ತಿದ್ದೇವೆ; ಹೀಗಾಗಿ ನಾವು ಸಾಯಲೇಬೇಕು. ನಮ್ಮ ಸಾವಿನಿಂದ ಮಾತ್ರ ಈ ಧ್ಯೇಯ ಬಲಗೊಳ್ಳುತ್ತದೆ. ಕೋರ್ಟಿನಲ್ಲಿ ನಮ್ಮನ್ನು ರಕ್ಷಿಸಿಕೊಳ್ಳುವುದರಿಂದ ಅಲ್ಲ'-ಎಂದು ಭಗತ್‌ಸಿಂಗ್ ಉತ್ತರಿಸಿದ್ದ. ಆ ಮೂವರ ಒಂದು ಕ್ಷಣದ ದರ್ಶನಕ್ಕಾಗಿ ಇವರೆಲ್ಲ ಉತ್ಸುಕರಾಗಿ ಕಾದರು: ಅವರು ನಡೆದುಬರುವ ಸದ್ದೇನಾದರೂ ಕೇಳಬಹುದೇನೋ ಎಂದು ಎಲ್ಲರೂ ಕಿವಿ ನಿಮಿರಿಸಿದರು.

ಗಲ್ಲಿಗೇರಿಸುವುದಕ್ಕೆ ಎರಡು ಗಂಟೆ ಮೊದಲು ಭಗತ್‌ಸಿಂಗ್‌ನ ಲಾಯರ್ ಪ್ರಾಣ್‌ನಾಥ್ ಮೆಹ್ತಾ ಅವರಿಗೆ ಭೇಟಿಯ ಅವಕಾಶ ನೀಡಲಾಯಿತು. ತನ್ನ ಕಕ್ಷೀದಾರರ ಕೊನೆಯ ಬಯಕೆಗಳನ್ನು ತಿಳಿಯಲು ತಮಗೆ ಭೇಟಿಯ ಅವಕಾಶ ನೀಡಬೇಕೆಂದು ಮೆಹ್ತಾ ಕೇಳಿಕೊಂಡಿದ್ದರು; ಅದಕ್ಕೆ ಒಪ್ಪಿಗೆ ನೀಡಲಾಗಿತ್ತು.

ಬೋನಿನೊಳಗಿನ ಸಿಂಹದಂತೆ ಭಗತ್‌ಸಿಂಗ್ ತನ್ನ ಸೆಲ್ಲಿನಲ್ಲಿ ಅತ್ತಿಂದಿತ್ತ, ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದ. ಮೆಹ್ತಾ ಅವರನ್ನು ದೊಡ್ಡ ಮಂದಹಾಸದಿಂದಲೇ ಬರಮಾಡಿಕೊಂಡ. ತಾನು ಕೇಳಿದ್ದ 'ದಿ ರೆವಲ್ಯೂಷನರಿ ಲೆನಿನ್' ಪುಸ್ತಕವನ್ನು ತಂದಿದ್ದೀರಾ? ಎಂದು ಕೇಳಿದ. ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಈ ಪುಸ್ತಕದ ವಿಮರ್ಶೆಯನ್ನು ಓದಿದ್ದ ಭಗತ್, ಈ ಪುಸ್ತಕವನ್ನು ತಂದುಕೊಡುವಂತೆ ಮೆಹ್ತಾ ಅವರಿಗೆ ಸೂಚನೆಯೊಂದನ್ನು ಕಳುಹಿಸಿದ್ದ.

ಮೆಹ್ತಾ ಈ ಪುಸ್ತಕವನ್ನು ಕೊಟ್ಟರು. ಪುಸ್ತಕ ಸಿಕ್ಕಿದ್ದೇ ಭಗತ್‌ಸಿಂಗ್ ಖುಷಿಯಿಂದ ಓದುವುದಕ್ಕೆ ಶುರುಮಾಡಿದ; ತನಗಿನ್ನು ಹೆಚ್ಚು ಸಮಯ ಉಳಿದಿಲ್ಲ ಎಂಬ ಅರಿವು ಆತನಿಗಿತ್ತು. ರಾಷ್ಟ್ರಕ್ಕೆ ಏನಾದರೂ ಸಂದೇಶ ನೀಡುವುದಿದೆಯಾ? ಎಂದು ಮೆಹ್ತಾ ಕೇಳಿದರು. ಪುಸ್ತಕದಿಂದ ದೃಷ್ಟಿಯನ್ನು ತೆಗೆಯದೆ ಭಗತ್ ಹೇಳಿದ : 'ಸಾಮ್ರಾಜ್ಯಶಾಹಿಗೆ ಧಿಕ್ಕಾರ', 'ಕ್ರಾಂತಿ ಚಿರಾಯುವಾಗಲಿ' ಈ ಎರಡು ಘೋಷಣೆಗಳನ್ನು ತಿಳಿಸಿ.

ಮೆಹ್ತಾ : ಇವತ್ತು ಹೇಗಿದ್ದೀಯಾ?

ಭಗತ್‌ಸಿಂಗ್ : ಎಂದಿನಂತೆ, ಸುಖವಾಗಿ

ಮೆಹ್ತಾ : ನಿನಗೇನಾದರೂ ಆಶೆ ಇದೆಯೆ?

ಭಗತ್‌ಸಿಂಗ್ : ಹೌದು, ಈ ದೇಶದಲ್ಲಿ ಮತ್ತೆ ಹುಟ್ಟುವ ಆಶೆ ಇದೆ: ಮತ್ತೆ ಹುಟ್ಟಿದರೆ ರಾಷ್ಟ್ರದ ಸೇವೆ ಮಾಡಬಹುದು.

ಪಂಡಿತ್ ನೆಹರೂ, ಸುಭಾಷ್‌ಚಂದ್ರಭೋಸ್ ಅವರಿಗೆ ತನ್ನ ನಮಸ್ಕಾರ ತಿಳಿಸುವಂತೆ ಭಗತ್ ಹೇಳಿದ. ಅವರಿಬ್ಬರೂ ಈ ಪ್ರಕರಣದಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದ್ದರು.

ಮೆಹ್ತಾ ರಾಜಗುರುವನ್ನೂ ಭೇಟಿ ಮಾಡಿದರು. 'ಶೀಘ್ರದಲ್ಲಿಯೇ ನಾವು ಭೇಟಿಯಾಗುತ್ತೇವೆ' ಈ ವಾಕ್ಯದ ಅರ್ಥವನ್ನು ಅರಿತವನಂತೆ ರಾಜಗುರು ಹೇಳಿದ. ಕೆಲವು ತಿಂಗಳ ಹಿಂದೆ ಮೆಹ್ತಾ ನೀಡಿದ್ದ ಕೇರಂ ಬೋರ್ಡನ್ನು ಜೈಲರಿಂದ ಹಿಂದಕ್ಕೆ ಪಡೆಯಬೇಕೆಂದು ಸುಖದೇವ್ ನೆನಪಿಸಿದ.

ಮೆಹ್ತಾ ಹೋದ ಕೂಡಲೇ ಅಧಿಕಾರಿಗಳು ಈ ಮೂರೂ ಜನರಿಗೆ ಹನ್ನೊಂದು ಗಂಟೆ ಮೊದಲೇ ಗಲ್ಲು ಬದಲಾಗಿ, ಈ ದಿನ ಸಂಜೆ 7 ಕ್ಕೆ ನಿಗದಿಯಾಗಿತ್ತು. ಭಗತ್‌ಸಿಂಗ್ ಈ ಪುಸ್ತಕದ ಕೆಲವು ಪುಟಗಳನ್ನು ಮಾತ್ರ ಓದಿದ್ದ.

ಒಂದು ಅಧ್ಯಾಯವನ್ನಾದರೂ ಮುಗಿಸುವುದಕ್ಕೆ ಅವಕಾಶ ಕೊಡುತ್ತೀರಾ? ಎಂದು ಭಗತ್‌ಸಿಂಗ್ ಕೇಳಿದ. ಇದಕ್ಕೆ ಉತ್ತರವನ್ನು ಕೊಡುವ ಬದಲು ಅವರು ನೇಣುಗಂಬದ ಕಡೆಗೆ ನಡೆಯಲು ಸೂಚಿಸಿದರು.

(ಮುಂದಿನ ವಾರಕ್ಕೆ)

'ಹುತಾತ್ಮ ಭಗತ್‌ಸಿಂಗ್' ಪುಸ್ತಕ
ಲೇ : ಕುಲದೀಪ್‌ನಯ್ಯರ್ — ಕನ್ನಡಕ್ಕೆ : ಜಿ.ಪಿ. ಬಸವರಾಜ್
ಪ್ರ : ಲೋಹಿಯಾ ಪ್ರಕಾಶನ — ಬೆಲೆ : 60 ರೂ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH